**THE BOOK WAS DRENCHED**

UNIVERSAL LIBRARY
OU_200091
UNIVERSAL LIBRARY

ಪ್ರಥಮ ಮುದ್ರಣ ೧೯೩೭.

ಸರ್ವ ಸ್ವಾಮ್ಯವೂ ಗ್ರಂಥಕರ್ತೃವಿನದು.

ಪುಸ್ತಕ ದೊರೆಯುವ ಸ್ಥಳ:
**ಸತ್ಯಶೋಧನ ಪುಸ್ತಕ ಭಂಡಾರ**
ಕೋಟೆ, ಬೆಂಗಳೂರು ನಗರ.

ಮುದ್ರಕರು:
**ಸುಬೋಧ ಮುದ್ರಣಾಲಯ**
ಬೆಂಗಳೂರು

# ಮುನ್ನುಡಿ

ಈಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯವು ಬಹುಮುಖವಾಗಿ ವೃದ್ಧಿ ಹೊಂದುತ್ತಿದೆ. ಕನ್ನಡಿಗರೆಲ್ಲರೂ ಇದಕ್ಕಾಗಿ ಸಂತೋಷಿಸಬಹುದಾಗಿದೆ; ಅವರು ಸಂತೋಷಿಸಲೂ ಬೇಕು. ನಮ್ಮ ತಾಯಿನುಡಿಯು ಇನ್ನೂ ಅಭಿವೃದ್ಧಿಸ್ಥಿತಿಗೆ ಬಂದು ಇನ್ನೂ ಸಿರಿಮೆಯನ್ನು ಪಡೆಯಬೇಕೆಂಬುದೇ ಕನ್ನಡಿಗರಾದ ನಮ್ಮೆಲ್ಲರ ಹಾರೈಕೆ. ಈ ಹಾರೈಕೆಯು ಈಡೇರಬೇಕಾದರೆ, ಕನ್ನಡದ ಸೇವೆಗಾಗಿ ದುಡಿಯುವವರ ಸಂಖ್ಯೆ ದಿನದಿನವೂ ಹೆಚ್ಚಾಗುತ್ತ ಬರಬೇಕು;

ಈ ದೃಷ್ಟಿಯಿಂದ, ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯಲು ಹರ್ಷಿಸುತ್ತೇನೆ. ಸಾಮಾನ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿ ಓದಿದ ಕಥೆಗಳ ಆಧಾರದಮೇಲೆ ಬರೆದ ಕಥೆಗಳೇ ಹೆಚ್ಚಾಗಿರುವುದು ಇಂದಿನ ಸನ್ನಿವೇಶ. ಆದಕಾರಣ ಗ್ರಂಥಕರ್ತರಾದ ಶ್ರೀಮಾನ್ ಸಿ. ಕೆ. ನಾಗರಾಜಯ್ಯನವರು ಸ್ವತಂತ್ರವಾಗಿ ಈ ಕಥೆಗಳನ್ನು ಬರೆದಿರುವುದಾಗಿ ಹೇಳಿದುದನ್ನು ಕೇಳಿ ನನ್ನ ಸಂತೋಷವು ಮತ್ತಷ್ಟು ಹೆಚ್ಚಾಯಿತು. ಇಂಗ್ಲಿಷಿನಲ್ಲಿರುವ ಅಥವಾ ಇತರ ಭಾಷೆಯಲ್ಲಿರುವ ಉತ್ತಮ ಗ್ರಂಥಗಳನ್ನು ಭಾಷಾಂತರ ಮಾಡುವುದು ಅಥವಾ ಅನುವಾದ ಮಾಡುವುದು ಕನ್ನಡಕ್ಕೆ ಅಮೋಘಸೇವೆಯೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಆದರೆ ಇತರ ಭಾಷೆಗಳ ಕಥೆಗಳಲ್ಲಿ ಕೈಗೆ ಸಿಕ್ಕಿದವುಗಳನ್ನು ಕನ್ನಡದಲ್ಲಿ ಅನುವಾದ ಮಾಡುವ ಹುರುಡಿನಲ್ಲಿ, ನಮ್ಮ ಸಮಾಜಕ್ಕೆ ಸಲ್ಲದ ಪ್ರಮಾಣದಲ್ಲಿ ಅದು ಹೊಲಸಿನಿಂದ ತುಂಬಿರುವಂತೆ ಅದನ್ನು ಚಿತ್ರಿಸುವ ಪ್ರಯತ್ನವು ಈಗ ವಿಶೇಷವಾಗಿ ನಡೆಯುತ್ತಿದೆ. ಹಲವು ಕಥೆಗಳನ್ನು ಚಿಕ್ಕವರ ಕೈಗೆ ಕೊಡುವುದಕ್ಕೇ ಭಯವಾಗುತ್ತದೆ. ಕಥೆಗಳನ್ನು ಬರೆಯುವವರ ಉತ್ಸಾಹವನ್ನು ಶ್ಲಾಘಿಸಬೇಕಾದುದು ಆವಶ್ಯಕವಾದರೂ ಈ ಬಗೆಯ ವಿಷಮಪರಿಣಾಮಕ್ಕಾಗಿ ವಿಷಾದಪಡದೆ ಸುಮ್ಮನಿರುವುದು ಸಾಧ್ಯವಿಲ್ಲ. ಸಮಾಜದಲ್ಲಿರುವ ದೋಷಗಳನ್ನೆತ್ತಿ ತೋರಿಸುವುದೂ

ಸಾಹಿತ್ಯದ ಕೆಲಸವಲ್ಲವೆ?—ಎಂಬ ಪ್ರಶ್ನೆಯೂ ಹುಟ್ಟಬಹುದು. ಆದರೆ ನಮ್ಮ ಸಮಾಜವನ್ನೇ ಪರಿಶೀಲಿಸಿ ಅದರಿಂದಲೇ ಸನ್ನಿವೇಶಗಳನ್ನು—ಊಹೆಯಿಂದ ಕಲ್ಪಿಸಿಕೊಳ್ಳದೆ ಸಮಾಜದಲ್ಲಿ ನಿಜವಾಗಿಯೂ ಇರುವ ಸನ್ನಿವೇಶಗಳನ್ನು—ಆರಿಸಿಕೊಂಡು ಅವುಗಳ ಆಧಾರದ ಮೇಲೆ ಕಥೆಗಳನ್ನು ಬರೆದರೆ, ಅಥವಾ ಹೊರದೇಶಗಳ ಕಥೆಗಳನ್ನೇ ಅನುವಾದಿಸಿದರೂ ನಮ್ಮ ಸಮಾಜದ ಸ್ಥಿತಿಗೆ ಹೊಂದುವ ಸನ್ನಿವೇಶಗಳ ಆಧಾರದ ಮೇಲೆ ಕಥೆಗಳನ್ನು ಬರೆದರೆ ನಿಜವಾದ ಸಾಹಿತ್ಯಸೇವೆಯಾದೀತು.

ಈ ಸಂಗ್ರಹದಲ್ಲಿ ಐದು ಕಥೆಗಳಿವೆ. ಇವುಗಳನ್ನು ಬರೆದು ಕನ್ನಡ ನುಡಿಯ ಸೇವೆಮಾಡಿರುವ ಶ್ರೀಮಾನ್ ಸಿ. ಕೆ. ನಾಗರಾಜರಾಯರು ಉತ್ಸಾಹಿಗಳಾದ ತರುಣರು. ಅವರು ಬರೆದಿರುವ ಈ ಐದು ಕಥೆಗಳೂ ಸ್ವಾರಸ್ಯವಾಗಿವೆ. ಕೆಲವು ಚಿತ್ರಗಳು ಹೃದಯಂಗಮವಾಗಿವೆ. ಶೈಲಿಯು ಸರಳವಾಗಿದೆ. ಕೆಲವೆಡೆಗಳಲ್ಲಂತು, ಮಾತುಗಳು ಹೃದಯವನ್ನು ಮಿಡಿಯುವಷ್ಟು ಚೆನ್ನಾಗಿವೆ. ಸಹೃದಯರಾದ ಕನ್ನಡಿಗರು ಈ ಆರಂಭಪ್ರಯತ್ನದ ವಿಷಯದಲ್ಲಿ ಆದರತೋರಿ ಪ್ರೋತ್ಸಾಹಿಸಿದರೆ ಮುಂದೆ ಈ ಗ್ರಂಥಕರ್ತರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲುವುದರಲ್ಲಿ ಸಂದೇಹವಿಲ್ಲ.

ಬೆಂಗಳೂರು,
ತಾ|| ೧—೧೧—೧೯೩೭

**ಸಿ. ಕೆ. ವೆಂಕಟರಾಮಯ್ಯ**

# ಕಾಡುಮಲ್ಲಿಗೆ

## ವಿವರ


| ಕತೆ | ಪುಟ |
|---|---|
| ೧. ಕಾಡುಮಲ್ಲಿಗೆ | ಒಂದು |
| ೨. ಇನ್ನೆಲ್ಲಿಯರಿಪೇರಿ! | ಒಂಬತ್ತು |
| ೩. ಬಿಡಿಹೂ | ಇಪ್ಪತ್ತೊಂದು |
| ೪. ಅಂದಿನಿಂದ | ಮೂವತ್ತೇಳು |
| ೫. ಕಾರಣಕರ್ತರಾರು ? | ಐವತ್ತೊಂದು |

# ಅರಿಕೆ

ಈ 'ಕಾಡುಮಲ್ಲಿಗೆ'ಗೆ ಹಿರಿಯರೊಬ್ಬರ ಆಶೀರ್ವಾದವು ಬೇಕೆಂಬ ನನ್ನ ಮನದಲ್ಲಿ ಹುಟ್ಟಿದ ಆಸೆಯನ್ನು ಪೂರ್ಣಮಾಡಿ ತಮ್ಮ ಅಮೋಘವಾದ ಮುನ್ನುಡಿಯನ್ನು ಬರೆದುಕೊಟ್ಟುದಕ್ಕೆ, ಮೈಸೂರು ಸರ್ಕಾರದ ಕನ್ನಡ ಟ್ರಾನ್ಸ್ಲೇಟರೂ ಉತ್ತಮ ಸಾಹಿತಿಗಳೂ ಆದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್ಎಲ್.ಬಿ., ಇವರಿಗೆ ನಾನು ಚಿರಋಣಿ.

ಈ ಕತೆಗಳು ಪುಸ್ತಕರೂಪದಲ್ಲಿ ಬರಲು ಸಹಾಯಮಾಡಿ ಸಲಹೆಗಳನ್ನು ಕೊಟ್ಟು ನೆರವಾದ ಸೋದರ ತರುಣ ಕತೆಗಾರರೂ, ನನ್ನ ಮಿತ್ರರೂ ಆದ ಶ್ರೀಮಾನ್ ಎನ್. ರಂಗಸ್ವಾಮಿ ಐಯಂಗಾರ್ ಬಿ.ಎಸ್‌ಸಿ., ಬಿ.ಟಿ., ಇವರಿಗೂ ಮುದ್ರಣಕ್ಕೆ ಅನುಕೂಲವಾಗುವಂತೆ ಪ್ರತಿಮಾಡಿಕೊಟ್ಟ ನನ್ನ ಸಹಧರ್ಮಿಣಿ ಸೌ|| ರಾಜಮಣಿಗೂ, ಇದರಲ್ಲಿನ ಕೆಲವು ಕತೆಗಳು ಮುದ್ರಿವಾಗಿರುವ ಪತ್ರಿಕೆಗಳ ಸಂಪಾದಕರುಗಳಿಗೂ, ಮತ್ತು ಮುದ್ರಣಕಾರ್ಯವನ್ನು ಬೇಗನೆ ಮುಗಿಸಿಕೊಟ್ಟ ಸುಬೋಧ ಮುದ್ರಣಾಲಯದ ಶ್ರೀಯುತರಾದ ಎಂ. ರಾಮರಾವ್ ಮತ್ತು ಬಿ. ರಂಗನಾಥರಾವ್ ಇವರುಗಳಿಗೂ ನಾನು ಕೃತಜ್ಞನಾಗಿದ್ದೇನೆ.

**೫೨, ರತ್ನವಿಲಾಸ ರಸ್ತೆ, ಬಸವನಗುಡಿ,**<br>**ಬೆಂಗಳೂರು ನಗರ**<br>**ಈಶ್ವರಸಂವತ್ಸರದ ದೀಪಾವಳಿ**

**ಸಿ. ಕೆ. ನಾಗರಾಜರಾವ್.**

# ಕಾಡುಮಲ್ಲಿಗೆ

"Full many a flower is born to blusn unseen
And waste its sweetness on the desert air"
—*Thomas Gray.*

ಭಾನುವಾರ ಸಂಜೆ ನಾಲ್ಕುಘಂಟೆಯ ಹೊತ್ತಿನಲ್ಲಿ ಹೊಲೆಯನೊಬ್ಬನು, "ಏನ ಬೇಡಲಿ ನಿನ್ನ ಬಳಿಗೆ ಬಂದು" ಎನ್ನುವ ಪುರಂದರದಾಸರ ಕೀರ್ತನೆಯನ್ನು ಮೆಲುದನಿಯಲ್ಲಿ ಹಾಡುತ್ತಾ ಕಣ್ಣಾಸ್ಪತ್ರೆಯಿಂದ ಬಸವನಗುಡಿಯ ಕಡೆಗೆ ಬರುವ ರಸ್ತೆಯಲ್ಲಿ ನಿಧಾನವಾಗಿ ಬರುತ್ತಿದ್ದನು. ಅವನು ಶಂಕರಯ್ಯನವರ ಹಾಲಿನ ಬಳಿ ಬಂದೊಡನೆಯೇ, ಹಾಲಿನಲ್ಲಿ ಹಾಡುತ್ತಿದ್ದ ಸುಪ್ರಸಿದ್ಧ ಕೃಷ್ಣಭಾಗವತರ ತೋಡಿಯ ರಾಗದ ಆಲಾಪನೆಯನ್ನು ಕೇಳುತ್ತಲೇ ರಸ್ತೆಯಲ್ಲಿಯೇ ಸ್ವಲ್ಪ ಹೊತ್ತು ನಿಂತನು. ಅವನು ಬಹುದೂರದಲ್ಲಿ ಇದ್ದುದರಿಂದ ಆಲಾಪನೆಯು ಅಸ್ಪಷ್ಟವಾಗಿ ಕೇಳಿಸಿತು. ಅದನ್ನು ಸರಿಯಾಗಿ ಕೇಳೋಣವೆಂದು ಅವನಿಗೆ ಆಸೆ. ಆದುದರಿಂದ ಹಾಲಿನ ಬಳಿ ಬಂದನು.

ಬೆಂಗಳೂರಿನ ಥಿಯಸಾಫಿಕಲ್ ಸೊಸೈಟಿಯ ಬಳಿ ಇರುವ ಸಂಗೀತ ಮಂದಿರದ ಹೆಸರೇ, ಪ್ರಸಿದ್ಧವಾದ ಸಂಗೀತ ಕಛೇರಿಗಳಾಗುವ 'ಶಂಕರಯ್ಯ ಹಾಲ್'. ಅದು ವಿಸ್ತಾರವಾದ ಭವನ. ಬಹು ಕಿಟಕಿಗಳಿಂದ ತುಂಬಿದೆ. ಸುತ್ತಲೂ ಮಾಮರಗಳು. ಭಾಗ್ಯವಂತರು ಹಣಕೊಟ್ಟು ಒಳಗೆ ಸುಖಾಸನದಲ್ಲಿ ಕುಳಿತು ಸಂಗೀತ ಕೇಳುತ್ತಿದ್ದರೆ, ಸಂಗೀತಕಲಾದೇವಿಯಾರಾಧಕರಾದ ನಿರ್ಗತಿಕರು ಮಾಮರಗಳ ಮರೆಯಲ್ಲಿ ನಿಂತು, ಸಂಗೀತ ಪಾನಮಾಡುತ್ತಿದ್ದರು. ನಡುನಡುವೆ ಪೋಲೀಸರನ್ನು ನೋಡಿದೊಡನೆಯೇ ಮಾಮರಗಳ ಬಳಿ ನಿಂತಿದ್ದವರು, ಪಾಪ! ಪೆಚ್ಚುಮೋರೆ ಹಾಕಿಕೊಂಡು ಹೋಗುವರು.

ಆ ಹೊಲೆಯ ಮೊದಲು ಬಹುದೂರದಲ್ಲಿ ನಿಂತನು. ಭಾಗವತರ ಸಂಗೀತ ಅವನ ಹೃದಯವನ್ನು ನರ್ತಿಸುವಂತೆ ಮಾಡುತ್ತಿತ್ತು. ಅವನಿಗೆ

ಇಹಲೋಕದ ಪ್ರಜ್ಞೆಯೇ ಇಲ್ಲ. ಅವನ ದೇಹ ಇದ್ದಕ್ಕಿದ್ದಂತೆಯೇ ಭಾಗ ವತರು ಹಾಡುತ್ತಿದ್ದ ಕಿಟಕಿ ಬಳಿ ಬಂದಿತು. ಅಲ್ಲಿ ನಿಂತು ಅವನು ಪೂರ್ಣ ಮನಸ್ಸಿನಿಂದ ಸಂಗೀತವನ್ನು ಆಲಿಸುತ್ತಿದ್ದನು.

ಆಲಾಪನೆ ಇನ್ನೂ ನಡೆಯುತ್ತಿತ್ತು. ಹೊಲೆಯನು ಹಾಗೆಯೇ ಸ್ತಬ್ಧ ನಾಗ ಕಿಟಕಿಯ ಕಂಬಿಯನ್ನು ಹಿಡಿದು ನಿಂತ. ಆ ಸಂಗೀತದ ಭರದಲ್ಲಿ ಅವನಿಗೆ ಸ್ಮೃತಿ ತಪ್ಪಿತು; ಕಣ್ಣಿನಲ್ಲಿ ಆನಂದಬಾಷ್ಪವು ಬರತೊಡಗಿತು. ಭಾಗವತರು ಹಾಡುತ್ತಲೇ ಒಂದಾವರ್ತಿ ಹೊಲೆಯನನ್ನು ನೋಡಿದರು. ಅವ ರಿಗೂ ತಲೆದೂಗುತ್ತಿದ್ದ ಹೊಲೆಯನನ್ನು ನೋಡಿ ಆನಂದವಾಯಿತು. ಅವರು ಮತ್ತೆ ಆಲಾಪನೆಯಲ್ಲಿ ಮಗ್ನರಾದರು.

ಸಭಿಕರೆಲ್ಲರೂ ಅವರ ಸಂಗೀತವನ್ನು ಮೈಮರೆತು ಕೇಳುತ್ತಿದ್ದರು. ಹೊಲೆಯನಿಗೂ ಆ ಸಂಗೀತದ ಮಾಧುರ್ಯದಮೃತವನ್ನು ಸ್ವೇಚ್ಛೆಯಾಗಿ ಪಾನಮಾಡಿ ಮೈಮರೆವು ಬಂದಿತ್ತು. ಆ ಮಧುರವಾದ ಸಂಗೀತದ ಇಂಪಿ ನಿಂದ ಹೊಲೆಯನ ಆತ್ಮವು ಅಪಾರವಾದ ಸಂತೋಷಸಾಗರದಲ್ಲಿ ಈಜಾಡು ತ್ತಿತ್ತು.

ಇವನ ಕಡೆ ಒಬ್ಬ ಪೋಲೀಸನ ದೃಷ್ಟಿ ಬಿತ್ತು. ಅವನು ಹೊಲೆಯುನ ಹತ್ತಿರಕ್ಕೆ ಬಂದು, "ಏ! ಇತ್ತ ಕಡೆ ಬಾ" ಎಂದ. ಇವನ ಕೂಗು ಸಂತೋಷ ದಲ್ಲಿ ಮೆರೆಯುತ್ತಿದ್ದ ಆ ಹೊಲೆಯನಿಗೆ ಕೇಳಿಸಲೂ ಇಲ್ಲ; ಪೋಲೀಸನು ಬಂದುದನ್ನು ಅವನು ನೋಡಲೂ ಇಲ್ಲ.

ಪೋಲೀಸನಿಗೆ ರೇಗಿತು. ಅವನು, "ಒಳ್ಳೆಯ ಮಾತಿನಲ್ಲಿ ಹೇಳಿದರೆ ಕೇಳಬೇಕು, ಇಲ್ಲದಿದ್ದರೆ ನೋಡಿಕೊ........" ಎಂದನು. ಮೈಮರೆತಿದ್ದ ಆ ಹೊಲೆಯನಿಗೆ ಇವನ ಕೂಗು ಹೇಗೆ ಕೇಳಿಸೀತು? ಹೇಗೆ ಎಚ್ಚರಿಸೀತು?

ಪೋಲೀಸನಿಗೆ ಇನ್ನೂ ರೇಗಿತು. ಹೊಲೆಯನ ಭುಜವನ್ನು ಹಿಡಿದು, "ಹೀಗೆ ಬಾರಯ್ಯ" ಎಂದು ಎಳೆದನು. ಹೊಲೆಯನು ಒಂದಿಷ್ಟೂ ಕದಲ ಲಿಲ್ಲ. ಆದರೆ ಅವನ ಕಣ್ಣಿನಲ್ಲಿ ಮಾತ್ರ ಆನಂದಬಾಷ್ಪವು ಹರಿಯುತ್ತಿತ್ತು.

ಹೀಗೆ ಮೂರು ಸಲ ಹೇಳಿದರೂ ಉತ್ತರಕೊಡದೆ ಇದ್ದುದನ್ನು ನೋಡಿ ಪೋಲೀಸನಿಗೆ ಕೋಪವು ಇಮ್ಮಡಿಯಾಯಿತು. ಆದರೂ, ಹೊಲೆಯನ ಕಣ್ಣೀರನ್ನು ನೋಡಿ ಇವನಿಗೂ ಸ್ವಲ್ಪ ಕನಿಕರವುಂಟಾಯಿತು. ಏನಾದ ರೇನು? ತಾನು ಮಾಡಬೇಕಾದ ಕೆಲಸವನ್ನು ಮಾಡಲೇಬೇಕೆಂದು ನಿರ್ಧರಿ ಸಿದ್ದ ಅವನ ಮನದೆದುರಿಗೆ ಈ ಕನಿಕರವು ಏನು ಮಾಡೀತು? ಹೊಲೆಯನ ಎರಡು ಭುಜಗಳನ್ನೂ ಹಿಡಿದು ಹಿಂದಕ್ಕೆಳೆದ. ಅಲ್ಲಿಗೂ ಕದಲಲಿಲ್ಲ, ಆ ಹೊಲೆಯನು ಸ್ಥಳ ಬಿಟ್ಟು! ಇದರಿಂದಲೇ ವ್ಯಕ್ತವಾಗುವುದಿಲ್ಲವೆ 'ಸಂಗೀತವು ಮನುಷ್ಯನ ಚಿಂತೆಯನ್ನು ಸ್ವಲ್ಪಹೊತ್ತಾದರೂ ದೂರಮಾಡ ಬಲ್ಲದೆಂದು.' ಪೋಲೀಸನು ಕೋಪದ ಉದ್ವೇಗದಿಂದ ಕಿಡಿಕಿಡಿಯಾದನು. ಬಾರುಕೋಲನ್ನು ಎತ್ತಿ, "ಈಚೆಗೆ ಬಾ, ಇಲ್ಲದಿದ್ದರೆ ಎರಡು ಬೀಳುವುದು" ಎಂದು ಆಕ್ರೋಶದಿಂದ ಗದರಿದನು. ಭಾಗವತರ ಗಾನದ ಇಂಪಿನೊಡನೆ ನಲಿದಾಡುತ್ತಿದ್ದ ಆ ಹೊಲೆಯನ ಆತ್ಮವು ಆ ನಲಿದಾಟವನ್ನು ಬಿಡಲು ತತ್‌ಕ್ಷಣ ಹೇಗಾದೀತು? ಆ ಹೊಲೆಯನು, ಪೋಲೀಸನ ಈ ಬೆದರಿಕೆಗೂ ಕದಲಲಿಲ್ಲ. ಇವನನ್ನು ಪೋಲೀಸನು ದುರುಗುಟ್ಟಿ ನೋಡಿದ. ಕೆಂಪೇರಿದ್ದ ಅವನ ಮುಖವು ಬಿಳುಪಾಯಿತು. ಮೇಲೆತ್ತಿದ್ದ ಅವನ ಕೈ ತಾನಾಗಿಯೇ ಸ್ವಸ್ಥಾನಕ್ಕೆ ಬಂದಿತು. ಇದೆಲ್ಲವೂ ಭಾಗವತರ ಸಂಗೀತದ ಮಹಿಮೆ!

ಇನ್ನೊಂದು ಸಲ ಹೇಳೋಣವೆನ್ನಿಸಿತು ಆ ಪೋಲೀಸನಿಗೆ. ಅವನು ಹೊಲೆಯನ ಹತ್ತಿರ ಬಂದು, "ಯಾರಯ್ಯಾ ನೀನು! ಎಷ್ಟು ಹೇಳಿ ದರೂ ಕೇಳುವುದಿಲ್ಲವೆ? ಹೀಗೆ ದೆವ್ವನ ಹಾಗೆ ನಿಂತಿದ್ದೀಯಾ!" ಎಂದು ನಿಧಾನವಾಗಿ ಹೇಳಿದನು. ಅದಕ್ಕೂ ಉತ್ತರವಿಲ್ಲ. ಆಗ ಪೋಲೀಸನು, "ಇವನು ಒಳ್ಳೆಯ ಮಾತಿಗೆ ಬಗ್ಗುವ ಹಾಗಿಲ್ಲ. ಎರಡು ಬಿಟ್ಟು ರುಚಿ ತೋರಿಸಿದರೆ ತಾನೇ ಹದಕ್ಕೆ ಬರುತ್ತಾನೆ. ಚೆನ್ನಾಗಿ ಕುಡಿದು ಬಂದಿರ ಬೇಕು" ಎಂದುಕೊಂಡು, ಗಟ್ಟಿಮನಸ್ಸುಮಾಡಿ, ಕೈಯೆತ್ತಿ ಹೊಲೆಯನನ್ನು ಮೇಲಿನಿಂದ ಕೆಳಗಿನವರೆಗೂ ನೋಡಿದನು. ಹಾಗೆಯೇ ಅವನಿಗೂ ಪ್ರೈಮರೆವು ಬಂತೆಂದು ತೋರುತ್ತೆ—ಇಲ್ಲ! ಮತ್ತೆ ತಲೆ ತಿರುಗಿಸಿ,

ಉಸಿರುಕಟ್ಟಿ, ಧೈರ್ಯಮಾಡಿ ಹೊಲೆಯನ ಬೆನ್ನಿನಮೇಲೆ ಹೊಡೆದನು. ಹೊಲೆಯನು ಹಾಗೆಯೇ ಚೆಂಗನೆಗರಿ ಸ್ವಸ್ಥಾನಕ್ಕೆ ಬಂದು ನಿಂತನು. ಪೋಲೀಸನು, "ಒಳ್ಳೆಯ ಗಟ್ಟಿಗ ಇವನು!" ಎಂದು ಇನ್ನೊಂದೇಟು ಹೊಡೆಯುವ ಹೊತ್ತೂ, ಆಲಾಪನೆ ಮುಗಿಯುವ ಹೊತ್ತೂ ಕೂಡಿದವು. ಸಂಗೀತ ನಿಂತುದರಿಂದ ಹೊಲೆಯನಿಗೆ ಎಚ್ಚರವಾಯಿತು. ಅವನಿಗೆ ಏಟು ಬಲವಾಗಿ ಬಿದ್ದುದರಿಂದ ಬಾಧೆಯು ಹೆಚ್ಚಾಯಿತು. "ಅಯ್ಯೋ! ಮೂಳೆ ಮುರಿಯಿತು" ಎಂದು ಕಿರಚಿ ಹಾಗೆಯೇ ಬಿದ್ದುಬಿಟ್ಟನು.

"ಅಯ್ಯೋ" ಎಂಬ ಆವನ ಆರ್ತಧ್ವನಿಯು ಒಳಕ್ಕೆ ನುಗ್ಗಿ, ಸಭಿಕರೆಲ್ಲ ರನ್ನೂ ಭೇದಿಸಿಕೊಂಡು ಭಾಗವತರ ಕಿವಿಗೆ ಕೇಳಿಸಿತು. ಅವರು ಇತ್ತ ತಿರುಗಿದರು. ಭಾಗವತರಿಗೆ ಏನು ಹೊಳೆಯಿತೋ, ಕಣ್ಣೊರಸಿಕೊಂಡು, "ಅವನನ್ನು ಇಲ್ಲಿಗೆ ಕರೆದುಕೊಂಡು ಬನ್ನಿ" ಎಂದರು. ಎಲ್ಲರೂ ಇವರ ಮಾತಿನ ಗೌರವದಿಂದ ಬಿದ್ದಿದ್ದವನನ್ನು ಹೊಲೆಯನೆಂಬುದನ್ನೂ ಮರೆತು ಒಳಗೆ ಕರೆ ತಂದರು. ಭಾಗವತರೇ ಅವನಿಗೆ ನೀರುತಟ್ಟಿ, ಗಾಳಿ ಬೀಸಿ ಎಚ್ಚರಿಸಿದರು. ಹಾಗೆಯೇ ಒಂದು ಸಲ ಹೊಲೆಯನನ್ನು ನೋಡಿದರು; ಮತ್ತೊಮ್ಮೆ ಸಭಿಕರನ್ನು ನೋಡಿದರು. ಭಾಗವತರ ಕಣ್ಣಿನಿಂದ ಈಗಲೂ ಒಂದು ತೊಟ್ಟು ನೀರು ಬಂತು. ಅದನ್ನು ಕೈಯಿಂದಲೇ ಒರಸಿಕೊಂಡರು. ಸಭಿಕರು ಅವಾಕ್ಕಾದರು. ಭಾಗವತರು ಹೀಗೇಕಾದರೆಂಬುದು ಅವರಿಗೆ ತಿಳಿಯದೇ ಹೋಯಿತು. ಅವರೂ ಒಬ್ಬರನ್ನೊಬ್ಬರು ನೋಡತೊಡಗಿದರು.

ಭಾಗವತರು ಆಮೇಲೆ ಪೋಲೀಸನನ್ನು ನೋಡಿದರು. ಅವನು ತಲೆ ತಗ್ಗಿಸಿ ನಿಂತಿದ್ದನು. ಇನ್ನೊಮ್ಮೆ ಅವರು ಹೊಲೆಯನನ್ನು ನೋಡಿ ಸಭಿಕರಿಗೆ, "ನಾನು ಸಂಗೀತ ಕಲಿತದ್ದಕ್ಕೆ ಇಂದು ಸಾರ್ಥಕವಾಯಿತು. ಒಬ್ಬನನ್ನಾದರೂ ಸಂಪೂರ್ಣ ಸಂತೋಷಗೊಳಿಸಿದೆನಲ್ಲಾ. ನೀವೆಲ್ಲರೂ ಹೇಳಿ— ಆತ್ಮಸಾಕ್ಷಿಯಾಗಿ ಹೇಳಿ—ನನ್ನ ಸಂಗೀತದಿಂದ ಇವನಷ್ಟು ಸಂತೋಷಪಟ್ಟವರು ಯಾರಾದರೂ ಇದ್ದೀರಾ? ಪೋಲೀಸನು ಹೊಡೆದರೂ ಅವನಿಗೆ ಜ್ಞಾನವಿರಲಿಲ್ಲ", ಎಂದು ಉದ್ವೇಗದಿಂದ ಹೇಳಿ, ಒಂದು ದೀರ್ಘವಾದ ನಿಟ್ಟು

ಸಿರನ್ನು ಬಿಟ್ಟರು. ಅವರ ನಿಟ್ಟುಸಿರಿನ ಅರ್ಥವು ಯಾರಿಗೂ ತಿಳಿಯದಾಯಿತು. ಅಷ್ಟು ಜನರಲ್ಲಿ, "ನಾನು ಸಂತೋಷಪಟ್ಟಿದ್ದೇನೆ" ಎಂದು ಧೈರ್ಯವಾಗಿ ಹೇಳಲು ಯಾರಿಗೂ ಬಾಯಿ ಬರಲಿಲ್ಲ. ಇಷ್ಟು ಹೊತ್ತಿಗೆ ಹೊಲೆಯನು ಸುಧಾರಿಸಿಕೊಂಡು ಕುಳಿತಿದ್ದನು. ಅವನು, "ಒಡೆಯಾ! ನಾನಿಲ್ಲಿರಲು ಅರ್ಹನಲ್ಲ. ನಾನು ಹೊಲೆಯ. ನನಗೆ ನಿಮ್ಮ ಸಂಗೀತದಿಂದ ತುಂಬ ಸಂತೋಷವಾಯಿತು. ಇನ್ನೊಂದು ಹಾಡನ್ನು ನಿಮ್ಮ ಬಾಯಲ್ಲಿ ಕೇಳಬೇಕೆಂದು ನನ್ನ ಇಷ್ಟ, ದೊರೆಯೇ. ನಾನೋ ದುಡ್ಡಿಲ್ಲದ ಭಿಕಾರಿ. ಸಂಗೀತವನ್ನು ದುಡ್ಡು ಕೊಟ್ಟು ಕೇಳಲು ಆಗುವುದಿಲ್ಲ. ಕೇಳಲೇಬೇಕೆಂದರೆ ಒದೆ ತಿನ್ನಬೇಕು. ಒಡೆಯಾ! ಇನ್ನೊಂದು ಕೇಳಬೇಕೆಂದಿದೆ ನನ್ನ ಮನಸ್ಸಿನಲ್ಲಿ. ನಾನು ಹೊರಗಡೆಯೇ ನಿಂತು ಕೇಳುವೆನು. ಇಷ್ಟು ಜನರ ಮಧ್ಯೆ ನಾನು—ಹೊಲೆಯ—ಇರಬಾರದು. ನಾನಿದುವರೆಗೂ ಇಂತಹ ಸಂಗೀತವನ್ನು ಕೇಳಿರಲಿಲ್ಲ. ಸಂಗೀತ ಕೇಳುವಾಗ ನನಗೆ ಜ್ಞಾನವೇ ಹೋಗಿ ಬಿಟ್ಟಿತ್ತು. ಅಷ್ಟು ಚೆನ್ನಾಗಿ ಹೇಳುವಿರಿ ನೀವು, ನನ್ನ ದೊರೆಯೇ! ಇನ್ನೊಂದೇ ಒಂದು" ಎಂದು ದೈನ್ಯದಿಂದ ಕೇಳಿ ಹೊರಗೆ ಹೋಗಲು ಹೊರಟನು. ಇವನ ಮಾತು ಭಾಗವತರ ಹೃದಯವನ್ನು ಕರಗಿಸಿ ನೀರು ಮಾಡಿತು. ಮೊದಲೇ ಅವರು ಸರಳಸ್ವಭಾವದವರು. "ಬೇಡಪ್ಪ, ನೀನು ಬಹಳ ನೊಂದಿರುವೆ. ಇಲ್ಲಿಯೇ ಕುಳಿತು ಒಂದಲ್ಲದಿದ್ದರೆ ನಾಲ್ಕು ಕೇಳು", ಎಂದು ಅವನ ಕೈಹಿಡಿದು ಕೂಡಿಸಿಕೊಂಡರು. ಅವನು ಹೊಲೆಯನೆಂಬ ಎಣಿಕೆ ಆಗ ಅವರಿಗೆ ಬರಲಿಲ್ಲವೇನೋ! ಇಲ್ಲದಿದ್ದರೆ ಎಲ್ಲರೂ ಅವರ ಕಣ್ಣಿದಿರಿನಲ್ಲಿ ಒಂದೇ ಎಂದು ಅವರ ಭಾವನೆಯೋ? ಎಲ್ಲರೂ ಅವನು ಹೊಲೆಯನೆಂದೂ, ಅವನ ಕೊಳಕಾದ ಹರಕು ಬಟ್ಟೆಯನ್ನೂ, ಮಲಿನವಾದ ಮೈಯನ್ನೂ ನೋಡಿ ಅತಿಯಾಗಿ ಅಸಹ್ಯಪಟ್ಟರು. ಹೊರಗೆ ನೋಡುವುದಕ್ಕೆ ಅವನು ಕೊಳಕಾಗಿದ್ದರೆ ಅವನ ಹೃದಯವು ನಿರ್ಮಲವಾಗಿ ಶುಚಿಯಾದುದಾಗಿಲ್ಲವೇ? ಜನರಿಗೆ ಹೊರಗಿನ ಆಡಂಬರ ಬೇಕೇ ಹೊರತು ಒಳಗಿನ ಹೃದಯದ ನೈರ್ಮಲ್ಯವು ಬೇಡ. ಆದರೆ ಕಲೋಪಾಸಕರು ನೋಡುವುದು ಹೃದಯವನ್ನು! ದೇಹವನ್ನಲ್ಲ!

ಐದು

ಭಾಗವತರ ಬಲವಂತದಿಂದ ನಿರ್ವಾಹವಿಲ್ಲದೆ ಹೊಲೆಯನು ದೂರ ಸರಿದು ಒಂದು ಪಕ್ಕದಲ್ಲಿ ಕುಳಿತನು. ಮತ್ತೆ ಅವರ ಸಂಗೀತವು ಪ್ರಾರಂಭವಾಯಿತು. ಭಾಗವತರ ಅಪಾರವಾದ ಆನಂದದಿಂದ ಅವರ ಸಂಗೀತವು ಇನ್ನೂ ಹೆಚ್ಚು ಇಂಪಿನಿಂದಲೂ, ಮಾಧುರ್ಯದಿಂದಲೂ ಒಡಗೂಡಿತ್ತು.

ಹೊಲೆಯನ ಶುದ್ಧಾತ್ಮವು ಅವನ ದೇಹದಿಂದ ಹಾರಿ ಭಾಗವತರ ಸಂಗೀತದ ಮಾಧುರ್ಯದೊಡನೆ ನರ್ತಿಸುತ್ತಿತ್ತು. ಸಭಿಕರೆಲ್ಲರೂ ಅವನ ಚಿತ್ತದ ಭಕ್ತಿಯನ್ನು ನೋಡಿ ಬೆರಗಾದರು.

ಭಾಗವತರು ಮನಸ್ಸಿನಲ್ಲೇ, "ಎಲ್ಲರೂ ಹೀಗೆ ಸಂಗೀತ ಕೇಳಿ ಸಂತೋಷಪಡುವವರಾದರೆ........!" ಎಂದುಕೊಳ್ಳುತ್ತಿದ್ದರು.

ಸಂಗೀತ ಕಛೇರಿಯು ಮುಗಿಯಿತು. ಸಭಿಕರೆಲ್ಲರೂ ಹೊರಟು ಹೋದರು. ಹೊಲೆಯನಿಗೆ ಇಹಲೋಕದ ಜ್ಞಾನ ಬಂದಿತ್ತು. ಭಾಗವತರಿಗೆ ನಮಸ್ಕರಿಸಿ, "ತುಂಬಾ ಸಂತೋಷವಾಯಿತು ನನ್ನೊಡೆಯಾ, ನಾನೇನೂ ನಿಮಗೆ ಕೊಡಲಾರೆ. ಇನ್ನು ಮನೆಗೆ ಹೊರಡುತ್ತೇನೆ'' ಎಂದನು. ಆಗ ಭಾಗವತರು ಮುಗುಳು ನಗೆಯಿಂದ "ನಿನ್ನ ಹೆಸರೇನು?'' ಎಂದು ಅವನನ್ನು ಕೇಳಿದರು.

''ನನ್ನನ್ನು ಮುನಿಯಾ ಎಂದು ಕರೆಯುತ್ತಾರೆ ಒಡೆಯಾ"

"ಸರಿ ಹೋಗು. ಆದರೆ ನಾನು ಬಂದಾಗಲೆಲ್ಲಾ ಹೇಳಿ ಕಳುಹಿಸುತ್ತೇನೆ; ನೀನು ಬರಲೇಬೇಕು'' ಎಂದು, ಭಾಗವತರು ಅವನು ಹೋದ ಮೇಲೆ ಅದೇ ಮಾರ್ಗವನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವನೂ, ಇವರನ್ನು ಹಿಂತಿರುಗಿ ಹಿಂತಿರುಗಿ ನೋಡಿಕೊಂಡು ನಿಧಾನವಾಗಿ ಹೊರಟು ಹೋದನು. ಅವನು ಕಣ್ಮರೆಯಾಗುತ್ತಲೇ ಭಾಗವತರು ಕಣ್ಣೊರಸಿಕೊಂಡು, ದೀರ್ಘವಾಗಿ ನಿಟ್ಟುಸಿರೊಂದನ್ನು ಬಿಟ್ಟು ಅಲ್ಲಿದ್ದ ಒಬ್ಬ ಜವಾನನಿಗೆ, "ಇದನ್ನು ತೆಗೆದುಕೊಂಡು ಓಡಿಹೋಗಿ ಆ ಮುನಿಯನಿಗೆ ಕೊಟ್ಟು ಬಾ'' ಎಂದು ಒಂದು ದುಡ್ಡಿನ ಚೀಲವನ್ನು ಅವನ ಕೈಯಲ್ಲಿ ಕೊಟ್ಟರು.

* * * *

## ಆರು

ನಾಲ್ಕು ವರ್ಷಗಳಾದ ಮೇಲೆ ಮತ್ತೆ ಭಾಗವತರು ಬೆಂಗಳೂರಿಗೆ ಬಂದರು. ಅದೇ ಪ್ರಸಿದ್ಧವಾದ ಶಂಕರಯ್ಯನವರ ಹಾಲಿನಲ್ಲೇ ಅವರ ಕಛೇರಿ. ಎಂದಿನಂತೆ ಇಂದೂ ಜನರು ತುಂಬಾ ನೆರೆದಿದ್ದಾರೆ. ಭಾಗವತರು ಬಂದರು. ಆದರೆ ಹೋದಸಲದ ಕಳೆಯು ಈ ಸಲದ ಸಭೆಗೆ ಇಲ್ಲವೆಂಬುದು ಭಾಗವತರಿಗೆ ವ್ಯಕ್ತವಾಯಿತು. ಹೀಗಾಗಲು ಕಾರಣವೇನು? ಯಾವುದಾದರೂ ಒಂದು ಕಳೆಯನ್ನುಂಟುಮಾಡುವ ವಸ್ತುವು ಮಾಯವಾಗಿರಬೇಕು. ಉಲ್ಲಾಸಯುಕ್ತವಾದ ಅವರ ಮುಖವು ಕಳೆಗುಂದಿತು. ಇನ್ನೊಂದು ಸಲ ತೀವ್ರವಾಗಿ ಸುತ್ತಲೂ ನೋಡಿದರು. ಅವರಿಗೆ ಬೇಕಾಗಿದ್ದುದು ಸಿಗಲಿಲ್ಲವೆಂದು ತೋರುತ್ತೆ! ಹಾಗೆಯೇ ಮೆಲ್ಲಗೆ ಕೂತು ತಲೆ ತಗ್ಗಿಸಿದರು. ಮತ್ತೆ ಸ್ವಲ್ಪ ಹೊತ್ತಾದಮೇಲೆ ತಲೆಯೆತ್ತಿ, ಅಲ್ಲಿಯ ಕಾರ್ಯದರ್ಶಿಗಳನ್ನು ಕರೆದು, "ಅವನು ಯಾಕೆ ಬರಲಿಲ್ಲ?" ಎಂದರು. "ಹೋದ ವರ್ಷ ಪ್ಲೇಗಿನಲ್ಲಿ ಅವನು ಹೋಗಿಬಿಟ್ಟನೆಂದು ಅವನ ಮನೆಯವರು ಹೇಳಿದರು" ಎಂದು ಕಾರ್ಯದರ್ಶಿಗಳು ಉತ್ತರವನ್ನಿತ್ತರು. ಯೋಚನೆಯಲ್ಲಿದ್ದ ಭಾಗವತರು, "ಆ........ ಹೋದನೇ!" ಎಂದರು.

ಅವರ ಮುಖವು ಕಳೆಗುಂದಿತು! ಸಭೆಯನ್ನು ಮತ್ತೆ ಗಂಭೀರಮುದ್ರೆಯಿಂದ ದಿಟ್ಟಿಸಿ ನೋಡಿದರು. ಮತ್ತೆ ಪಕ್ಕಕ್ಕೆ ತಿರುಗಿದರು; ಮಾಮರಗಳ ಕಡೆ ಅವರ ದೃಷ್ಟಿ ಬಿತ್ತು! ಕೂಡಲೇ ತಲೆ ತಗ್ಗಿಸಿದರು. ಮುಖವು ವಿವರ್ಣವಾಯಿತು. ಅವರ ಕಣ್ಣಿನಲ್ಲಿ ನೀರು ತುಂಬಿ ಅವು ಮಂಜುಮಂಜಾದವು. ಹಾಗೆಯೇ ಅವರು ಒಮ್ಮೆ ದೀರ್ಘವಾಗಿ ಉಸಿರೆಳೆದು "ಮು....ನಿ.... ಯಾ....!" ಎಂದರು. ಅಲ್ಲಿಗೆ ಅವರ ಧ್ವನಿಯು ನಿಂತಿತು. ಕಣ್ಣೊರಸಿಕೊಂಡು ಪುನಃ ತಲೆಯೆತ್ತಿ ಸಭಿಕರನ್ನು ದೈನ್ಯದಿಂದ ಈಕ್ಷಿಸಿ, "ಇಂದೆನಗೆ..... ತುಂಬಾ.... ಆಯಾಸ ....ಹಾಡಲು.....ಆಗುವುದಿಲ್ಲ.....ದಯವಿಟ್ಟು.... ಕ್ಷಮಿಸಿ" ಎಂದು ಕಂಪಿತ ಸ್ವರದಿಂದ ನುಡಿದು ಎದ್ದರು. ಅವರ ಮುಖವು ಮತ್ತೆ ಗಂಭೀರವಾಯಿತು.

ಭಾಗವತರು ಹೊರಟೇ ಹೋದರು !

ಅವರು ಮನಸ್ಸಿನಲ್ಲೇ, "ಹಲ್ಲಿದ್ದವರಿಗೆ ಕಡಲೆ ಇಲ್ಲ! ಕಡಲೆ ಇದ್ದವರಿಗೆ ಹಲ್ಲಿಲ್ಲ!! ಪ್ರಪಂಚವೇ ಹೀಗೆ!!! ಕಾಡುಮಲ್ಲಿಗೆಯನ್ನು ಮುಡಿಯುವ ಪುಣ್ಯ ಆ ದೇವನಿಗೊಬ್ಬನಿಗೇ ವಿನಃ ಮಾನವರಿಗಿಲ್ಲ!" ಎನ್ನುತ್ತಾ ಹೊರಟು ಹೋದರು.

# ಇನ್ನೆಲ್ಲಿಯ ರಿಪೇರಿ!

ಲಲಿತ ಶ್ರೀನಾಥರು ಮುದ್ದಾದ ಪ್ರೇಮಿಗಳು. ಅವರದು ಅಚ್ಚುಕಟ್ಟಾದ ದಾಂಪತ್ಯ. ಸಂಸಾರವೂ ದೊಡ್ಡದಲ್ಲ. ಇದ್ದವರು ಇಬ್ಬರೇ! ಒಬ್ಬರನ್ನೊಬ್ಬರು ಸ್ವಲ್ಪ ಕಾಲವೂ ಅಗಲಿ ಇರಲೊಲ್ಲರು. ಒಬ್ಬರಿಗಾಗಿ ಇನ್ನೊಬ್ಬರು ಏನನ್ನು ಬೇಕಾದರೂ ತ್ಯಜಿಸಲು ಸಿದ್ಧರು. ಹೆಚ್ಚಿಗೆ ಹೇಳುವುದೇನು, ಅವರಿಬ್ಬರದೂ ಒಂದೇ ಜೀವದ ಎರಡು ದೇಹಗಳು! ಆದರೆ............?

ಶ್ರೀನಾಥನಿಗಾಗಲಿ, ಲಲಿತಳಿಗಾಗಲಿ ತನ್ನವರೆಂದು ಹೇಳಿಕೊಳ್ಳುವ ಬಂಧುಗಳಾರೂ ಇರಲಿಲ್ಲ. ಶ್ರೀನಾಥನಿಗೆ ಅವನ ತಂದೆಯವರು ಬಿಟ್ಟು ಹೋದ ಆಸ್ತಿ—ಸಾಲ! ಸಾಲ ಏತಕ್ಕಾಗಿ ಮಾಡಿದರೋ ಗೊತ್ತಿಲ್ಲ. ಅವರು ಹೇಳುತ್ತಿದ್ದುದು ಮಾತ್ರ, ಶ್ರೀನಾಥನ ವಿದ್ಯೆಗಾಗಿ, ಅವನನ್ನು ವಿಶ್ವವಿದ್ಯಾನಿಲಯದ ಪದವೀಧರರನ್ನು ಮಾಡಲು ಎಂದು. ಇರಬಹುದು!

ಶ್ರೀನಾಥನೇನೋ ಪದವೀಧರನಾದನು. ಅದರಿಂದ ಅವನಿಗೆ ಲಾಭವಾಯಿತೇ? ಜೀವನ ಜರುಗಿಸಲು ಅವನ ಪದವಿಯು—ಸಾಲದ ಹೊರೆಯಿಂದ ಸಂಪಾದಿಸಿದ ಪದವಿಯು—ಯಾವುದಾದರೂ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟಿತೇ?—ಇಲ್ಲ! ಅವನು ಒಂದುವೇಳೆ ಬ್ರಾಹ್ಮಣೇತರನಾಗಿದ್ದಿದ್ದರೆ ಕೆಲಸ ಸಿಕ್ಕುತ್ತಿತ್ತೋ ಏನೋ, ಬಲ್ಲವರು ಯಾರು? ಅವನೊಬ್ಬನೇ ಆಗಿದ್ದರೆ ಹೇಗೆಯೋ ಕಾಲ ಹಾಕುತ್ತಿದ್ದ. ಏನೂ ಇಲ್ಲವೆ ಹೋದರೆ ಕಡೆಗೆ ಉಪವಾಸವಿರುತ್ತಿದ್ದ. ಆದರೆ ಈಗ ಲಲಿತಳು ಬೇರೆ ಗಂಟು. ತಮ್ಮ ಕಣ್ಣು ಮುಂದೆ ಮಗ ಸೊಸೆಯರು ಸಂಸಾರವನ್ನು ಸಂತೋಷದಿಂದ ಸಾಗಿಸುವುದನ್ನು ನೋಡಿ ಸಾಯಬೇಕೆಂದು, ಅವನ ತಾಯಿ ತಂದೆಗಳು ಅವನಿಗೆ ಜಾಗ್ರತೆ—ಇನ್ನೂ ಬಹಳ ಚಿಕ್ಕವನಾಗಿದ್ದಾಗ—ಮದುವೆ ಮಾಡಿಬಿಟ್ಟಿದ್ದರು. ಇವರ ಸಂಸಾರವು ಸುಗಮವಾಗಿ ಸಾಗುವುದಿಲ್ಲವೆಂದು ಅರಿತರೋ ಎಂಬಂತೆ, ಅವರು ಈ ಮೊದಲೇ ಕಾಲನರಮನೆಯನ್ನು ಸೇರಿದ್ದರು! ಆಗಿನಿಂದಲೇ

ಶ್ರೀನಾಥನಿಗೆ ಸಂಸಾರದ ಭಾರ ಬಿದ್ದುದು; ಅದರ ನಿಜವಾದ ಕಷ್ಟ ಗೊತ್ತಾದುದು. ಇಷ್ಟು ಕಷ್ಟದಲ್ಲಿದ್ದರೂ ಅವರಿಬ್ಬರು; ಮಾತ್ರ ಒಬ್ಬರನ್ನೊಬ್ಬರು ಅವಿಚ್ಛಿನ್ನವಾಗಿ ಪ್ರೀತಿಸುತ್ತಿದ್ದರು. ಒಬ್ಬರ ಸುಖವೇ ಇನ್ನೊಬ್ಬರದೆಂದು ತಿಳಿದಿದ್ದರು. ಶ್ರೀನಾಥನಿಗಂತೂ ಮನೆಯನ್ನು ಬಿಟ್ಟು ಹೊರಗೆ ಹೊರಟರೆ ಕೂಡಲೇ ಯಾವ ಯಾವುದೋ ಯೋಚನೆಗಳು ತಲೆಯಲ್ಲಿ ತುಂಬಿಕೊಳ್ಳುವುವು. ಮನೆಗೈತಂದು ಮಡದಿಯ ಮುದ್ದುಮುಖವನ್ನು ಕಂಡಕೂಡಲೇ ಯೋಚನೆಗಳು ಮರೆಯಾಗುವುವು. ಅದರಿಂದ, " ಯಾವಾಗಲೂ ಮನೆಯಲ್ಲೇ ಇದ್ದು ಬಿಡಲೆ?" ಎಂದು ಯೋಚಿಸುವನು. ಹೊರಗೆ ಹೋಗಿ, ಅವರಿವರ ಕಾಲುಕಟ್ಟಿ, ಒದ್ದಾಡಿ ಬಂದರೇ ಕೆಲಸ ಸಿಕ್ಕದಿರುವಾಗ, ಇನ್ನು ಮನೆಯಲ್ಲಿ ಮಡದಿಯ ಮುಖವನ್ನು ನೋಡುತ್ತಾ ಕುಳಿತಿದ್ದರೆ ಕೆಲಸವು ಹೇಗೆ ಸಿಕ್ಕಬೇಕು?

ದಿನ ಬೆಳಗಾದರೆ ಸರಿ, "ಅವರು ಹಾಗೆ ಹೇಳಿದ್ದರು; ಇವರು ಹೀಗೆ ಹೇಳಿದ್ದರು; ಅವರು ಆಮೇಲೆ ಬಾ ಎಂದಿದ್ದರು" ಎಂಬ ಅವರಿವರು ಹೇಳಿ ಆಸೆ ತೋರಿಸಿದ ಮಾತುಗಳು ಜ್ಞಾಪಕಕ್ಕೆ ಬಂದು, ಆಸೆಯು ಮೂಡಿ, ಹೊರಹೊರಡುವಂತೆ ಪ್ರೇರೇಪಿಸುವುದು. ಮರಳಿ ಅದೇ ರೀತಿಯಲ್ಲಿ ನಿರಾಶೆಯಿಂದ ಬಳಲಿ ಮನೆಗೆ ಹಿಂತಿರುಗುವುದು. ಹೀಗೆಯೇ ಆಗಿ, ಈಗ ಎರಡು ಮೂರು ವರುಷಗಳಿಂದ ನಿರಾಶೆಯ ಮರವು ಬೆಳೆದು ದೊಡ್ಡದಾಗಿ ಹೋಗಿದೆ ಅವನ ಹೃದಯದಲ್ಲಿ. ಅದನ್ನು ಕಿತ್ತುಹಾಕಲು—ನೆನೆದೊಡನೆಯೇ ಕಿತ್ತುಹಾಕಲು— ಹೇಗೆ ಸಾಧ್ಯ? ಹೊರಗಿನಿಂದ ಮನೆಗೆ ಬರುವಾಗ ಮುಖವು ಸಪ್ಪೆಗಿದ್ದು ಬಳಲಿದ್ದರೆ ಲಲಿತಳು ಸಹಿಸಳು; ಅವಳಿಗೆ ಸಂಕಟವಾಗುವುದು ಎಂದು ತಿಳಿದಿದ್ದ ಇವನು ನಗುಮುಖದಿಂದಲೇ ಮನೆಗೆ ಬರುವನು. ಆದರೆ ಅವಳಿಗೆ ಇದು ಕಪಟ ಸಂತೋಷವೆಂದು ಗೊತ್ತಾಗದೇ ಹೋಗುವುದೇ? ಅವಳೂ ಅಷ್ಟೇ! ಶ್ರೀನಾಥನು ಮನೆಯನ್ನು ಬಿಟ್ಟು ಹೊರಗೆ ಹೊರಟರೆ ತಮ್ಮ ದುಸ್ಥಿತಿಯನ್ನು ನೆನೆದು ಬಹಳ ಸಂಕಟಪಡುವಳು; ಒಮ್ಮೊಮ್ಮೆ ಕಣ್ಣೀರಿಡುವಳು. ಪತಿಯು ಮನೆಗೆ ಬರುವ ಸಮಯವಾಯಿತೆಂದರೆ, ತನ್ನ ಹೃದಯ

ದೊಳಗಿನ ದಾರುಣದುಃಖವನ್ನೆಲ್ಲಾ ನುಂಗಿಕೊಂಡು ನಗೆಯ ನಡೆಯನ್ನು ನಟಿಸುವಳು. ತಾನು ದುಃಖಪಡುವುದನ್ನು ಕಂಡರೆ ಮೊದಲೇ ನಿರಾಶೆಯಿಂದ ಬಳಲಿರುವ ಅವನಿಗೆ ಇನ್ನೂ ದುಃಖವಾಗುವುದಲ್ಲಾ ಎಂದು ಹಾಗೆ ಮಾಡುವಳು.

ಒಬ್ಬರಿಗಾಗಿ ಇನ್ನೊಬ್ಬರು ದುಃಖವನ್ನು ನುಂಗಿಕೊಂಡು ಇರುತ್ತಿದ್ದರಾದರೂ ಒಮ್ಮೊಮ್ಮೆ ಶ್ರೀನಾಥನು ಮನೆಗೆ ಬಂದಾಗ ಲಲಿತಳು ಸಹಜತೆಯಿಂದ "ಹೋದ ಕೆಲಸವೇನಾಯಿತು?" ಎಂದು ಕೇಳುವಳು. "ಸುಮ್ಮನಿರು ಲಲಿತ, ನಿನಗೇಕೆ ಕೆಲಸದ ಮಾತು" ಎಂದವನುತ್ತರ. ಕೆಲವುವೇಳೆ ಈ ಪ್ರಶ್ನೆಯನ್ನು ಕೇಳಿದಾಗ ಅವನ ದುಃಖವು ಇಮ್ಮಡಿಯಾಗುವುದು. ತಡೆಯಲಾರದ ದುಃಖ ಬಂದಾಗ ಕಣ್ಣೀರುದುರುವುದು—ಅವನೆಷ್ಟು ತಡೆದುಕೊಂಡರೂ ಅದು ನಿಲ್ಲದು. ಲಲಿತಳಿಗೆ ಕಣ್ಣೀರು ಕಾಣದಿರಲೆಂದು ಪಕ್ಕಕ್ಕೆ ತಿರುಗಿ ಮುಖ ಮುಚ್ಚಿಕೊಳ್ಳುವನು. ಆದರೂ ಅದನ್ನು ನೋಡಿದ ಲಲಿತಳು ತನ್ನನ್ನು ತಾನೇ ಹಳಿದುಕೊಳ್ಳುವಳು; ಮತ್ತೆ ಮರುಗುವಳು. ಇಬ್ಬರೂ ನೀರವವಾಗಿ ಮುಖ ಮುಚ್ಚಿಕೊಂಡು ಕುಳಿತುಕೊಳ್ಳುವರು. ಎಲ್ಲಿಯವರೆಗೆ? ದುಃಖದ ಉದ್ವೇಗವು ಕಮ್ಮಿಯಾಗಿ ಕೆಲಸದ ಯೋಚನೆಗಳು ಮರೆಯಾಗುವವರೆಗೊ!

ಅಂತೂ ಇಂತೂ, ಇಲ್ಲಿಯುವರೆಗೂ ಬಹು ಕಷ್ಟದಿಂದ ಗಂಡಹೆಂಡತಿಯರು ಒಡವೆಗಳನ್ನು ಮಾರಿ, ಬಟ್ಟೆಗಳನ್ನು ಮಾರಿ, ಇದ್ದಬದ್ದ ಸಾಮಾನುಗಳನ್ನು ಮಾರಿ ಜೀವನ ಮಾಡಿದರು. ಒಂದು ದಿನ ಊಟ; ಒಂದು ದಿನ ಅಂಬಲಿ; ಇನ್ನೊಂದು ದಿನ ಉಪವಾಸ— ಹೀಗೆ!

ಹೊಟ್ಟೆಗೇ ಇಲ್ಲದಿರುವಾಗ ಸಾಲ ತೀರುವ ಬಗೆ ಹೇಗೆ? ಸಾಲಗಾರರು ಸದಾ ತಿರುಗುತ್ತಿದ್ದಾರೆ. ಅವರಲ್ಲಿ ಕೆಲವರು ಕರುಣೆ ತೋರುತ್ತಿದ್ದರೂ, ಇನ್ನು ಕೆಲವರು ದಾವಹಾಕಿ ಜೈಲ್‌ವಾರಂಟ್ ತರಬೇಕೆಂದು ಹವಣಿಸುತ್ತಿದ್ದರು. ಆದರೆ ಇವರು ಬಾಡಿಗೆಗೆ ಇದ್ದ ಮನೆಯ ಮಾಲೀಕನು ಮಾತ್ರ

ಇವರ ಭಾಗಕ್ಕೆ ದೇವರಂತೆ ಇದ್ದ. ಈ ಎರಡು ವರುಷಗಳಿಂದಲೂ ಇವರ ಈ ಸ್ಥಿತಿಯನ್ನು ನೋಡಿ ಬಾಡಿಗೆಯನ್ನು ಕೇಳಿರಲಿಲ್ಲ.

ಅವನು ಈ ಕಷ್ಟದಲ್ಲಿಯೂ ನಿತ್ಯಕೆಲಸವನ್ನು ಮಾತ್ರ ಬಿಡಲಿಲ್ಲ–ಬಿಡಲಾಗಲಿಲ್ಲ. ಬೆಳಗಾದ ಒಡನೆಯೇ ಹೊರಡುವುದು. ಹೊರಡುವುದಕ್ಕೆ ಮುಂಚೆ ಸಾಲಗಾರರಿಗೆ—ಮನೆಯ ಬಳಿ ಬಂದು ತಗಾದೆಮಾಡುವ ಸಾಲಗಾರರಿಗೆ—ಸಮಾಧಾನ ಮಾಡುವುದು. ಹೋಗುವಾಗ ದಾರಿಯಲ್ಲಿ ಸಿಕ್ಕವರಿಗೆಲ್ಲಾ ಸಮಾಧಾನ ಹೇಳುವುದು. ಮನೆಯಿಂದ ಹೊರಟ ಹೊತ್ತಿನಿಂದ ಸುಮಾರು ಒಂದೆರಡು ಘಂಟೆಗಳ ವರೂ ಬೇಕಾಗುತ್ತಿತ್ತು ವಾಚನಾಲಯವನ್ನು ಸೇರುವುದಕ್ಕೆ. ಗುಡಿಯಿಂದ ಹೊರಟ ಉತ್ಸವವು ದಾರಿಯಲ್ಲೆಲ್ಲಾ ನಿಲ್ಲುವುದಿಲ್ಲವೆ ಮಂಗಳಾರತಿ ಮಾಡಿಸಿಕೊಳ್ಳುವುದಕ್ಕೆ, ಹಾಗೆ ನಿಲ್ಲಬೇಕಾಗೋಣದರಿಂದ. ಇಷ್ಟಾದರೂ, ತಲೆತಪ್ಪಿಸಿಕೊಂಡು ಸಂದುಗೊಂದುಗಳಲ್ಲಿ ನಡೆಯುವ ಸ್ವಭಾವ ಅವನಲ್ಲಿರಲಿಲ್ಲ.

ಈ ಕೆಲಸ ಹುಡುಕುವ ಉದ್ಯಮದಲ್ಲಿ ಶಕುನಗಳಮೇಲೆ ಅವನಲ್ಲಿ ಅಪನಂಬಿಕೆಯು ಮೂಡಿತ್ತು. ಎಷ್ಟೋಸಲ ಇವನು ಕೆಲಸವನ್ನು ಯಾಚಿಸಲು ಹೊರಟಾಗ ಸುಮಂಗಲೆಯರ ತಂಡವನ್ನೇ ಇದಿರುಗೊಂಡಿದ್ದಾನೆ; 'ಲಕ್ಷ್ಮಿ ಟ್ರ' ಎಂದು ಹೇಳಿಸಿಕೊಳ್ಳುವ ಹೆಂಡದಗಾಡಿಗಳನ್ನು ಕಂಡಿದ್ದಾನೆ; ಈ ಕೆಲಸವಾಗೇ ಆಗುತ್ತದೆ ಅಂದುಕೊಂಡಾಗ ಹಲ್ಲಿ ನುಡಿದದ್ದನ್ನು ಕೇಳಿದ್ದಾನೆ. ಆದರೂ ಕೆಲಸ ಮಾತ್ರ ಸಿಕ್ಕಿರಲಿಲ್ಲ!

*  *  *

ಆ ದಿನ, ದಿನಕ್ಕಿಂತ ಹೆಚ್ಚು ಬೇಜಾರಾಗಿತ್ತು, ಸಾಲಗಾರರಿಗೆಲ್ಲಾ ಉತ್ತರ ಹೇಳಿ ಹೇಳಿ, ಸಮಾಧಾನಮಾಡಿ ಮಾಡಿ. ಇಷ್ಟಾದರೂ ಅವನ ಮನಸ್ಸಿನಲ್ಲಿ ಏನೋ ಒಂದು ತರಹ ಉಲ್ಲಾಸ ಅಂದು. ಅವನಿಗೇ ಅದರ ಕಾರಣ ಗೊತ್ತಾಗಲ್ಲೊಲ್ಲದು. ಅವನು ಎಂದಿನಂತೆ ವಾಚನಾಲಯಕ್ಕೆ ಹೋದ. ಆ ಉಲ್ಲಾಸದ ಪರಿಣಾಮವೋ ಏನೋ, ಅದೇ ಊರಿನ ಒಂದು ಕಂಪನಿಯ

ವರ, "ಕೆಲಸಗಾರನು ಬೇಕಾಗಿದೆ. ವಿಶೇಷ ವಿಷಯ ಮುಖತಃ" ಎಂಬ ಜಾಹೀರಾತು ಇತ್ತು.

ಅದನ್ನು ನೋಡಿದೊಡನೆಯೇ ಆ ಕೆಲಸ ಸಿಕ್ಕಬಹುದೆಂಬ ಯಾವುದೋ ಒಂದು ಆಸೆಯು ಅವನ ಮನಸ್ಸಿನಲ್ಲಿ ತಲೆದೋರಿತು. ಅಂದೇ ಒಂದು ಅಪ್ಲಿಕೇಷನ್ ಹಾಕಿ ತಾನೆ ಸ್ವತಃ ಹೋಗಿ ಆ ಕಂಪನಿಯ ಮ್ಯಾನೇಜರನ್ನು ಕಂಡು ತನ್ನ ಕಷ್ಟಗಳನ್ನೆಲ್ಲಾ ಹೇಳಿಕೊಂಡ. ಇವನ ಕಷ್ಟಗಳನ್ನೆಲ್ಲಾ ಕೇಳಿ, "ಪಾಪ, ನೊಂದ ಜೀವ" ಎಂದುಕೊಂಡು ಕೆಲಸವನ್ನು ಖಂಡಿತವಾಗಿಯೂ ಅವನಿಗೇ ಕೊಡಿಸಲು ಪ್ರಯತ್ನಿಸುತ್ತೇನೆ ಎಂಬ ಭರವಸೆಯನ್ನು ಹುಟ್ಟಿಸಿ ಆತನು ಕಳುಹಿಸಿಕೊಟ್ಟನು.

ಶ್ರೀನಾಥನು, "ಅಬ್ಬಾ! ಇಷ್ಟು ದಿವಸ ಪ್ರಯತ್ನಿಸಿದ್ದಕ್ಕೆ, ಈಗ ಸಫಲವಾಗುವ ದಾರಿಗೆ ಬರುವ ಹಾಗಿದೆ. ಎಲ್ಲಾ ಪರಮಾತ್ಮನ ದಯೆ" ಎಂದುಕೊಂಡು ಸಂತೋಷದಿಂದ ಮನೆಗೆ ಬಂದು, ನಡೆದ ಸಂಗತಿಯನ್ನೆಲ್ಲಾ ಲಲಿತಳಿಗೆ ತಿಳಿಸಿದ. ಅಂದು ರಾತ್ರಿ ಅವರಿಗೆ ಊಟವಿಲ್ಲದಿದ್ದರೂ ಮುಂದೆ ಸಂಸಾರವು ಸುಗಮವಾಗಿ ನಡೆಯುವುದೆಂದು ಊಹಿಸಿ, ಹಿಗ್ಗಿ, ಹಾಸ್ಯಮಯ ಜೀವನದಲ್ಲಿ ಕೊಂಚ ತೇಲಿ, ಸುಖನಿದ್ರೆಯುಳ್ಳ ಆ ರಾತ್ರಿಯನ್ನು ಕಳೆದರು.

* * *

ಮೂರು ನಾಲ್ಕು ದಿನಗಳ ಮೇಲೆ ಶ್ರೀನಾಥನಿಗೆ ಒಂದು ಲಕ್ಕೋಟೆಯು ಬಂತು. ಅದನ್ನು ನೋಡಿದೊಡನೆಯೇ ಸತಿಪತಿಯರಿಬ್ಬರೂ ಸಂತೋಷಿತರಾದರು. ಶ್ರೀನಾಥನು ಅದನ್ನು ಒಡೆದು ನೋಡಿ, "ನಾಳೆ ಇಂಟರ್‌ವ್ಯೂಗೆ ಹೋಗಬೇಕು" ಎಂದ. ಇಷ್ಟೇ!

ಇಂಟರ್‌ವ್ಯೂ ಆದಮೇಲೆ ಕಂಪನಿಯ ಮ್ಯಾನೇಜರು ಇವನನ್ನು ತಮ್ಮ ಪ್ರೈವೇಟ್ ಛೇಂಬರ್ನಿಗೆ ಕರೆಸಿ, "ನೋಡಿ, ಈ ಕೆಲಸಕ್ಕಾಗಿ ಇನ್ನೂರು ಅಪ್ಲಿಕೇಷನ್‌ಗಳು ಬಂದಿದ್ದವು. ಅವುಗಳಲ್ಲಿ ಹನ್ನೆರಡು ಜನಕ್ಕೆ ಇಂಟರ್‌ವ್ಯೂಗೆ ಸೆಲೆಕ್ಟ್ ಮಾಡಿದರು. ನಿಮ್ಮ ಹೆಸರನ್ನು ಕೂಡ ನನ್ನ ಒತ್ತಾಯದ

ಮೇಲೆಯೇ ಆ ಲಿಸ್ಟಿನಲ್ಲಿ ಸೇರಿಸಿದರು. ನನ್ನ ಕೈಲಾದ ಸಹಾಯವನ್ನು ಮಾಡಿದ್ದೇನೆ; ಮುಂದೆಯೂ ಮಾಡುತ್ತೇನೆಂಬ ಭರವಸೆ ಕೊಡುತ್ತೇನೆ. ಯಾವುದೂ ನಾಡಿದ್ದು ಇತ್ಯರ್ಥವಾಗುತ್ತೆ" ಎಂದು ಆತ ಹೇಳಿದ. "ಆಗಲಿ ಸಾರ್! ತಮ್ಮ ಉಪಕಾರ ನಾನು ಮರೆಯೋದಿಲ್ಲ. ಬರುತ್ತೇನೆ. ನಮಸ್ಕಾರ" ಎಂದು ಶ್ರೀನಾಥನು ಬಂದು ಬಿಟ್ಟನು.

ಅವನ ಮುಖದ ಭಾವಗಳು ಯೋಚನೆಗಳು ತಲೆಗೇರಿದಂತೆಲ್ಲಾ ಬದಲಾಯಿಸತೊಡಗಿದವು. "ಇದೇನು, ಈ ಕೆಲಸವೂ ಅನುಮಾನಾಸ್ಪದವಾಗಿದೆಯಲ್ಲಾ! ಆಗಲಿ ನೋಡೋಣ. ಇನ್ನೂ ಎರಡು ದಿನಗಳಿವೆ. ಏನಾಗುವುದೋ? ನನಗೆ ಅದೃಷ್ಟವಿದ್ದರೆ—ಕೆಲಸ ಸಿಗುವಂತೆ ನನ್ನ ಹಣೆಯಲ್ಲಿ ಬರೆದಿದ್ದರೆ--ಸಿಗಲಿ. ಇಲ್ಲದಿದ್ದರೆ........". ಅವನ ಕಣ್ಣುಗಳು ಮಂಜಾದವು. ಒಂದು ಕ್ಷಣ ಪ್ರಪಂಚವೇ ತಲೆಕೆಳಗಾದಂತೆ ಭಾಸವಾಯಿತು. ತೂರಾಡುತ್ತಾ ಮನೆಗೆ ಬಂದವನು 'ಉಸ್' ಎಂದು ಉಸಿರ್ಗರೆದು ಅಲ್ಲಿದ್ದ ಚಾಪೆಯಮೇಲೆ ಹಾಗೆಯೇ ಮಗ್ಗುಲಾದನು. ಸದ್ದಿಲ್ಲದಂತೆ ಬಂದು ಮಲಗಿ ನಿದ್ದೆ ಹೋಗುತ್ತಿರುವ ಪತಿಯನ್ನು ನೋಡಿ ಲಲಿತಳಿಗೆ ಆಶ್ಚರ್ಯವಾಯಿತು. "ಅದೇಕೆ ಹೀಗೆ ಮಾಡಿದರು!" ಎಂದು ಅನುಮಾನಾವಿರ್ಭವಿತಳಾಗಿ ಅವನ ಬಳಿ ಸುಮ್ಮನೆ ಕುಳಿತಳು.

ಶ್ರೀನಾಥನು ಸ್ವಲ್ಪ ಹೊತ್ತಿನಲ್ಲೇ, "ಲೇ ಪಿಶಾಚಿ!" ಎಂದು ಗದರಿದ. ಲಲಿತಳು ಗಾಬರಿಯಿಂದ ಅವನನ್ನು ನೋಡಿದಳು. ಮುಚ್ಚಿದ್ದ ಕಣ್ಣು ಮುಚ್ಚಿದ್ದ ಹಾಗೆಯೇ ಇತ್ತು. ಕೊಂಚ ಹೊತ್ತಾದ ಮೇಲೆ, "ನನ್ನನ್ನು ಹಾಸ್ಯ ಮಾಡುಪೆಯಾ? ............ ಆಂ ............ ಆಗಲಿ ........ ಅಯ್ಯೋ ಹೀಗೆ ............ ಎಷ್ಟು ಜನ ಕಷ್ಟ ಪಡುವರು ............ ಹೂಂ !" ಎಂದು ಸುಮ್ಮನಾದನು. ಅವಳಿಗೆ ಒಂದೂ ಅರ್ಥವಾಗಲೊಲ್ಲದು. "ಇದೇನು ಕನಸೋ ಕಳವಳವೋ!" ಎಂದು ಯೋಚಿಸುವಳು. ಆದರೆ ಬಗೆಹರಿಯಲೊಲ್ಲದು. ಮತ್ತೆ ಶ್ರೀನಾಥನು, "ಹಾ ! ............ ನಗುವೆಯಾ ............ ನನ್ನ ಸ್ಥಿತಿಯನ್ನು ನೋಡಿ ! ............ ಹಾಸ್ಯ ಮಾಡುವೆಯಾ ! ............

ಬೇಡ !...........ನನ್ನೊಡನೆ...........ಹಾಸ್ಯ........ಬೇಡ !............ನನಗೆ ............ ಕೋಪಬಂದರೆ ............ ಅನಾಹುತ ............ ತಿಳಿದುಕೋ" ಎಂದು ಸುಮ್ಮನಾದ. "ಎಂದೂ ಇಲ್ಲದ್ದು ಇಂದೇಕೆ ಹೀಗೆ ಮಾಡುವ ರಪ್ಪಾ!" ಎಂದು ಲಲಿತಳ ಚಿಂತೆ. ಅವನು ಇದ್ದಕ್ಕಿದ್ದಂತೆಯೇ, "ಬೇಡ ............ ನಿನಗೆ ............ ಗ್ರಹಚಾರ ಕಡಮೆಯಾಗಿದೆ ........ ಆಗುತ್ತಿ ತಾಳು" ಎಂದು ಹಲ್ಲುಕಚ್ಚಿ, ಮುಷ್ಟಿ ಎತ್ತಿ ಲಲಿತಳ ಕಡೆಗೆ ಬೀರುವುದರಲ್ಲಿ ದ್ದನು. ಅವಳು ಹೆದರಿ ಪಕ್ಕಕ್ಕೆ ಸರಿದಳು. ಅವನು "ಸಾಯಿ ............ " ಎಂದು ಕೈಯನ್ನು ನೆಲಕ್ಕೆ ಕುಕ್ಕಿ ಹಾಗೆಯೇ ಹೊರಳಿದನು. ಲಲಿತಳು, "ಕೆಟ್ಟ ಕನಸಿರಬೇಕು; ಎಬ್ಬಿಸಬಿಡಲೇ" ಎಂದು ಯೋಚಿಸಿದಳು. ಎಬ್ಬಿಸಿ ದರೇನೆನ್ನುವರೋ ಎಂಬ ಭಯ. ಯಾವುದೂ ತೋಚದೆ ಅಲ್ಲಿಯೇ ಬಿದ್ದಿದ್ದ ಹರಕು ಬೀಸಣಿಗೆಯಿಂದ ಅವನಿಗೆ ಗಾಳಿ ಹಾಕುತ್ತಾ ಜಂತಿಕೆಗಳನ್ನು ಎಣಿ ಸುತ್ತಿದ್ದಳು. ಅವನು ಮತ್ತೆ, "ಇನ್ನೂ ಸಾಯಲಿಲ್ಲವೆ ............ ಮತ್ತೆ ........ ಮತ್ತೆ ............ ನಗುವೆಯಾ ............ ಹಲ್ಲು ಮುರಿಯುವೆನು" ಎಂದು ಕೈ ಎತ್ತಿ ಅಲ್ಲೇ ಕುಳಿತಿದ್ದ ಲಲಿತಳಿಗೆ ಗುದ್ದಿಬಿಟ್ಟ. ಅವಳು ಹಿಂದಕ್ಕೆ ಹಾಗೆಯೇ ಬಿದ್ದುಬಿಟ್ಟಳು.

ಕೊಂಚಹೊತ್ತಾದ ಮೇಲೆ, ಶ್ರೀನಾಥನು ದೀರ್ಘವಾಗಿ ಉಸಿರೆಳೆದು ಕಣ್ಣುಜ್ಜಿಕೊಂಡು ಎದ್ದನು. ಲಲಿತಳು ತಲೆಯನ್ನು ಭದ್ರವಾಗಿ ಹಿಡಿದು ಕೊಂಡಿದ್ದಳು. ಬೆರಳಿನ ಸಂದಿಯಿಂದ ರಕ್ತವು ತೊಟ್ಟಿಕ್ಕುತ್ತಿತ್ತು. ಅದನ್ನು ನೋಡಿ, "ಏನಿದು ಲಲಿತಾ, ರಕ್ತ!" ಎಂದನು. ಅವಳು,"ಕಾಲುಜಾರಿ ಬಿದ್ದೆ ತಲೆಗೆ ಏಟುಬಿದ್ದು ರಕ್ತ ಬರುತ್ತಾ ಇದೆ" ಎಂದು ಉತ್ತರವಿತ್ತಳು. ಪತಿಗೆ ನಿಜವನ್ನು ಹೇಳಲು ಹಿಂಜರಿದಳು! ಅವನು ಒಡನೆಯೇ ಒಂದು ಒದ್ದೆಯ ಬಟ್ಟೆಯನ್ನು ಅವಳ ತಲೆಗೆ ಕಟ್ಟಿದನು. ಆಮೇಲೆ ಅವನೇ ತಾನು ಹೋಗಿದ್ದು, ಅಲ್ಲಿ ನಡೆದದ್ದು ಎಲ್ಲವನ್ನೂ ಹೇಳಿದ. ಅವಳು "ಹು" ಎಂದು ಸುಮ್ಮನಾದಳು.

* * *

ಶ್ರೀನಾಥನು ಬಂದ ನಾಲಗಾರರಿಗೆಲ್ಲಾ, "ನಾಳೆ ಕೆಲಸದ ವಿಷಯ ಗೊತ್ತಾಗುತ್ತೆ. ನಾಳಿದ್ದು ಸಾಯಂಕಾಲ ಬನ್ನಿ. ಹೇಗಾದರೂ ಮಾಡಿ ಸ್ವಲ್ಪ ಹಣವನ್ನಾದರೂ ಕೊಡುತ್ತೇನೆ" ಎಂದು ಹೇಳುತ್ತಿದ್ದನು. ಚಿಕ್ಕಂದಿನಿಂದ ಅನುಭವಿಸಿದ ದುಃಖ, ಕೆಲಸದಲ್ಲಿನ ಯೋಚನೆ, ಇವುಗಳಿಂದ ಬೇಜಾರಾಗಿ ಜೀವನವೇ ಸಾಕು, ಪ್ರಾಣಹೋದರೆ ವಾಸಿ ಎನ್ನುವ ಸ್ಥಿತಿಗೆ ಬಂದಿತ್ತು ಅವನ ಮನಸ್ಸು. ಹಾಗೆಯೇ ಏನೇನೋ ಯೋಚಿಸುತ್ತ ಕುಳಿತಿದ್ದನು. ಮನೆಯ ಮಾಲೀಕರು, "ಏನಪ್ಪಾ ನಿನ್ನ ಕೆಲಸದ ಸಮಾಚಾರ ಏನಾಯಿತು? ಇದನ್ನೂ ಕೇಳಿಕೊಂಡು, ಹಾಗೆ ನಿನ್ನೂ ನೋಡಿಕೊಂಡು ಹೋಗೋಣಾಂತ ಬಂದೆ" ಎಂದು ದೀರ್ಘ ತೆಗೆದುಕೊಂಡೇ ಬಂದರು. "ಯಾವುದೂ ನಾಳೆ ಗೊತ್ತಾಗುತ್ತೆ. ಕೆಲಸ ಆದಮೇಲೆ ಹೇಗಾದರೂಮಾಡಿ ಕೊಂಚ ದುಡ್ಡನ್ನಾದರೂ ಕೊಡುತ್ತೇನೆ" ಎಂದು ಶ್ರೀನಾಥ ಹೇಳಿದನು. "ನನಗೂ ಈಚೆಗೆ ಬಹಳ ತೊಂದರೆಯಪ್ಪ. ಇಲ್ಲದೇ ಇದ್ದರೆ ಬರುತ್ತಲೇ ಇರಲಿಲ್ಲ. ಇನ್ನೂ ಒಂದಲ್ಲ—ಎರಡಲ್ಲ—ನೀನು ಸರಿಯಾಗಿ ಒಂದು ಸ್ಥಿತಿಗೆ ಬಂದು ನಿಲ್ಲೋವರೆಗೂ ನಿನ್ನ ಕೇಳಬೇಕಾಗಿಯೇ ಇರಲಿಲ್ಲ." ಎಂದು ಕೈ ಹೊಸಕಿಕೊಳ್ಳುತ್ತಾ ಮನೆಯನ್ನು ನೋಡಿ, "ಅಲ್ಲಲ್ಲೇ ಬಿದ್ದುಹೋಗಿದೆ ರಿಪೇರಿ ಮಾಡಿಸಬೇಕು. ಮಳೆಗಾಲ ಬೇರೆ!" ಎಂದರು. ಆಮೇಲೆ ಕೊಂಚಕಾಲ ಅದೂ ಇದೂ ಮಾತನಾಡುತ್ತಾ ಇದ್ದು, "ಬರುತ್ತೇನಪ್ಪ! ಮರಿಬೇಡ" ಎಂದು ಹೊರಟುಹೋದರು.

ಶ್ರೀನಾಥನು ಕೊಂಚ ಹೊತ್ತು ಆತನು ಹೋದ ಮಾರ್ಗವನ್ನೇ ನೋಡುತ್ತಿದ್ದು, "ಹಾಳು ಜೀವಕ್ಕೆ ಬೆಂಕಿ ಹಾಕಿ ಸುಡು. ಎಲ್ಲರಿಗೂ ಕೆಲಸ ಸಿಕ್ಕುತ್ತೆ. ದುಡ್ಡು ಕೊಡುತ್ತೇನೆ ಎಂದು ಹೇಳಿಬಿಟ್ಟಿದ್ದೇನೆ. ಕೆಲಸ ಸಿಕ್ಕುವುದಾದರೂ ಖಂಡಿತವೇ? ಒಂದು ವೇಳೆ ಸಿಕ್ಕರೆ ತಾನೆ ದುಡ್ಡು ಒಡನೆಯೇ ಹೇಗೆ ಬರುತ್ತೆ?— ಮ್ಯಾನೇಜರಿಗೆ ಹೇಳಿ ಒಂದು ತಿಂಗಳು ಸಂಬಳ ಅಡ್ವಾನ್ಸ್ ತೆಗೆದುಕೊಳ್ಳುವುದು .... ... ಅಲ್ಲವೇ? .... ಅಯ್ಯೋ ಯೋಚನೆಯೇ? ಕೆಲಸದ್ದೇ ನಿಜವಿಲ್ಲ.... ಇವೆಲ್ಲ ಏಕೆ? ಒಂದು ವೇಳೆ ಕೆಲಸ ಸಿಕ್ಕದಿದ್ದರೆ, ಅವರಿಗೆಲ್ಲಾ ಏನು ಉತ್ತರ ಕೊಡಲಿ? ಅವರು ತಾನೆ ಎಷ್ಟು ದಿನಾಂತ ತಡೆದಾರು?

ನನಗೆ ಕೆಲಸವಾಗದೆ—ಅವರಿಗೆ ದುಡ್ಡು-ಕೊಡಲಾಗದೆ....ಅವರುಗಳು ದಾವ ಹಾಕಿದರೆ....ಜೈಲ್‌ವಾರಂಟ್ ತಂದರೆ....ಅಬ್ಬಾ........ಆಗ........ಅಯ್ಯೋ ದೈವವೇ........ನನಗೇಕೆ ಇಷ್ಟು ಕಷ್ಟ ಕೊಡುವೆ....ಏನೇನು ಆಗುವುದೋ ಎಲ್ಲಾ ಆಗಲಿ!" ಎಂದು ಇನ್ನೂ ಏನೇನೋ ಗೊಣಗಿಕೊಂಡನು.

* * *

ಬೆಳ್ಳಗೆ ಎದ್ದಾಗಿನಿಂದಲೂ ಇಬ್ಬರೂ ಸಂತೋಷದಿಂದ ಇದ್ದಾರೆ. ಲಲಿತಳಿಗೆ, ಕೆಲಸವು ತನ್ನಿನಿಯನಿಗೆ ಸಿಕ್ಕೇಸಿಕ್ಕುವುದೆಂಬ ದೃಢವಾದ ನಂಬಿಕೆ. ಶ್ರೀನಾಥನ ಮನಸ್ಸು ಮಾತ್ರ ಇನ್ನೂ ಹರಿದಾಡುತ್ತಿದೆ. ಅಂದು ಎದ್ದಾಗಿನಿಂದ ಎಲ್ಲವೂ ಶುಭಶಕುನಗಳೇ!

ಟಪಾಲಿನವನು ಬಂದು ಶ್ರೀನಾಥನಿಗೆ ಒಂದು ಲಕ್ಕೋಟೆಯುನ್ನು ಕೊಟ್ಟ. ಲಲಿತಳು ಕೆಲಸ ಸಿಕ್ಕಿತೆಂದೇ ತಿಳಿದು ಡಬ್ಬಿಯಲ್ಲಿದ್ದ ಕೊಂಚ ಸಕ್ಕರೆಯನ್ನು ತಾನು ಸ್ವಲ್ಪ ತಿಂದು, " ಸದ್ಯ ಇವತ್ತಿಗೆ ನಮ್ಮ ಕಷ್ಟ ವೆಲ್ಲಾ ಹರಿಯಿತು! ನೀವೂ ಬಾಯಿ ಸೀಗೆಮಾಡಿಕೊಳ್ಳಿ!" ಎಂದು ಅವನ ಬಾಯಲ್ಲಿ ಸಕ್ಕರೆಯನ್ನು ಹಾಕಲುಹೋದಳು. ಆದರೆ ಶ್ರೀನಾಥನು, "ನನ್ನನ್ನು ನೋಡಿ ನಿನಗೂ ಹಾಸ್ಯವಾಯಿತಲ್ಲವೇ! ಅಯ್ಯೋ ದೈವವೇ!" ಎಂದು ಅವಳ ಕೈಯನ್ನು ಕೊಡವಿ ದುರುಗುಟ್ಟಿಕೊಂಡು ಕೆಂಡದ ಕಣ್ಣಿನಿಂದ ನೋಡಿದ. ಉರಿಯುವ ಬೆಂಕಿಗೆ ಹಸಿ ಕಟ್ಟಿಗೆಯನ್ನಿಟ್ಟರೆ ಅದರ ನೀರು ಸುಯ್ ಎಂದು ಕಟ್ಟಿಗೆಯಿಂದ ಈಚೆಗೆ ಬರುವಂತೆ ಅವನ ಕೋಪವು ಅವನ ಹೃದಯ ದೊಳಗಿದ್ದ ದುಃಖವನ್ನು ಹೊರಗಟ್ಟಿ ಕಣ್ಣೀರನ್ನು ಈಚೆಗೆ ತಂದಿತು. ಲಲಿತಳು ಅವಾಕ್ಕಾಗಿ ಶ್ರೀನಾಥನನ್ನೇ ನೋಡತೊಡಗಿದಳು. ಅವಳ ಮುಖವು ಭಯದಿಂದ ಕಂಪಿಸುತ್ತಿತ್ತು. ಶ್ರೀನಾಥನ ಮುಖವೆಲ್ಲಾ ಕೆಂಡ ದಂತೆ ಕೆಂಪಗಾಗಿ ತುಟಿಗಳು ಅದುರುತ್ತಿದ್ದವು. " ಏಕೆ ದೆವ್ವದ ಹಾಗೆ ನಿಂತಿದ್ದೀಯೆ? ನಗು, ಸಾಯುವವರೆಗೂ ನಗು. ನನಗೆ ಕೆಲಸ ಸಿಕ್ಕಿದರೆಷ್ಟು ಬಿಟ್ಟರೆಷ್ಟು. ನಿನಗೆ ಸಂತೋಷವಾಗಿದೆಯಲ್ಲಾ, ಥು! ದೂರ ಬಿಡು" ಎಂದು ಉರಿದು ಬಿದ್ದ! "ಅಲ್ಲ! ನಾನು........" ಎಂದು ಲಲಿತಳು ಹೇಳುವಷ್ಟ

ರಲ್ಲಿಯೇ ಅವನು ಅವಳನ್ನು ಪಕ್ಕಕ್ಕೆ ನೂಕಿ, ಮನೆಯಿಂದ ಹೊರಟುಹೋಗಿದ್ದ. ಲಲಿತಳೇಕೆ? ಅವನೇ, ಅವನ ಇಂತಹ ಕೋಪವನ್ನು ಕಂಡಿರಲಿಲ್ಲ! "ಅಯ್ಯೋ ನನಗೇಕೆ ಅಷ್ಟರಲ್ಲೇ ಅವಸರವಾಗಿತ್ತು. ಇನ್ನೂ ಏನೇನಾಗುವುದೋ ? ದೇವರೇ ನನಗೇಕೆ ಈ ದುರ್ಬುದ್ಧಿಯನ್ನು ಕೊಟ್ಟೆ. ಅಯ್ಯೋ ಏನುಮಾಡಲಿ? ಕೋಪದಲ್ಲಿ ಇನ್ನೆಲ್ಲಿಗಾದರೂ ಹೊರಟುಹೋಗುತ್ತಾರೋ ಏನೋ. ಸದ್ಯ ಮನೆಗೆ ಬಂದರೆ ಸಾಕು!" ಎಂದು ಬಹುಪರಿಯಾಗಿ ಹಲುಬಿ, ಏನೂ ತೋಚದವಳಾಗಿ ಸುಮ್ಮನೆ ಅಲ್ಲೇ, ಬಾಗಿಲ ಬಳಿಯಲ್ಲೇ ಕುಳಿತಿದ್ದಳು.

ಸಂಜೆಯಾದರೂ ಲಲಿತಳು ಆ ಜಾಗ ಬಿಟ್ಟು ಕದಲಲಿಲ್ಲ. ಅವಳ ದೃಷ್ಟಿಯೆಲ್ಲಾ ಬೀದಿಯಕಡೆಗೆ ಇತ್ತು. ಯಾರಾದರೂ ದೂರದಲ್ಲಿ ಬರುತ್ತಿರುವುದನ್ನು ಕಂಡರೆ, ತನ್ನ ಪತಿಯೇ ಬಂದನೆಂದು ಭ್ರಾಂತಿಗೊಳ್ಳುವಳು. ಅವನಲ್ಲವೆಂದು ತಿಳಿದಮೇಲೆ ನಿರಾಶಳಾಗಿ ಆಕಾಶವನ್ನು ನೋಡುವಳು. " ಅಯ್ಯೋ ಇನ್ನೂ ಬರಲಿಲ್ಲವೇ ? ವಿಪರೀತ ಮೋಡ ಬೇರೆ ಕವಿದಿದೆ. ಎಲ್ಲಿ ಮಳೆಗೆ ಸಿಕ್ಕುತ್ತಾರೋ ಏನೋ" ಎಂದು ಅಂದುಕೊಳ್ಳುತ್ತಿದ್ದ ಹಾಗೆಯೇ ಮುಗಿಲೊಮ್ಮೆ ಘರ್ಜಿಸಿತು. ಲಲಿತಳ ಹೃದಯವು ಭಯದಿಂದ ಹೊಡೆದು ಕೊಳ್ಳುತ್ತಿತ್ತು. "ಅಯ್ಯೋ! ದೇವರೆ, ಏನಾದರೂ ಮಾಡಿ ಅವರು ಬೇಗ ಮನೆಗೆ ಬರುವಹಾಗೆ ಮಾಡಪ್ಪಾ. ಬಂದಕೂಡಲೇ 'ನನ್ನದು ತಪ್ಪಾಯಿತು ನಾನು ಬೇಕೂಂತ ಹಾಗೆ ಮಾಡಲಿಲ್ಲ. ತಿಳಿಯದೆ ದುಡುಕಿ ಮಾಡಿದೆ ಕ್ಷಮಿಸಿ' ಅಂತ ಕೇಳಿಕೊಂಡು ಬಿಡುತ್ತೇನೆ" ಎಂದು ಮೊರೆಯಿಟ್ಟಳು. " ನಾನು ಹಾಗೆ ಕೇಳಿಕೊಂಡರೆ ಅವರ ಕೋಪ ಖಂಡಿತವಾಗಿ ಶಾಂತವಾಗುತ್ತೆ. ಅವರದು ಬಹಳ ಮೃದುವಾದ ಮನಸ್ಸು. ಸದ್ಯ, ಈಗ ಅವರ ಮನಸ್ಸು ಸಮಾಧಾನವಾಗಿಬಿಟ್ಟರೆ ಇನ್ನುಮೇಲೆ ನಾನು ದುಡುಕೋಲ್ಲ" ಎಂದು ಲೆಕ್ಕ ಹಾಕಿ, ಮತ್ತೊಮ್ಮೆ ಬೀದಿಯ ಕಡೆ ನೋಡಿದಳು. " ಥೂ, ಹಾಳು ನನ್ನಿಂದ ಅಲ್ಲವೇ ಇಷ್ಟೆಲ್ಲಾ ಆದದ್ದು" ಎಂದು ತಲೆಕುಟ್ಟಿಕೊಂಡಳು. ತಾನು ಮಾಡಿದ ತಪ್ಪಿಗೆ ದುಃಖಪಟ್ಟಳು; ಪಶ್ಚಾತ್ತಾಪ ಪಟ್ಟಳು; ಮುಂದೆ ಹಾಗೆ ಮಾಡುವುದಿಲ್ಲವೆಂದು ನಿರ್ಧರಮಾಡಿಕೊಂಡಳು; ಆದರೂ ಶ್ರೀನಾಥನು ಬರಲಿಲ್ಲ!

## ಹದಿನೆಂಟು

ಲಲಿತಳು ಎದ್ದು ದೀಪ ಮುಡಿಸಿ ಬೀದಿಯ ಬಾಗಿಲಿಗೆ ಬರುವ ಹೊತ್ತಿಗೆ ಸರಿಯಾಗಿ ಶ್ರೀನಾಥನು ಮನೆಗಂತೂ ಬಂದನು. ಅವನ ಮುಖದ ಮೇಲೆ ಕೋಪವಾಗಲಿ, ದುಃಖವಾಗಲಿ, ಯಾವುದೂ ಇಲ್ಲದೆ ಒಂದು ತರಹ ಗಂಭೀರವಾದ ನಿಶ್ಚಲತೆ ಮೂಡಿದೆ. ಅವನ ಗಂಭೀರ ಮುಖ ಮುದ್ರೆಯನ್ನು ನೋಡಿ ಲಲಿತಳು ಸಮಾಧಾನಪಟ್ಟುಕೊಂಡು, "ಈಗತಾನೆ ಬಂದಿದ್ದಾರೆ. ಬೆಳಗಿನದನ್ನೇಕೆ ಮತ್ತೆ ಜ್ಞಾಪಿಸಬೇಕು? ಸಮಯ ಬಂದಾಗ ಇದ್ದ ವಿಷಯ ಗಳನ್ನು ಹೇಳುವುದು" ಎಂದುಕೊಂಡು ಸುಮ್ಮನಾದಳು. ಶ್ರೀನಾಥನು ಜೇಬಿನಿಂದ ಒಂದು ಸೀಸೆಯನ್ನು ತೆಗೆದು, "ಒಂದು ಲೋಟ ಕೊಡು ಲಲಿತ, ಔಷಧಿ ತೆಗೆದುಕೊಳ್ಳಬೇಕು. ಆಲಸ್ಯವಾಗಿದೆ" ಎಂದನು. ಅವಳು ಲೋಟವನ್ನು ತಂದುಕೊಟ್ಟಳು. ಸೀಸೆಯೊಳಗಿನ ಎಲ್ಲಾ ಔಷಧಿಯನ್ನೂ ಹಾಕಿಕೊಂಡನು. "ಇದೇನು ಎಲ್ಲವನ್ನೂ ಒಂದೇ ಸಲ ಹಾಕಿಕೊಂಡಿರಿ, ಮೂರು ಸಲಕ್ಕಲ್ಲವೆ ಔಷಧಿ ಕೊಡುವುದು?" ಎಂದು ಲಲಿತ ಕೇಳಿದಳು. ಅವನು ಅದನ್ನು ಕುಡಿದು, "ಇಲ್ಲ! ಲಲಿತ, ಈ ಔಷಧಿ ಜೀವನದಲ್ಲಿ ಒಂದೇ ಒಂದುಸಲ, ಒಂದೇ ಒಂದು ಡೋಜಿನಲ್ಲಿ ಕುಡಿಯಬೇಕಂತೆ. ಇದು ಕಷ್ಟಪಡು ವವರಿಗೆ—ದುಃಖ ಬಹಳವಿದ್ದವರಿಗೆ—ಜೀವನವು ಬಹಳ ಬೇಸರವಾದವ ರಿಗೆ—ಬಹಳ ಚುರುಕಾದ ಔಷಧ. ಡಾಕ್ಟರು ಹಾಗಂತ ಹೇಳಿದ್ದಾರೆ........ ಅಯ್ಯೋ ಹುಚ್ಚಿ! ಎಲ್ಲಿಂದ ಬಂತೇ ಇನ್ನು ಮೂರು ಡೋಜು? ಎಲ್ಲಿ ಈಗ ನಗು; ಬಾಯಿ ಸೀ ಮಾಡಿಕೋ; ಅದನ್ನು ಇನ್ನೊಮ್ಮೆ ನೋಡಿಬಿಡುತ್ತೇನೆ" ಎಂದನು. ಲಲಿತಳಿಗೆ ಒಂದೂ ಅರ್ಥವಾಗದೆ ತಟಸ್ಥಳಾಗಿ ನಿಂತುಬಿಟ್ಟಳು. "ಯಾಕೆ ಲಲಿತ ಹಾಗೆ ನಿಂತುಬಿಟ್ಟೆ. ಇಗೋ ನೋಡು. ಇದು, ನನ್ನ ಜೀವಕ್ಕೆ ಅನಂತವಾದ ಶಾಂತಿ ಕೊಡುವ ದ್ರಾವಕ. ಇದನ್ನು ತೆಗೆದುಕೊಂಡದ್ದು ನಿನ್ನ ಮೇಲಿನ ಕೋಪಕ್ಕಲ್ಲ. ಕಷ್ಟಕ್ಕೆ ಈಡುಮಾಡಿದ ಆಶೆಗೆ ಆಹುತಿಯಾಗಿ ನನ್ನನ್ನು ಸಮರ್ಪಿಸುವುದಕ್ಕೆ. ತಿಳಿಯಿತೇ.... ಅಯ್ಯೋ.... ಕಾಲುಭಾರ........ ಸೇದುತ್ತೆ........ ಒತ್ತು.... ಲಲಿತ........" ಅವನ ಕಾಲುಗಳನ್ನು ಮೂಕಳಂತೆ ಅವಳು ಒತ್ತಲು ಮೊದಲು ಮಾಡಿದಳು.

ಹತ್ತೊಂಬತ್ತು

ಶ್ರೀನಾಥನ ಮುಖದ ಬಣ್ಣವು ಬದಲಾಯಿಸುತ್ತಾ ಬಂತು. ಕಣ್ಣು ಗುಡ್ಡುಗಳು ತಿರುಗಲಾರಂಭಿಸಿದವು. " ಇಗೋ........ನೋಡು....ಆಹುತಿಯು....ಕಡೆ....ದೃ....ಶ....ಆ........ಆ...........ಆ...........' ಅನ್ನುತ್ತಿದ್ದ ಹಾಗೆಯೇ ಆಯಿತು ಅವನ ಮೈ ತಣ್ಣಗೆ! ಅವನ ಆತ್ಮವು, ಎಲ್ಲರಿಗೂ ಒಂದೇ ಬಗೆಯಿಂದಿರಲು ಸಾಧ್ಯವಾಗುವ, ಉದ್ಯೋಗವೇ ಇಲ್ಲದ ಶಾಂತಿ ಸಾಗರಕ್ಕೆ ಹಾರಿತ್ತು.

ಲಲಿತಳು ಚೀರಿದಳು. ಅತ್ತಳು. ಮರುಗಿದಳು. ತಲೆ ಚಚ್ಚಿಕೊಂಡಳು. ದೈವವನ್ನು ಹಳಿದಳು. ದಿಕ್ಕುತೋರದಾದಳು. ಕಡೆಗೆ ಅವಳು—ಗಂಡನು ಹೋದಮೇಲೆ ಯಾರಿಗೂ ಬೇಡದಾದ ಅವಳು— ಅದೇ ಸೀಸೆಗೆ ನೀರುಹಾಕಿ ಕುಲುಕಿ ಕುಡಿದುಬಿಟ್ಟಳು. ಕೊಂಚ ಹೊತ್ತಾದಮೇಲೆ ಮೂರ್ಛಿತಳಾದ ಅವಳು ಪತಿಯ ಶವದಮೇಲೇ ಬಿದ್ದಳು!

ಒಂದೆರಡು ನಿಮಿಷಗಳವರೆಗೆ ಅಲ್ಲಿ ಶಾಂತವಾಗಿ ಗಂಭೀರವಾಗಿತ್ತು. ಇದ್ದಕ್ಕಿದ್ದಂತೆಯೇ, ಬಿರುಸಾದ ಬಿರುಗಾಳಿ ಎದ್ದು ಮೊದಲಿದ್ದ ತುಂತುರು ಮಳೆಯು ಆನೆಕಲ್ಲಿನ ಮಳೆಯಾಗಿ ಸುರಿಯಲಾರಂಭಿಸಿತು. ಬಿರುಗಾಳಿಯ ಬಿರುಸಿನಲ್ಲಿ ಮನೆಯ ಹೆಂಚುಗಳು ಹಾರಿಹೋದವು. ಕೊಂಚ ಹೊತ್ತಾದ ಮೇಲೆ ಬಿರುಗಾಳಿಯು ನಿಂತರೂ ಮಳೆಯು ಭೋರೆಂದು ಸುರಿಯುತ್ತಲೇ ಇತ್ತು. ಬೆಳಗಾಗುವವರೆಗೂ ಒಂದೇ ಸಮನಾಗಿ ಸುರಿದ ಮಳೆಯಲ್ಲಿ ನೆನೆದ ಈ ಮನೆಯ ಹಳೆಯ ಗೋಡೆಗಳು ಕುಸಿದು ದೇಹಗಳ ಮೇಲೆ ಬಿದ್ದು, ಪ್ರಪಂಚಕ್ಕೆ ಬೇಡವಾಗಿದ್ದ ಜೀವಗಳನ್ನು ಇನ್ನು ಮುಂದೆ ಈ ತುಚ್ಛಪ್ರಪಂಚವು ನೋಡದಿರಲೆಂದು, ಅವನ್ನು ಮುಚ್ಚಿ ಗೋರಿ ಕಟ್ಟಿದವು!

* * *

ಪಾಪ! ಮನೆಯ ಮಾಲೀಕನು, ಮಳೆಗಾಲ, ಮನೆಯನ್ನು ರಿಪೇರಿ ಮಾಡಿಸಬೇಕೆಂದಿದ್ದನು. ಇನ್ನೆಲ್ಲಿಯ ರಿಪೇರಿ !

---

## ಬಿಡಿ ಹೂ

"ಅಮ್ಮಾ! ಅಮ್ಮಾ!" ಎನ್ನುತ್ತಾ ಓಡಿ ಬಂದಳು ಲೀಲು.

ತಾಯಿಯು ಮಗಳನ್ನು ಮುದ್ದಾಡಿ "ಏನಮ್ಮ?" ಎಂದರು.

"ಆ ಗಿಡದಲ್ಲಿ ಹೂವಾಗಿದೆ. ಬಹಳ ಚೆನ್ನಾಗಿದೆ ಅಮ್ಮ!"

"ಯಾವ ಗಿಡದಲ್ಲೆ?"

"ಅದೇ, ಅವತ್ತು ಅಪ್ಪ ಹಾಕಿದ ಹೊಸ ಗಿಡದಲ್ಲಿ!"

"ಅಷ್ಟೇ ತಾನೆ! ಗಿಡ ಹಾಕಿದ ಮೇಲೆ ಹೂ ಬಿಡಲೇಬೇಕು"

"ಹೂ ಬಿಡಲೇಬೇಕು! ಬಿಟ್ಟೇ ಇದೆ! ಅಂತಹ ಒಳ್ಳೆಯ ಹೂವನ್ನು ನಾನು ಇದುವರೆಗೂ ನೋಡಿಯೇ ಇಲ್ಲಮ್ಮ! ಅಷ್ಟುಬೇಕಾದರೆ ನೀನೆ ಬಂದು ನೋಡು. ಎಷ್ಟು ಚೆನ್ನಾಗಿದೆಯೋ?"

"ಹೂವುಗಳೆಲ್ಲವೂ ಚೆನ್ನವೇ ಕಣೆ!"

"ಈ ಹೂವು ಇನ್ನೂ ಚೆನ್ನಾಗಿದೆ. ಮತ್ತೂ ಚೆನ್ನಾಗಿದೆ............ ಬಂದು ನೋಡಬಾರದೇನೆ?"

"ಇಲ್ಲಿಗೇ ಕಿತ್ತುಕೊಂಡು ಬಾ, ನೋಡೋಣ ಅದೇನು ಇನ್ನೂ ಚೆನ್ನವೋ ಮತ್ತೂ ಚೆನ್ನವೋ"

"ಆ ಹೂ, ಅಲ್ಲೇ ಇದ್ದರೆ ಚೆನ್ನ ಅಮ್ಮ. ಅದನ್ನು ಕೀಳದೆ ಹಾಗೆಯೇ ಗಿಡದಲ್ಲೇ ಬಿಡಬೇಕು"

"ಹೋಗೆ ಹುಚ್ಚು ಹುಡುಗಿ! ಅಲ್ಲೇ ಇರಬೇಕಂತೆ—ಅದನ್ನು ಕೀಳಬಾರದಂತೆ........ಮಿಕ್ಕ ಹೂಗಳನ್ನು ಈಗ ಹೇಗಿದ್ದರೂ ಕಟ್ಟಬೇಕು. ಅದರ ಜೊತೆಯಲ್ಲಿ ಇದನ್ನೂ ಸೇರಿಸೋಣ. ಹೋಗಿ ಕಿತ್ತುಕೊಂಡು ಬಾ"

"ಬೇಡವಮ್ಮ ಅಲ್ಲೇ ಇರಲಿ—ಅದು ಅಲ್ಲೇ ಇರಲಿ!"

"ಹೂ ಗಿಡದಲ್ಲೇ ಇರುವುದಕ್ಕೇನೆ? ಮುಡಿಯುವುದಕ್ಕೆ!''

"ಹೂವೇನೋ ಮುಡಿಯುವುದಕ್ಕೆ ಸರಿ. ಆದರೆ ಎಲ್ಲಾ ಹೂವುಗಳೂ ಮುಡಿಯುವುದಕ್ಕಲ್ಲವಲ್ಲ?"

"ಏನೆ ಹಾಗಂದರೆ?"

"ಅಂದರೆ ಆ ಹೂವನ್ನು ಕಿತ್ತರೆ ಅದರ ಚೆಂದವೆಲ್ಲ ಹಾಳಾಗುತ್ತದೆ. ಈಗ ಅದು ಎಷ್ಟು ಚೆನ್ನಾಗಿದೆ. ಅಮ್ಮ ಬಂದು ನೋಡೆ!"

"ನೀನು ಕಿತ್ತು ತಂದಾಗ ನೋಡೇ ನೋಡುತ್ತೀನಲ್ಲ. ನಾನೇಕೆ ಬರ ಬೇಕೆ ಅಲ್ಲಿವರೆಗೆ?"

"ನೀನು ಬಂದು ನೋಡದಿದ್ದರೆ, ನಾನು ಅದನ್ನು ಕಿತ್ತುತರುವುದೇ ಇಲ್ಲ!''

"ಹಾಗಾದರೆ ಬರಲೇಬೇಕೇನೆ?"

"ಹೂ!" ಎಂದು ಲೀಲು ಎದ್ದಳು. ಅವಳ ತಾಯಿ ಪಾರ್ವತಮ್ಮನವರೂ ಎದ್ದರು. ಇಬ್ಬರೂ ಹಿಂದುಗಡೆಯಿದ್ದ ಹೂದೋಟದ ಕಡೆಗೆ ನಡೆದರು. ಲೀಲು ಓಡುತ್ತ ಓಡುತ್ತ ಆ ಗಿಡದ ಬಳಿಗೆ ಜಾಗ್ರತೆ ಹೋದಳು. ಪಾರ್ವತ ಮ್ಮನವರೂ ಅಲ್ಲಿಗೆ ಹೋದರು.

"ಅಮ್ಮ ನೋಡೆ ಎಷ್ಟು ಅಂದವಾಗಿದೆ ಈ ಹೂ''

ಲೀಲು ಹೇಳಿದ್ದು ನಿಜವಾಗಿತ್ತು. ಗಿಡಕ್ಕೆಲ್ಲಾ ಒಂದೇ ಒಂದು ಹೂ. ಲೀಲಾಜಾಲವಾಗಿ ಅಗಲವಾಗಿ ಅರಳಿದೆ. ನಗುವಿನ ಲಹರಿಯನ್ನೆಸೆಯುತ್ತಿರುವಂತೆ ಭಾಸವಾಗುತ್ತಿದೆ. ಗಾಳಿಯು ಬಿಸಿಲಿನಲ್ಲಿ ಕದ್ದು ಸುಳಿದಾಗ ಆ ಹೂವು ಅಲುಗಾಡುತ್ತಿದ್ದುದು, "ನೋಡಿ, ನಾನೆಷ್ಟು ಅಂದವಾಗಿದ್ದೇನೆ. ಎಷ್ಟು ಆನಂದದಿಂದ ಇದ್ದೇನೆ. ಜನಕ್ಕೆಲ್ಲ ಸೊಬಗನ್ನು ಬೀರಿ, ಆಕರ್ಷಿಸುತ್ತಿದ್ದೇನೆ. ನನ್ನನ್ನು ನೋಡಿ, ಆನಂದಿಸಲು ಬನ್ನಿ ! ಬನ್ನಿ !! ಬನ್ನಿ !!!" ಎಂದು ಕರೆಯುತ್ತಿರುವಂತೆ ಭಾಸವಾಗುತ್ತಿತ್ತು. ಅಂತಹ ಉರಿಬಿಸಿಲಿನಲ್ಲಿಯೂ ಕತ್ತ್ರಿತ್ತಿ, ಬಾಡದೆ ಬೆಡಗನ್ನು ಬೀರುತ್ತಿದೆ. ಎಂತಹ ಅಂದವಾದ ಹೂ.

ಅದರ ಬಣ್ಣ—ಇಂತಹುದೇ ಎಂದು ಹೇಳಲು ಸಾಧ್ಯವಿಲ್ಲ. ಆ ಬಣ್ಣಕ್ಕೇ ಒಂದು ಹೊಸ ಹೆಸರನ್ನಿಡಬೇಕು. ಅದೇ ಆ ಗಿಡದ ಮೊದಲ ಹೂ—ತಾಯಿಯ ಬಸಿರಿನಿಂದ ಹೊರಬಿದ್ದ ಚೊಚ್ಚಲ ಹಸುಗೂಸು—ಪ್ರಪಂಚದಲ್ಲಿ ಮುಂದೆ ಬೆಳಗುತ್ತೇನೆಂದು ಹಾರಾಡುತ್ತಿದೆ. ತನ್ನ ಅಂದವನ್ನು ನೋಡಿ ಎಲ್ಲರೂ ಬೆರಗಾಗುವರೆಂದು ಹಿಗ್ಗುತ್ತಿದೆ. "ಸೂರ್ಯನ ಕಿರಣಗಳ ತೀಕ್ಷ್ಣ ಕುಕ್ಕಾಣಿಕೆಯ ತಾಪಕ್ಕೆ ನಾನು ಜಗ್ಗುವುದೂ ಇಲ್ಲ—ಹೆದರುವುದೂ ಇಲ್ಲ" ಎಂದು ಕತ್ತೆತ್ತಿ ನಿಂತಿದೆ. "ಅಯ್ಯೋ, ನನ್ನ ಮುದ್ದುಗಾರ ಹೂವೇ! ನನ್ನ ಬಂಗಾರ ಹೂವೇ! ನನ್ನ ಹೂವೇ!" ಎಂದು ಮುತ್ತಿಟ್ಟುಕೊಳ್ಳಬೇಕೆನಿಸುವಷ್ಟು ಸೊಬಗನ್ನು ಬೀರುತ್ತಿದೆ. ಕೆಲವುವೇಳೆ ಗಾಳಿಯು ಭರ್ರೆಂದು ಬೀಸಿದರೆ, ಗಿಡದೆಲೆಯು ಅದರಮೇಲೆ ಬಾಗುತ್ತಿದ್ದುದು, "ನೀನು ಹಿಡಿಯಲು ಬಂದರೆ ಅಮ್ಮನ ಮಡಿಲಲ್ಲಿ ಸೇರುತ್ತೇನೆ" ಎಂದೂ, ಅದು ಕೊಂಚ ಕಂಡು ಕೊಂಚ ಕಾಣದಿರುವುದು, "ಎಲ್ಲಿ, ಈಗ ಹಿಡಿ ನೋಡೋಣ" ಎಂದು ಇಣಕಿ ನೋಡದಂತೆಯೂ ಭಾಸವಾಗುತ್ತಿತ್ತು.

ಇಂತಹ ಅಂದವಾದ ಹೂವನ್ನು ಮುಡಿಯಬೇಕೆಂದು ಯಾವ ಹೆಂಗಸು ತಾನೇ ಆಶಿಸುವುದಿಲ್ಲ? ಪಾರ್ವತಮ್ಮನವರಿಗೂ ಹಾಗೆಯೇ! ತಾವು ಮುಡಿಯಬೇಕೆಂದಲ್ಲ—ತಮ್ಮ ಒಬ್ಬಳೇ ಒಬ್ಬಳಾದ ಮಗಳ ನೀಳವಾದ ಹೆರಳಿನಲ್ಲಿ ಇಡಬೇಕು; ಅವಳಿಗೆ ಮೊದಲೇ ಇರುವ ಅಂದವಾದ ರೂಪಕ್ಕೆ ಇನ್ನೂ ಬೆಡಗನ್ನು ಹೂಡಬೇಕೆಂದು ಆಸೆ. ಕೀಳಬೇಕೆಂದು ಕೈ ಹಾಕಲಿದ್ದವರು, ಇನ್ನೂ ಇಲ್ಲೇ ಇರಲಿ ನೋಡೋಣ. ಮತ್ತೊಮ್ಮೆ ಕಣ್ತುಂಬ ನೋಡಿ ಆಮೇಲೆ ಕೀಳೋಣ ಎನ್ನಿಸಿತೇನೋ ಹಾಗೆಯೇ ನೋಡುತ್ತಲಿದ್ದರು. ಲೀಲುವಿನ ಸಂತೋಷಕ್ಕೆ ಪಾರವೇ ಇಲ್ಲ—ತಾನು ಹೇಳಿದುದು ನಿಜವೆಂದು ತಾಯಿಯು ಒಪ್ಪಿಕೊಂಡಹಾಗಾಯಿತಲ್ಲಾ ಎಂದು. ಹೂವನ್ನೇ ನೆಟ್ಟದೃಷ್ಟಿಯಲ್ಲಿ ನೋಡುತ್ತಲಿದ್ದಳು ಲೀಲು. ಈಕೆಯು ಒಮ್ಮೆ ಹೂವನ್ನೂ, ಒಮ್ಮೆ ಲೀಲುವಿನ ನಗುಮುಖವನ್ನೂ ನೋಡಿ ಹೋಲಿಸುತ್ತಿದ್ದರು. "ಲೀಲು ನನ್ನ ಬಸಿರಿನಿಂದ ಬಂದಹಾಗೆ ಇದೂ ತನ್ನ ತಾಯ್ಗಿಡದ ಬಸಿರಿನಿಂದ ಬಂದಿದೆ. ನಮ್ಮ

ಲೀಲು ಎಲ್ಲರಿಗೂ ಬೇಕಾದವಳು. ಎಲ್ಲರೂ ಅವಳ ರೂಪನ್ನು ಮೆಚ್ಚಿಕೊಳ್ಳು ವರು—ಇಂತಹ ರೂಪನ್ನೇ ಕಂಡಿಲ್ಲವೆನ್ನುವರು. ಈ ಹೂವೂ ಹಾಗೆಯೇ ಇದೆ. ಈ ಹೂವಿಗೆ ಸರಿಯಾದ ಸ್ಥಳವೇ ಲೀಲುವಿನ ಮುಡಿ. ಇದು ಅಲ್ಲೇ ಬೆಳಗಲಿ!" ಎಂದುಕೊಂಡು ಹೂಗಿಡಕ್ಕೆ ಕೈ ಹಾಕಲಿದ್ದರು.

"ಅಮ್ಮ ಕೀಳಬೇಡವೆ!" ಎಂದಳು ಲೀಲು.

"ಹೋಗೆ ಕೀಳಬೇಡವಂತೆ. ಅದು ಇವತ್ತು ನಿನ್ನ ಮುಡಿಯಲ್ಲಿ ಬೆಳಗ ಬೇಕು" ಎಂದು ಗಿಡಕ್ಕೆ ಕೈಹಾಕುವಹೊತ್ತಿಗೆ ಭರ್ರೆಂದು ಗಾಳಿಯು ಬೀಸಿತು. ತನ್ನ ಮಗುವನ್ನು ತನ್ನಿಂದ ದೂರಮಾಡುವರೆಂದು ಅರಿಯಿತೋ ಎಂಬಂತೆ ತಾಯ್ಗಿಡವು ಎಲೆಯಿಂದ ಹೂವನ್ನು ಮುಚ್ಚಿತು.

"ಅಮ್ಮ, ನೋಡಿದೆಯೋ ಅದಕ್ಕೆ ಕೀಳಿಸಿಕೊಳ್ಳುವುದಕ್ಕೆ ಇಷ್ಟವೇ ಇಲ್ಲ! ಅದಕ್ಕೇ ಎಲೆಯ ಸಂದಿಗೆ ಹೋಯಿತು. ಪಾಪ, ಹೋಗಲಿ ಬಿಟ್ಟು ಬಿಡಮ್ಮ, ಅದು ಅಲ್ಲೇ ಇರಲಿ" ಎಂದು ಹೇಳಿ ತಾಯಿಯ ಮುಖವನ್ನು ಹೂವಿನ ಪರವಾಗಿ ಬೇಡುವಂತೆ ದೈನ್ಯದಿಂದ ಲೀಲು ಈಕ್ಷಿಸಿದಳು.

"ಹೋಗೆ ಹುಚ್ಚು ಹುಡುಗಿ!" ಎಂದು ಪಾರ್ವತಮ್ಮನವರು ಹೂವನ್ನು ಕಿತ್ತುಕೊಂಡು ಒಳಕ್ಕೆ ನಡೆದೇ ಬಿಟ್ಟರು.

ಬರಿದಾದ ಗಿಡವು ಲೀಲುವಿಗೆ ಮಂಕಾಗಿ ಕಂಡಿತು. ಒಂದು ಕ್ಷಣದಲ್ಲಿ ಹೀಗಾಯಿತಲ್ಲ ಎಂದು ಬಹು ಸಂಕಟಪಟ್ಟಳು ಲೀಲು. "ಅಮ್ಮನಿಗೆ ಬುದ್ಧಿಯಿಲ್ಲ! ಎಂತಹ ಹೂವನ್ನು ಕಿತ್ತುಬಿಟ್ಟಳು. ನಾನು ಅಮ್ಮನಿಗೆ ಹೇಳದೆ ಹಾಗೆಯೇ ಇದ್ದಿದ್ದರೆ ........ ಪಾಪ, ಆ ಹೂವಿಗೂ ಕೀಳಿಸಿಕೊಳ್ಳುವುದಕ್ಕೆ ಇಷ್ಟವೇ ಇರಲಿಲ್ಲ. ಆ ಹೂ ಗಿಡದಲ್ಲಿದ್ದಾಗ ಗಿಡವು ಎಷ್ಟು ಅಂದವಾಗಿತ್ತು" ಎಂದುಕೊಂಡು ತಗ್ಗಿದ ತಲೆಯಿಂದ ನಿದಾನವಾಗಿ ಹೆಜ್ಜೆಯಿಡುತ್ತಾ ಒಳಕ್ಕೆ ಬಂದಳು.

ತಾಯಿಯು ಮಾಡಿದುದು ತಪ್ಪೆಂದೂ, ಹಾಗೆ ಮಾಡಬಾರದಾಗಿ ತ್ತೆಂದೂ ಲೀಲುವಿನ ಅಭಿಪ್ರಾಯ. ಕೇವಲ ಹತ್ತು ವರ್ಷದ ಹುಡುಗಿಯಲ್ಲಿ

ಎಂತಹ ವಿಶಾಲವಾದ ಉಚ್ಚ ಭಾವನೆ. ಭಾವನೆಯು ಉಚ್ಚವಾದರೂ ಆ ಸಣ್ಣ ವಯಸ್ಸಿನಲ್ಲಿ, ಅದೂ ಹೂವಿನ ವಿಷಯಕ್ಕಾಗಿ ಹುಡುಗಿಯಲ್ಲಿ ಮೂಡಿರುವುದು ವಿಲಕ್ಷಣವೇ ಸರಿ. ಅವಳ ಇದೊಂದೇ ಭಾವನೆ ಏಕೆ, ಎಷ್ಟೋ ಭಾವನೆಗಳು ವಿಲಕ್ಷಣವಾಗಿಯೇ ಇರುತ್ತಿದ್ದವು. ಅವಳು ಅವಳ ತಾಯಿಯನ್ನು ಕೇಳುತ್ತಿದ್ದ ಪ್ರಶ್ನೆಗಳೂ ವಿಲಕ್ಷಣವಾಗಿಯೇ ಇರುತ್ತಿದ್ದವು. ಬಾಲ್ಯದ ಮುಗ್ಧತೆಯ ಹಾಸ್ಯಾಸ್ಪದ ಪ್ರಶ್ನೆಗಳು ಕೆಲವೆಂದು ಅರ್ಥಮಾಡಿಕೊಂಡರೂ ಅದಕ್ಕೆ ಉತ್ತರಕೊಡಲು ಬಹಳ ಕಷ್ಟವಾಗುತ್ತಿತ್ತು. ಅಂತಹ ಪ್ರಶ್ನೆಯು ಆ ಹುಡುಗಿಯ ಬಾಯಲ್ಲಿ ಬರುತ್ತಿದ್ದುದರಿಂದ, ಕೇಳಿದವರು ನಗುವಂತೆ ಆಗುತ್ತಿತ್ತು. ಇಷ್ಟಲ್ಲದೆ ಅವಳ ನಡೆವಳಿಕೆಯೇ ಒಂದು ರೀತಿ. ಅವಳಿಗೆ ಯಾರನ್ನು ಕಂಡರೂ ನಾಚಿಕೆಯಿಲ್ಲ. ಗಂಡಸರು ಹೆಂಗಸರು ಎಲ್ಲರೂ ಅವಳ ಭಾವನೆಯಲ್ಲಿ ಒಂದೇ. ಯಾರಾದರೂ, "ನೋಡೇ ನಿನ್ನ ಗಂಡನ್ನ" ಎಂದು ಅವಳ ಸೋದರಮಾವನನ್ನು ತೋರಿಸಿ ಹಾಸ್ಯಮಾಡಿದರೆ, "ನಾನು ಮದುವೆಯಾದರೆ ತಾನೆ ಗಂಡ. ನನಗೆ ಗಂಡನೇ ಇಲ್ಲ. ನಾನು ಮದುವೆಯಾಗುವುದೂ ಇಲ್ಲ" ಎಂದು ಗಂಭೀರವಾಗಿ ಉತ್ತರ ಕೊಡುವಳು. ಮದುವೆಯ ವಿಷಯ ಬಂದಾಗಲೆಲ್ಲಾ ಅವಳ ಬಾಯಿಂದ ಇದೇ ಉತ್ತರ ಬರುತ್ತಿದ್ದುದು ಒಮ್ಮೊಮ್ಮೆ ಅವಳ ತಂದೆತಾಯಿಗಳನ್ನು ಗೊಂದಲದಲ್ಲಿ ಸಿಕ್ಕಿಸುತ್ತಿತ್ತು. "ಬಾಲಿಕೆಯ ಬಾಲ್ಯದ ಮುಗ್ಧಮಾತುಗಳು" ಎಂದುಕೊಂಡು ಸಮಾಧಾನ ಪಟ್ಟುಕೊಳ್ಳುವರು. ಇದರಮೇಲೆ ಲೀಲುವಿಗೆ ವಿಷಯ ಗ್ರಹಣದಲ್ಲಿ ಬಹಳ ಆಸಕ್ತಿ. ಯಾರು ಯಾವ ಮಾತನ್ನಾಡುತ್ತಿದ್ದರೂ ಅಲ್ಲಿ ಲೀಲು ಹಾಜರು. ಅವರ ಮಾತಿನಗೂಢವನ್ನು ತಿಳಿಯಬೇಕೆಂಬ ಕುತೂಹಲ ಅವಳಿಗೆ. ಹೀಗೆ ಮಾತನಾಡುತ್ತಿದ್ದಾಗ ಅಲ್ಲಿಗೆ ಬಂದು, ಅವರ ಸಂಭಾಷಣೆಯೊಂದಿಗೆ ತನ್ನ ಮನಸ್ಸನ್ನು ಓಡಿಸಿ, ಮಧ್ಯದಲ್ಲಿ ಸರಿಯಾಗಿ ಅರ್ಥವಾಗದಿದ್ದರೆ ಏನಾದರೊಂದು ಪ್ರಶ್ನೆಯನ್ನು ಹಾಕುವುದು. ಅದಕ್ಕೆ ಉತ್ತರ ಬಂದರೆ ಇನ್ನೊಂದು, ಮತ್ತೊಂದು-- ಕಡೆಗೆ ಉತ್ತರ ಹೇಳುವವರಿಗೇ ಉತ್ತರ ಹೇಳಲು ಬಾರದೇ ಇರುವವರೆಗೆ. ಕೆಲವರು ಇವಳ ಕೆಲವು ಪ್ರಶ್ನೆಗಳಿಗೆ ಕೆಲವುಸಲ ಬೆರಗಾಗಿ

ದ್ದಾರೆ. ಇಷ್ಟು ಚಿಕ್ಕ ಹುಡುಗಿಯಲ್ಲಿ ಎಂತಹ ಅಗಾಧವಾದ ಪ್ರಶ್ನೆ ಎಂದು. ಒಮ್ಮೊಮ್ಮೆ ಇವಳು ಪ್ರಶ್ನೆ ಹಾಕಲು ಮೊದಲುಮಾಡಿದಾಗ ಇವಳ ಪ್ರಶ್ನೆಗಳಲ್ಲಿಯೇ ಅಂದಿನ ಸಂಭಾಷಣೆಯು ಮುಗಿಯುವುದೆಂದು ಅರಿತ ಇವಳ ತಂದೆಯವರು, "ಹೀಗೆಲ್ಲಾ ಮಧ್ಯೆ ಮಾತನಾಡಬಾರದು. ಗಂಡಸರು ಇರುವ ಕಡೆ ನೀನು ಬರಬಾರದು. ಹೋಗು" ಎಂದರೆ, "ನಾನು ಹೋಗೋಲ್ಲ. ತಿಳೀದೇ ಇರೋ ವಿಷಯ ತಿಳಿದುಕೊಳ್ಳಬಾರದೇನೋ? ಕೇಳಿ ತಿಳಿದುಕೊಂಡರೆ ಅವರಲ್ಲಿ ತಪ್ಪೇನೂ ಇಲ್ಲ" ಎಂದು ತಂದೆಯ ಬಾಯಿಯನ್ನು ಮುಚ್ಚಿಸುವಳು. ಈಚೀಚೆಗೆ ಇವಳ ಸ್ವಭಾವವರಿತ ಅವರು ಏನೊಂದನ್ನೂ ಹೇಳುತ್ತಿರಲಿಲ್ಲ. ಗಂಡಸರ ಮಧ್ಯೆ ಹೆಣ್ಣುಮಕ್ಕಳು ಇರಬಾರದೆಂದು ಅವರ ಭಾವನೆಯಾದರೂ ಮಗಳ ಧ್ಯೇಯಕ್ಕಾಗಿ—ಅವಳ ನಿರ್ಭಯರೀತಿಗಾಗಿ—ಮನದಲ್ಲೇ ಮೆಚ್ಚಿದ್ದರು.

ಲೀಲುವಿಗೆ ಓದಿನಲ್ಲಿ ಬಹಳ ಆಸಕ್ತಿ. ತಾನು ಬಹಳ ಓದಬೇಕು, ದೊಡ್ಡ ವಿದ್ವಾಂಸಳಾಗಬೇಕು. ತಮ್ಮ ಮೇಡಮ್ ಅಂತೆ ತಾನೂ ಒಬ್ಬ ಮೇಡಮ್ ಆಗಬೇಕು. ಇವೇ ಮೊದಲಾದ ವಿಷಯಗಳೇ ಅವಳಲ್ಲಿ ತುಂಬಿದ್ದವು. ಅಲ್ಲದೆ ಅವಳಿಗೆ ದೇವರಪೂಜೆ ಅಂದರೆ ಬಹಳ ಇಷ್ಟ. ಪ್ರತಿದಿನವೂ ದೇವರನ್ನು ಪೂಜಿಸುತ್ತಿದ್ದಳು. ಪ್ರತಿ ಸೋಮವಾರವೂ ಈಶ್ವರನ ಗುಡಿಗೆ ಹೋಗಿಬರುವಳು. ಯಾವ ಅಡ್ಡಿಬಂದರೂ ಸೋಮವಾರ ಗುಡಿಗೆ ಹೋಗಿ ದೇವರ ಮುಂದೆ ನಿಂತು, "ನನ್ನ ಆಶೆಯನ್ನು ಸಲ್ಲಿಸು. ನನ್ನ ಇಷ್ಟಕ್ಕೆ ವಿರುದ್ಧವಾಗಿ ನಡೆಯದಿರಲು ಶಕ್ತಿಯನ್ನು ಕೊಡು" ಎಂದು ಪ್ರಾರ್ಥಿಸಿ ಬರುತ್ತಿದ್ದುದು ತಪ್ಪುತ್ತಿದ್ದಿಲ್ಲ. ಲೀಲು ಸುಳಿಯುತ್ತಿದ್ದ ಸ್ಥಳ—ಎಲ್ಲಿ ತನಗೆ ಬೇಕಾದ ವಿಷಯ ಮನದಟ್ಟು ಆಗುವುದೋ ಅಲ್ಲಿ. ಬರೀ ಕಾಡುಹರಟೆಯಲ್ಲಿ ಅವಳಿಗೆ ಇಷ್ಟವಿಲ್ಲ. ಅಂತಹ ಸ್ಥಳದಲ್ಲಿ ಅವಳು ಇರುವುದೂ ಇಲ್ಲ. ಗೆಳತಿಯರು ಆಟಕ್ಕೆ ಕರೆದರೆ, "ಬರುವುದಿಲ್ಲ" ಎನ್ನುವಳು. ಯಾರಾದರೂ ಬಲವಂತಮಾಡಿದರೆ, ಇಲ್ಲವೇ, "ಆಟವೇ ಬರದ ಹುಡುಗಿ, ಹಾಗೆ ಹೀಗೆ" ಎಂದು ಹಾಸ್ಯಮಾಡಿದರೆ, "ಬೇಡವಾದದ್ದನ್ನು ನಾನು ಮಾಡುವುದಿಲ್ಲ. ಹಾಗೆ ಮಾಡೆಂದು

ಹೇಳುವುದೂ ನಿಮಗೆ ಸರಿಯಿಲ್ಲ" ಎನ್ನುವಳು. ಇವಳ ರೀತಿಯೇ ವಿಲಕ್ಷಣ ವಾಗಿದ್ದರೂ ಎಲ್ಲರಿಗೂ ಬೇಕಾದವಳು. ಯಾವಾಗಲೂ ಲೀಲುವಿನ ಸುತ್ತಲೂ ಕನಿಷ್ಠಪಕ್ಷ ಹತ್ತು–ಹದಿನೈದು ಜನ ಗುಂಪು ಕಟ್ಟಿರುತ್ತಲೇ ಇದ್ದರು.

ಲೀಲು ಒಳಕ್ಕೆ ಬರುವ ಹೊತ್ತಿಗೆ ಪಾರ್ವತಮ್ಮನವರು ಹೂವಿನ ರಾಶಿ ಯನ್ನು ಹಾಕಿಕೊಂಡು ಪಕ್ಕದಲ್ಲಿದ್ದ ನೀರಿನ ತಂಬಿಗೆಯಿಂದ ಹೊರಬಿದ್ದ ದಾರದಿಂದ ಹೂ ಕಟ್ಟುತ್ತಿದ್ದರು. ಲೀಲುವೂ ಕೂಡ ಹೂವನ್ನು ಕಟ್ಟಲು ಮೊದಲು ಮಾಡಿದಳು. ಅವಳ ಪುಟ್ಟ ಕೈಗಳು ತಾಯಿಯ ಕೈಗಿಂತಲೂ ಚುರುಕು. ಮನಕ್ಕೆ ಹಿತವಾಗಿ, ಸಂತೋಷ ಉಕ್ಕುತ್ತಿರುವಾಗ, ವೀಣೆಯನ್ನು ನುಡಿಸುವಾಗ ನಾರಿಮಣಿಯ ಕೈಬೆರಳುಗಳು, ಲಲಿತವಾದ ಸ್ವರವನ್ನು ಹೊರಡಿಸಲು, ಭಾವವನ್ನು ಅದರಲ್ಲಿ ಮೂಡಿಸಲು, ಕೇಳುವವರನ್ನು ಆನಂದ ತುಂದಿಲರನ್ನಾಗಿ ಮಾಡಲು, ಹೇಗೆ ತಾನೆತಾನಾಗಿ ಭಾವಕ್ಕನುಗುಣವಾಗಿ ವೀಣೆಯ ತಂತಿಗಳಮೇಲೆ ಕುಣಿಕುಣಿದು, ಕೇಳಿ ಆನಂದಿಸುತ್ತಿರುವವರ ದೃಷ್ಟಿಯನ್ನು ಆಕರ್ಷಿಸುವುದೋ ಹಾಗೆಯೇ ಹೂ ಕಟ್ಟುವಾಗ ಲೀಲುವಿನ ಕೈ ಬೆರಳಿನ ಓಡಾಟವೂ ಸೆಳೆಯುವುದು.

ಪಾರ್ವತಮ್ಮನವರು ಕಿತ್ತು ತಂದ ಹೂವನ್ನು ಬೇರೆ ಇಟ್ಟಿದ್ದರು. ಲೀಲು ಅದನ್ನು ನೋಡಿದಳು. ಏನನ್ನಿಸಿತೋ ಏನೋ, "ಅಮ್ಮ! ಹೂವಿಗೆ ನಗುವುದಕ್ಕೆ ಅಳುವುದಕ್ಕೆ ಬರುತ್ತೇನೆ?" ಎಂದಳು.

"ಏನೆ ಹಾಗಂದರೆ?"

"ಹಾಗಂದರೆ ಹೂ ನಗುತ್ತೆಯೋ ಇಲ್ಲವೇ ಅಳುತ್ತೆಯೋ?"

"ಹೋಗೆ ಹೋಗೆ ನಿನಗ್ಯಾರು ಹೇಳುತ್ತಾರೆ. ಹೂ ನಗುತ್ತಂತೆ ಅಳುತ್ತಂತೆ"

"ಹಾಗಾದರೆ ಅದು ನಗಲಾರದೋ ಅಳಲಾರದೋ?"

"ಇಲ್ಲ!"

"ಅಮ್ಮ! ನನಗೇ ಗೊತ್ತು!"

"ಏನು?"

"ಹೂವಿಗೆ ನಗೋಕ್ಕೂ ಬರುತ್ತೆ ಅಳೋಕ್ಕೂ ಬರುತ್ತೆ!"

"ಏನೆ ಅದು ಸುಮ್ಮನೆ ಹೇಳಿದ್ದೇ ಹೇಳೋದು'

"ಮತ್ತೆ, ನೀನು ನಗೋಕೆ ಬರೋಲ್ಲ ಅಳೋಕೆ ಬರೋಲ್ಲ ಅಂತೀ?"

"ಹೌದು ಬರೋಲ್ಲ!'

"ಅದು ಹ್ಯಾಗೆ ಹೇಳ್ತಿ ಬರೋಲ್ಲಾಂತ?"

"ಅದು ನಗೋದು ಕೇಳಿಸೋಲ್ಲ ಯಾವುದೂ ಕೇಳಿಸೋಲ್ಲ"

"ಕೇಳಿಸದೆ ನಗೋಕೆ ಅಳೋಕೆ ಆಗೋಲ್ವೋ?"

"ಸುಮ್ಮನೆ ಕೂತುಕೊಳ್ಳೆ ಅಲ್ಲಿ"

"ನಾನು ಕೂತುಕೊಂಡೇ ಇದೀನಿ"

"ಮಾತಾಡದೇ ಕೂತುಕೋ"

"ಮತ್ತೆ ನಾನು ಕೇಳಿದ್ದಕ್ಕೆ ಹೇಳು ಮತ್ತೆ!"

"ಕೇಳುತ್ತಲೇ ಇರುತ್ತಿ ನೀನು. ನಿನ್ನ ಬಾಯಿಗೆ ತಡೇಯೆ?"

"ನೀನು ಹೇಳುತ್ತಲೇ ಇರು"

"ಹುಂ, ನನಗಿನ್ನೇನು ಬೇರೆ ಕೆಲಸ ಇಲ್ಲ ಅಲ್ಲವೇ?"

"ನೀನು ಕೆಲಸ ಮಾಡತಾನೆ ನಾನು ಕೇಳಿದ್ದಕ್ಕೆ ಹೇಳು ಯಾರು ಬೇಡಾಂದರು"

"ಹೋಗೆ ನಿನ್ನ ಹತ್ತಿರ ಯಾರು ಮಾತನಾಡೋರು?" ಎಂದು ಪಾರ್ವತಮ್ಮನವರು ಸುಮ್ಮನಾದರು. ಲೀಲು ಹೂವನ್ನು ಕಟ್ಟುತ್ತಿದ್ದಳು. ಆದರೆ ಅವಳ ದೃಷ್ಟಿ ಎಲ್ಲಾ ಆ ಬೇರೆಯಾಗಿದ್ದ — ತಾಯಿಗಿಡದಲ್ಲಿ ಅಂದವಾಗಿ ಅರಳಿ ಬೆಳಗುತ್ತಿದ್ದು, ಬೇರೆಯಾಗಿದ್ದ—ಬಿಡಿ ಹೂವಿನ ಕಡೆಗೇ ಇತ್ತು. ಆವಳಿಗೆ ಅದು ಆಗ ಮಂಕಾಗಿ ಕಾಣುತ್ತಿತ್ತು. ಗಿಡದಲ್ಲಿ ಅದಕ್ಕಿದ್ದ ಬೆಡಗು ಈಗ ಇಲ್ಲವೆಂದು ಅರ್ಥಮಾಡಿಕೊಂಡಿದ್ದಳು. ಗಿಡದಲ್ಲಿದ್ದಾಗ ಅದರ ಅಂದಕ್ಕೆ ಬೆರಗಾಗಿ ಅದು ನಗುತ್ತಿದೆಯೆಂದೂ ಈಗ ತಾಯಿಗಿಡದಿಂದ ದೂರವಾದುದರಿಂದ ಮಂಕಾಗಿ ಕಂಡು ಅಳುತ್ತಿದೆಯೆಂದೂ ಅರ್ಥಮಾಡಿಕೊಂಡಿ

ದ್ದಳು ಲೀಲು. ಅದು ಸರಿಯೋ ತಪ್ಪೋ ಎಂದು ನಿಷ್ಕರ್ಷಿಸಲು ಕೇಳಿದಳು ತಾಯಿಯನ್ನು, "ಹೂವಿಗೆ ನಗುವುದಕ್ಕೆ ಅಳುವುವಕ್ಕೆ ಬರುತ್ತೇನೆ" ಎಂದು. ಬಹಳ ಹೊತ್ತು ಅವಳಿಂದ ಸುಮ್ಮನಿರಲಾಗಲಿಲ್ಲ. ಆ ಹೂವಿನಲ್ಲೇ ದೃಷ್ಟಿಯಿಟ್ಟು, "ಅಮ್ಮ! ಈ ಹೂ ಆಗಿನಷ್ಟು ಚೆನ್ನಾಗಿಲ್ಲಿವಮ್ಮ ಈಗ" ಎಂದು ಮರುಗಿದಳು.

"ಚೆನ್ನಾಗಿಲ್ಲದೇ ಹೋದರೆ ಹೋಗಲಿ ಬಿಡು" ಎಂದು ಬಿರುಸಾಗಿ ಹೇಳಿದರು ಪಾರ್ವತಮ್ಮನವರು.

"ಅಮ್ಮ ಅದು ಹೋಗಲಿ. ಈ ಹೂವನ್ನು ಹಾಗೆಯೇ ಇಟ್ಟು ಬಿಡೋಣವಮ್ಮ. ಇವುಗಳ ಜೊತೆಗೆ ಸೇರಿಸೋದು ಬೇಡ"

"ನೀನು ಕಟ್ಟುತ್ತಿರುವ ದಂಡೆಗೆ ಮಧ್ಯೆಬರೋ ಹಾಗೆ ಇದನ್ನು ಕಟ್ಟು, ಬಹಳ ಚೆನ್ನಾಗಿರುತ್ತೆ!"

"ಬೇಡವಮ್ಮ ಅದು ಹಾಗೆಯೇ ಇರಲಿ" ಎಂದು ಲೀಲು ತಾಯಿಯನ್ನು ಅಂಗಲಾಚಿದಳು.

" ಸುಮ್ಮನೆ ಮಧ್ಯೆ ಸೇರಿಸು ಲೀಲು; ಹಟ ಮಾಡಬೇಡ " ಎಂದು ಪಾರ್ವತಮ್ಮನವರು ಗಡುಸಾಗಿಯೇ ಹೇಳಿದರು. ಲೀಲು ನಿರ್ವಾಹವಿಲ್ಲದೆ ಅದು ಎಲ್ಲಿಗೆ ಬಂದರೆ ದಂಡೆಯ ಮಧ್ಯಕ್ಕಾಗುವುದೋ ಅಲ್ಲಿಗೆ ಆ ಹೂವನ್ನು ಸೇರಿಸಿ ಗಂಟುಹಾಕಲು ಹೂವನ್ನು ಕೈಗೆ ತೆಗೆದುಕೊಂಡಳು. ಒಂದರೆ ನಿಮಿಷ ಹಾಗೆಯೇ ನೋಡಿದಳು. ಪಾಪ! ಅವಳ ಕಣ್ಣಿಂದ ಬಂದ ನೀರು ಆ ಹೂವಿನ ಮೇಲೆ ಬಿತ್ತು. "ನನಗಾಗಿ ನೀನು ಮರುಗುತ್ತಿರುವುದು ನನಗೆ ಅರಿವಾದುದಕ್ಕೆ ಇದೇ ಸಾಕ್ಷಿ. ನೋಡು ನಿನ್ನ ಕಣ್ಣೀರಿನ ಹನಿಯನ್ನು ನನ್ನ ಹೃದಯದಲ್ಲಿ ಅಡಗಿಸಿದ್ದೇನೆ" ಎಂಬಂತೆ ಸೂಚಿಸಲು ಆ ಹನಿಯನ್ನು ರೇಕುಗಳ ಮಧ್ಯೆ ಸೇರಿಸಿಕೊಂಡಿತು ಆ ಹೂ. ತಗ್ಗಿಸಿದ್ದ ತಲೆಯನ್ನೆತ್ತಿ ಲೀಲು, "ಅಮ್ಮ ಇದನ್ನು ಹಾಗೆಯೇ ಇಟ್ಟುಬಿಡೆ" ಎಂದಳು. ಅವಳ ಕಣ್ಣೀರನ್ನು ನೋಡಿ ಪಾರ್ವತಮ್ಮನವರು, "ಇಷ್ಟಕ್ಕೇ ಅಳುವುದೇನೆ. ಏನು ಕರುಳೇ ನಿನ್ನದು.

ಅದು ನಿನ್ನ ತಲೆಯಲ್ಲೇ ಬೆಳಗಬೇಕು ಕಣೆ. ನಾನು ಹೇಳಿದಹಾಗೆ ಮಾಡಮ್ಮ! ಹಟ ಮಾಡಬೇಡ" ಎಂದು ಅವಳ ಕಣ್ಣೀರನ್ನು ಸೆರಗಿನಿಂದ ಒರಸಿದರು. ಅವಳ ಕಣ್ಣೀರಿನ ಕಾರಣವು ಆಕೆಗೆ ಹೇಗೆ ಗೊತ್ತಾಗಬೇಕು? ಕಟ್ಟದಿದ್ದರೆ ತಾಯಿಯು ಬಿಡಳು ಎಂದು ಅರಿತ ಲೀಲು ಆ ಹೂವನ್ನು ಸೇರಿಸಿ ಗಂಟು ಹಾಕಿದಳು. ಹೂ ಗಂಟಿನಿಂದ ಜಾರಿತು.

"ಅಮ್ಮ, ಹೂವಿಗೆ ಕಟ್ಟಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ ಕಣೆ. ಜಾರಿ ಹೋಯಿತು" ಎಂದು ಆತುರದಿಂದ ಲೀಲು ತಾಯಿಗೆ ಹೇಳಿದಳು.

"ನೀನು ಸರಿಯಾಗಿ ಗಂಟು ಹಾಕದಿದ್ದರೆ ಅದಕ್ಕೆ ಇಷ್ಟವಿಲ್ಲವೋ?"

ಲೀಲು ಹಾಕಿದ ಗಂಟು ಈ ಸಲವೂ ಜಾರಿತು. ಇದನ್ನು ನೋಡಿದ ಪಾರ್ವತಮ್ಮನವರು, "ನಿನಗೆ ಅದನ್ನು ಸೇರಿಸಲು ಇಷ್ಟವಿಲ್ಲ. ಏನಾದರೂ ಮಾಡಿ ತಪ್ಪಿಸಬೇಕೂಂತ ಹೀಗೆ ಹೇಳುತ್ತೀ" ಎಂದರು.

"ಹಾಗಾದರೆ ನೀನೇ ಕಟ್ಟು"

ಪಾರ್ವತಮ್ಮನವರು ಹೂವನ್ನು ತೆಗೆದುಕೊಂಡು ಗಂಟು ಹಾಕಿದರು. ಅದೇಕೋ ಈಗಲೂ ಗಂಟು ಜಾರಿ ಹೋಯಿತು! ಲೀಲುವಿಗೆ ಅತಿಯಾದ ಸಂತೋಷ ತಾನು ಹೇಳಿದ್ದೇ ಸರಿ ಎಂದು. "ನೋಡಿದೆಯೋ ಅದಕ್ಕೆ ಕಟ್ಟಿಸಿ ಕೊಳ್ಳಲಿಕ್ಕೆ ಇಷ್ಟವೇ ಇಲ್ಲ. ಹೋಗಲಿ ಬಿಟ್ಟುಬಿಡಮ್ಮ, ಪಾಪ! ಏಕೆ ಅದನ್ನ ಗೋಳು ಹುಯ್ದುಕೊಳ್ಳುತ್ತೀ" ಎಂದಳು ಲೀಲು.

ಪಾರ್ವತಮ್ಮನವರಿಗೆ ಯಾಕೋ ಕೋಪಬಂತು. ಮತ್ತೊಮ್ಮೆ ಅವಸರ ದಲ್ಲಿ, ತನ್ನ ಹಟವನ್ನು ಗೆಲ್ಲಲೇಬೇಕೆಂಬ ಪಂಥದಿಂದ ಗಂಟು ಹಾಕಿದರು ಗಂಟು ಹೂವಿಗೆ ಬೀಳಲೇ ಇಲ್ಲ!

"ನಾನು ಹೇಳಿದ್ದೇ ಸರಿ!" ಎಂದು ಕೇಕೆ ಹಾಕಿ ಚಪ್ಪಾಳೆ ತಟ್ಟಿ, ಲೀಲು ಮತ್ತೆ, "ಅಮ್ಮ! ಅದರ ಇಷ್ಟಕ್ಕೆ ವಿರುದ್ಧವಾಗಿ ಯಾಕಮ್ಮ ಬಲವಂತ ಮಾಡಬೇಕು? ಆ ಹೂವನ್ನು ಇಲ್ಲಿ ಕೊಡು. ನಾನು ಅದನ್ನು ಬೇರೆಯಾಗಿ ತೆಗೆದಿಟ್ಟಿರುತ್ತೇನೆ. ಅದು ಬಿಡಿಯಾಗಿಯೇ ಈಶ್ವರನ ಪಠದಮೇಲೆ ಬೆಳಗಲಿ'

ಎಂದು ಹೂವನ್ನು ತೆಗೆದುಕೊಳ್ಳಲು ಹೋದಳು. ಇನ್ನಾವ ಸಮಯ ವಾದರೂ ಆಗಿದ್ದಿದ್ದರೆ ಕೊಟ್ಟುಬಿಡುತ್ತಿದ್ದರೋ ಏನೋ ? ಈಗ ಮಗಳ ಅಪಹಾಸ್ಯಕ್ಕೆ ಗುರಿಯಾದೆನಲ್ಲಾ ಎಂಬ ಕೋಪಪವಡಗಿದ ಅವಮಾನದಬಿಗಿ ಯಲ್ಲಿ ಅದನ್ನು ಕೊಡದೆ, "ಈಸಲ ಅದು ಹೇಗೆ ಜಾರುವೆಯೋ ನೋಡು ವೆನು" ಎಂಬಂತೆ ಬಲವಂತದಿಂದ ಬಿಗಿಯಾಗಿ ಗಂಟನ್ನು ಬಿಗಿದರು. ಆ ಬಿಗಿತದ ಭರಕ್ಕೆ ಬೆದರಿ ಆ ಹೂ ರೇಕುರೇಕಾಗಿ ಉದುರಿಹೋಯಿತು. "ಹಾಗೆಯೇ ಆಗಬೇಕು. ಬಲವಂತ ಮಾಡಿದರೆ ನಿನ್ನ ಕೈಗೆ ಸಿಕ್ಕುತ್ತೇನೆ. ಈಗ ಯಾರಿಗೂ ಇಲ್ಲ. ಗಿಡದಲ್ಲೇ ಅದನ್ನು ಬಿಟ್ಟಿದ್ದರೆ?........ಅದು ಅನ್ಯಾ ಯವಾಗಿ ತಾನಾಗಿಯೇ ಒಣಗುವುದಕ್ಕೆ ಮುಂಚೆಯೇ ನಿನ್ನ ಬಲವಂತದಿಂದ ಹಾಳಾಯಿತು. ಅದು ಹೇಗೆ ಇರಲಿ, ಅದರ ಹಟ ಅದು ಗೆದ್ದೇ ಗೆದ್ದಿತು. ಅದು ಕೊನೆಯವರೆಗೂ ಬಿಡಿಯಾಗಿಯೇ ಇತ್ತು. ನಿನ್ನ ಕಟ್ಟಿಗೆ ಸಿಕ್ಕಲೇ ಇಲ್ಲ!" ಎಂದಳು ಲೀಲು. ಹುಸಿನಗುವು ಅವಳ ಮುಖದಮೇಲೆ ತೆಳುವಾದ ತೆರೆಯಾಗಿ ಸರ್‍ರನೆ ಹರಿಯಿತು. ಪಾರ್ವತಮ್ಮನವರು ಪರಾಭವದ ಅವಮಾನ ದಿಂದ ರೇಗಿ ಕೆಂಡದಂತಾಗಿ "ತಲೆಹರಟೆ ಹುಡುಗಿ" ಎನ್ನುವಂತೆ ಲೀಲುವನ್ನು ದುರದುರನೆ ನೋಡಿ, ಎದ್ದು ಹೊರಟುಹೋದರು. ಲೀಲು ಹೂವಿನ ರೇಕು ಗಳನ್ನೆಲ್ಲಾ ಆರಿಸಿ ಬೊಗಸೆಯಲ್ಲಿ ತೆಗೆದುಕೊಂಡು ಹಿತ್ತಲುಕಡೆಗೆ ಹೋಗಿ ಕುಳಿತು ಮೌನದಿಂದ ಬೊಗಸೆಯನ್ನೇ ಈಕ್ಷಿಸುತ್ತಿದ್ದಳು. ಅವುಗಳೊಡನೆ ಸಂಭಾಷಿಸುತ್ತಿರುವಳೋ ಎಂಬಂತೆ ಅವಳ ದೃಷ್ಟಿ ಸೂಚಿಸುತ್ತಿತ್ತು. ಕೊಂಚ ಹೊತ್ತಾದಮೇಲೆ ಅವಳು, "ಬೇಕಾದ ಕಡೆಗೆ ಹಾರಿಹೋಗು" ಎಂದು ಅವನ್ನು ಮೇಲಕ್ಕೆ ತೂರಿಬಿಟ್ಟಳು!

* * *

ಲೀಲುವಿಗೆ ಈಗಾಗಲೇ ಹದಿನಾಲ್ಕು ವರ್ಷ. ಅವಳನ್ನು ಅವಳ ಸೋದರಮಾವನಿಗೇ ಕೊಡಬೇಕೆಂದು ನಿಷ್ಕರ್ಷೆಯಾಗಿ ಲಗ್ನ ಪತ್ರಿಕೆಯೂ ಸಹ ಆಗಿತ್ತು. ಲಗ್ನಕ್ಕೆ ಇನ್ನೂ ಹದಿನೈದು ದಿನಗಳು ಉಳಿದಿವೆ. ಲೀಲು ವಿಗೆ ವಿಪರೀತ ಖಾಯಿಲೆ. ಹುಟ್ಟಿದಂದಿನಿಂದ ಇಲ್ಲಿಯವರೆಗೂ ಯಾವ

ಖಾಯಿಲೆಯೂ ಅವಳ ಬಳಿ ಸುಳಿದಿರಲಿಲ್ಲ. ಈಗ—ಅದೂ, ಲಗ್ನದ ಸಮ ಮಯದಲ್ಲಿ—"ಉಳಿಯುವಳೇ?" ಎಂಬ ಶಂಕೆಯನ್ನು ಹುಟ್ಟಿಸುವಂತಹ ಖಾಯಿಲೆ. ತಾನೇತಾನಾಗಿ, ದುಃಖದ ನೆರಳನ್ನೂ ಕಾಣದೆ, ಸ್ವೇಚ್ಛೆಯಾಗಿ ಬೆಳೆದ ಹೆಣ್ಣು; ಈಗ ಸಂಕಟದಿಂದ ಬೆಂದು ಬೆಂದು ಕಡ್ಡಿಯಾಗಿದ್ದಳು. ಅವಳನ್ನು ಹಿಂದೆ ನೋಡಿದ್ದವರು ಈಗ ನೋಡಿದ್ದರೆ ಅವರ ಎದೆ 'ಧಸಕ್' ಎನ್ನುತ್ತಿದ್ದಿತು. ಖಾಯಿಲೆಯು ಲೀಲುವನ್ನು ಗುರುತಿಸಲಾರದಷ್ಟು ಮಾರ್ಪ ಡಿಸಿತ್ತು. ಲಗ್ನಪತ್ರಿಕೆಯಾದ ರಾತ್ರಿಯೇ ಬಂಗ ಜ್ವರ, ಇನ್ನೂ ಆರಿಲ್ಲ. ಅಂದಿನ ಊಟ ಹೆಚ್ಚಾಗಿ ಅಜೀರ್ಣದಿಂದ ಹಾಗೆ ಆಗಿದೆಯೆಂದು ಅವಳ ತಂದೆತಾಯಿಗಳು ತಿಳಿದಿದ್ದರು. ಔಷಧವಾಯಿತು. ಅದಕ್ಕೂ ಆರದಿರಲು ಹರಕೆಗಳಾಯಿತು. ಏನಾದರೂ ಖಾಯಿಲೆ ಹೆಚ್ಚಾಗುತ್ತಿತ್ತೇ ಹೊರತು ಕಡಿಮೆಯಾಗಲಿಲ್ಲ. ಇದೇನು ಖಾಯಿಲೆಯಪ್ಪಾ, ಅರ್ಥವಿಲ್ಲದ್ದು ಎಂದುಕೊ ಳ್ಳುವರು ಲೀಲು ತಂದೆ ತಾಯಿಗಳು.

ಲೀಲುವಿನ ಮನಸ್ಸಿನಲ್ಲಿ ಇದ್ದುದನ್ನು ಅವರು ಅರಿತರೇ? ಅವಳಿಗೆ ಲಗ್ನವಾಗಲು ಇಷ್ಟವಿಲ್ಲ. ಆಗಬಾರದೆಂದೇ ಅವಳ ಹಟ. ಹುಡುಗುತನ ದಿಂದೀ ಇದನ್ನೇ ಹೇಳುತ್ತಿದ್ದಳು. ಇನ್ನೂ ಹೇಳುತ್ತಿರುವಳು. ಆದರೆ ಕೇಳುವವರಾರು? ತಾಯಿತಂದೆಗಳು ಇದಕ್ಕೆ ಗಮನ ಕೊಡಲಿಲ್ಲ. ಅವರು ಹೇಳಿದಂತೆ ಈ ವಿಷಯದಲ್ಲಿ ಕೇಳಲು ಇವಳಿಗೆ ಇಷ್ಟವಿಲ್ಲ. ಅವರು ಶಾಸ್ತ್ರ ವಿರುದ್ಧವಾಗಿರಲು ಹಿಂಜರಿದರು. ಮಗಳಿಗೆ ಮದುವೆ ಮಾಡಲೇ ಬೇಕು ಇಲ್ಲದಿದ್ದರೆ ವಿಧಿಯಿಲ್ಲ! ಒಮ್ಮೊಮ್ಮೆ ಲೀಲು ಹೇಳಿದಂತೆ ಅವಳಿಷ್ಟದಂತೆ ಸುಮ್ಮನಿದ್ದು ಬಿಡೋಣವೆಂದು ಯೋಚಿಸುವರು. ಮರಕ್ಷಣವೇ ಭಯ ಯಾರು ಏನೆನ್ನುವರೋ, ಮುಂದೆ ತಮ್ಮ ಪರಿಣಾಮ ಏನಾಗುವುದೊ ಎಂದು. ಮೇಲೆ ಧನಿಕರಲ್ಲ! ಏನು ಮಾಡಿಯಾರು? ಅವರು ಕಡೆಯದಾಗಿ ಮಗಳಿಗೆ ಹೇಳಿದ್ದು, "ಅಮ್ಮ! ನೀನು ಮದುವೆ ಇಲ್ಲದೆ ಇರಲು ಆಗುವು ದಿಲ್ಲ. ಇದು ಶಾಸ್ತ್ರವಿರುದ್ಧ. ಬಹು ಕಾಲದಿಂದ ನಡೆದು ಬಂದಿರುವ ನಮ್ಮ ಮತಾಚರಣೆಯನ್ನು ಬಿಟ್ಟರೆ ಅದರ ಬಾಧೆಯು ತಪ್ಪುವುದಿಲ್ಲ. ನಾವು

ದೇವಿಯೋ ಮೂರ್ತೀಭವಿಸಿ ಆತನ ಹೃದಯದಲ್ಲಿ ನಿಂತು ಹಾಡುತ್ತಿರುವಳೋ ಎನ್ನುವಂತೆ ಭಾಸವಾಗುತ್ತಿತ್ತು. ಎಲ್ಲರೂ ಯೋಗಸಾಧನೆಯಲ್ಲಿ ಮಗ್ನರಾದವರಂತೆ ಏಕದೃಷ್ಟಿಯಿಂದ ಆತನನ್ನೇ ನೋಡುತ್ತಿದ್ದರು! ರೆಪ್ಪೆಯನ್ನು ಮಿಟುಕಿಸಲಿಲ್ಲ; ಕೈಕಾಲುಗಳನ್ನು ಅಲ್ಲಾಡಿಸಲಿಲ್ಲ; ತಲೆಯನ್ನು ತಿರುಗಿಸಲಿಲ್ಲ; ತುಟಿಯನ್ನು ಅಲುಗಿಸಲಿಲ್ಲ! ಆಗ ಸಭೆಗೆಲ್ಲಾ ಶ್ರಾವ್ಯವಾಗಿದ್ದುದು ಒಂದೇ ಒಂದು ಶಬ್ದ—ಮಧುರವಾದುದು; ದೈವತ್ವವಿದ್ದುದು; ಕಲಾದೇವಿ ಅಂಶವು ತುಂಬಿ ತುಳುಕುತ್ತಿದ್ದುದು. ಸಭಿಕರೆಂದಾದರೂ ಅಂತಹ ಸಂಗೀತವನ್ನು ಕೇಳಿದ್ದರೋ ಇಲ್ಲವೋ ಯಾರು ಬಲ್ಲರು! ಎಲ್ಲರೂ ಸ್ತಂಭೀಭೂತರಾಗಿ ಬೊಂಬೆಗಳಂತೆ ಮನಮೋಕವುಳ್ಳವರಾಗಿ ಕುಳಿತಿದ್ದರು.

ದೇವರ ಪ್ರಾರ್ಥನೆಯಾದಮೇಲೆ ಮತ್ತೊಮ್ಮೆ "ಜೈ ವಿಠಲ್!" ಎಂದು ಮಾಡಿದ ಜಯಘೋಷವು ದೇವೀ ಅಂಶದಿಂದ ಕೂಡಿ ಇದ್ದುದರಿಂದ ಪ್ರತಿಯೊಬ್ಬನ ಹೃದಯವನ್ನೂ ತಟ್ಟಿ ಅವರ ಅರಿವಿಲ್ಲದೇ ಪ್ರತಿಧ್ವನಿಯಾಯಿತು. ಅವರೆಲ್ಲರ ಬಾಯಿಂದಲೂ ಏಕಕಂಠವಾಗಿ ಬಂದ ನಾಮಸ್ಮರಣೆಗಾಗಿ ಆತನು ನರಕದ ಬೆದರಿಕೆಯನ್ನಾಗಲಿ, ಪಿಶಾಚದ ಭಯವನ್ನಾಗಲಿ ತೋರಿರಲಿಲ್ಲ! ಎಲ್ಲರ ಮನಮೆಚ್ಚಿಸಿದ್ದನು!

ಆತನು ಸಭಿಕರಿಗೆ ನಮಸ್ಕರಿಸಿ, "ತಾಯಿತಂದೆಯರೇ! ನಾನು ಇಲ್ಲಿಗೆ ಬಂದು ಹರಿನಾಮಸ್ಮರಣೆ ಮಾಡಬೇಕಾಗಿದ್ದುದು ದೈವೇಚ್ಛೆಯಾಗಿದ್ದಿತೋ ಏನೋ! ನನಗೆ ಹೆಚ್ಚು ತಿಳಿವಳಿಕೆ ಇಲ್ಲ. ನಾನು ಇಂದು ಇಲ್ಲಿಗೆ ಬಂದುದೂ ಕಥೆಯನ್ನು ಮಾಡಬೇಕೆಂಬ ಉದ್ದೇಶದಿಂದಲ್ಲ. ಈ ಸನ್ನಿವೇಶವು ಒದಗುವುದೆಂದು ಕೂಡ ನಾನಂದುಕೊಂಡಿರಲಿಲ್ಲ. ಕಾರ್ಯದರ್ಶಿಗಳ ಮಾತುಗಳು ನನ್ನಲ್ಲಿ ಯಾವುದೋ ಒಂದು ಸ್ಫೂರ್ತಿಯನ್ನು ಹುಟ್ಟಿಸಿದವು. ದೇವರು ತಾನಾಗಿ ಒದಗಿಸಿಕೊಟ್ಟ ಸಮಯವನ್ನು ಬಿಡಬಾರದು ಎಂದುಕೊಂಡು, ನಾನು ನಿಮ್ಮೆಲ್ಲರ ಮುಂದೆ ಬಂದು ನಿಂತಿದ್ದೇನೆ. ನಾನು ಹಿಂದೆಂದೂ ಕಥೆಯನ್ನು ಮಾಡಿಲ್ಲ; ಮಾಡಬೇಕೆಂಬ ಆಸೆಯೇನೋ ಇತ್ತು. ಆದರೂ ಸಮಯ ಒದಗಿರಲಿಲ್ಲ. ಇಂದೇ ಅದು ನನಗೆ ದೇವರ ಕೃಪಾದೃಷ್ಟಿಯಿಂದ,

ತಮ್ಮೆಲ್ಲರ ಆಶೀರ್ವಾದದಿಂದ, ದೊರೆತಿದೆ. ಅದನ್ನೇ ಈಗ ಉಪಯೋಗಿಸಿ ಕೊಳ್ಳುತ್ತಲಿದ್ದೇನೆ. ನಾನು ನಿಮ್ಮೆಲ್ಲರ ಕಂದನು. ಕಂದನು ಹೇಳುವುದರಲ್ಲಿ ತಿಳಿವಳಿಕೆ ಇಲ್ಲದ ಮಾತುಗಳೇ ಹೆಚ್ಚಾಗಿ ಇರಬಹುದು. ಅದಕ್ಕಾಗಿ ತಾವು ಗಳೆಲ್ಲರೂ ಮನ್ನಿಸುವಿರೆಂಬ ದೃಢವಾದ ನಂಬಿಕೆಯುಳ್ಳವನಾಗಿದ್ದೇನೆ. ನಾನು ಇಂದು, 'ಸೀತಾ ಜನನ' ಎಂಬ ಕಥೆಯನ್ನು ಮಾಡುತ್ತೇನೆ'' ಎಂದನು.

ಕಾರ್ಯದರ್ಶಿಗಳು ಆತನಿಗೆ ಪೂವಮಾಲಿಕೆಯನ್ನು ಹಾಕಿದರು. ಕರ ತಾಡನವಾಯಿತು. ಕಥೆಯು ನಡೆಯುತ್ತಿತ್ತು. ಅಂದಿನ ಸಭೆಯಲ್ಲಿ ಆನಂದ ಬಾಷ್ಪವನ್ನು ಸುರಿಸದವರೇ ಇಲ್ಲ. ಎಲ್ಲೆಲ್ಲೂ ಆನಂದದ ಬೆಳದಿಂಗಳೇ ಪಸ ರಿಸಿತ್ತು!

ಸಭೆಯ ಮೂಲೆಯಲ್ಲಿ ನಿಂತಿದ್ದ ಒಬ್ಬಾತನು ಎಲ್ಲರಿಗಿಂತಲೂ ಹೆಚ್ಚಾಗಿ ಆನಂದಪಡುತ್ತಿದ್ದ. ಆತನ ವಯಸ್ಸು ಸುಮಾರು ಐವತ್ತಿರಬಹುದು. ಮುಖದಲ್ಲಿ ಬ್ರಹ್ಮ ತೇಜಸ್ಸು ಉಕ್ಕುತ್ತಿತ್ತು. ಆನಂದಬಾಷ್ಪವು ಒಂದೇ ಸಮನೆ ಹರಿಯುತ್ತಿತ್ತು. ಆತನು ತಲೆದೂಗುತ್ತ ನಿಂತಿದ್ದುದು ಸ್ವರ್ಗಸುಖ ವನ್ನೇ ಅನುಭವಿಸುತ್ತಿರುವನೋ ಎನ್ನುವಂತೆ ಭಾಸವಾಗುತ್ತಿತ್ತು. ಆತನಲ್ಲಿ ಆಗ ಬಾಹ್ಯದಂಗಗಳ ಚಲನಗಳಾವುವೂ ಕಾಣಿಸಲಿಲ್ಲ. ಆತನ ವಿಶ್ವ—ದಾಸನ ಕಥೆ; ಸಂಗೀತದ ಮಾಧುರ್ಯ; ಸವಿಯಾದ ಭಾವಗರ್ಭಿತವಾದ ಮೃದುಮಾತು; ಭಕ್ತಿ; ನಯವಾಗಿ ಕಥೆ ಹೇಳುವ ರೀತಿ—ಇವೇ ಆಗಿದ್ದವು.

ಯಕ್ಷಿಣಿಯವನ ಬಾಯಿಂದ ಒಂದೇ ಸಮನೆ ನಾನಾ ಬಣ್ಣಗಳ ಕಾಗ ದದ ಪಟ್ಟಿಯು ಬಂದು ರಾಶಿಯಾಗುವಂತೆ ದಾಸನ ಬಾಯಿಂದ ಮಾತುಗಳು ಸುರಿದು ಕಥೆಯಾಗುತ್ತಿತ್ತು! ಎಂತಹ ಅಂದವಾದ ಭಾಷೆ! ಸಮಯೋಚಿತ ವಾದ ಪದಗಳು. ಆತನು ಹೇಳುತ್ತಿದ್ದ ಒಂದೊಂದು ಪದವೂ ಸಭಿಕರನ್ನು ಸೆಳೆಯುತ್ತಿತ್ತು. ಕಥೆಯನ್ನು ಹೇಳುತ್ತಿದ್ದರೆ ಹೇಳುತ್ತಿರುವ ಭಾಗದ ದೃಶ್ಯವು ಕಣ್ಮುಂದೆ ಕಟ್ಟಿದಂತಾಗುತ್ತಿತ್ತು. ರಾವಣನು ತನ್ನ ಮಗಳಾದ ಸೀತೆ ಯಿಂದಲೇ ತನ್ನ ಮರಣವು ಸನ್ನಿಹಿತವಾಗುವುದೆಂದು ಜ್ಯೋತಿಷ್ಯಗಾರರಿಂದ

ತಿಳಿದವನಾದಾಗ ಮಗಳನ್ನು ನಿರ್ಮೂಲವಮಾಡಬೇಕೆಂದು ಮಾಡಿದ ಧೃಢವಾದ ಮನೋನಿಶ್ಚಯ ಮತ್ತು ಮರುಕ್ಷಣವೇ ಮಗಳೆಂಬ ಮೋಹದಸೆಳೆತಗಳ ಭಾವವನ್ನು ಜನರೆಂದೆಂದಿಗೂ ಮರೆಯದಂತೆ, ಅವರ ಮನಸ್ಸಿನಲ್ಲಿ ನಾಟುವಷ್ಟು ಚೆನ್ನಾಗಿ ಹೇಳಿದನು. ರಾವಣನು ವ್ಯಾಮೋಹದ ಬಲೆಗೆ ಸಿಕ್ಕಿ, ತನ್ನಷ್ಟಕ್ಕೆ ತಾನೇ ಪ್ರಲಾಪಿಸಿ ಪರಿತಪಿಸುತ್ತಿದ್ದಾಗಿನ ಮಾತುಗಳು ಎಲ್ಲರನ್ನು ದುಃಖದ ಮಡುವಿನಲ್ಲಿ ಮುಳುಗಿಸಿ ಬಿಟ್ಟಿತು. ಆಗಿನ ಆ ಕಣ್ಣೀರು, ಕಥೆಯು ಪೂರ್ಣವಾದಮೇಲೂ ಜನರ ಕಣ್ಣಿನಲ್ಲಿದ್ದಿತು. ಸಭಿಕರಿಗೆ ಕೇವಲ ಚಿಕ್ಕ ವಯಸ್ಸಿನ ಹುಚ್ಚನಂತಿರುವ ಈತನು, ಇಷ್ಟು ಚೆನ್ನಾಗಿ ಕಥೆ ಮಾಡುವನಲ್ಲಾ ಎಂಬ ಅಚ್ಚರಿ! ಇದರೊಡನೆ ಆಗ ಆದ ಆನಂದ!

ಕಾರ್ಯದರ್ಶಿಗಳ ಮುಖದಿಂದ ಮಾಯವಾಗಿದ್ದ ಕಳೆಯು ಈಗ ಪುಟಕ್ಕಿಕ್ಕಿದ ಚಿನ್ನದಂತೆ ಪ್ರಜ್ವಲಿಸತೊಡಗಿತು. ಕಾಲವು ಕಳೆದಂತೆ ಕಥೆಯೂ ಮುಗಿಯುತ್ತಾ ಬಂದಿತು. ಕಡೆಗೆ ಕಥೆಯೂ ಮುಗಿಯಲೇಬೇಕಾಗಿ ಬಂತು. "ಎಷ್ಟು ಜಾಗ್ರತೆ ಮುಗಿದುಹೋಯಿತು!" ಎಂದು ಜನರಾಡಿಕೊಳ್ಳುತ್ತಿದ್ದರೂ ಆಗ ಹನ್ನೊಂದೂವರೆಯಾಗಿಹೋಗಿತ್ತು!

ಮಂಗಳವು ಮುಗಿದೊಡನೆಯೇ ಮೂಲೆಯಲ್ಲಿದ್ದ — ಅತಿಯಾಗಿ ಆನಂದಪಟ್ಟಿದ್ದ—ಆತನು ಆತ್ಮಸಂತೃಪ್ತಿಯನ್ನು ತೋರಿಸಲು ಕರತಾಡನ ಮಾಡಿದನು. ಎಲ್ಲರೂ ಆತನನ್ನೇ ಅನುಕರಿಸಿ ಆತನನ್ನು ಮೊದಲನೆಯ ಸಲವಾಗಿ ನೋಡಿದೊಡನೆಯೇ, "ಗಡಿಯಾರದ ಶಾಸ್ತ್ರಿಗಳು!" ಎಂದು ಆಶ್ಚರ್ಯ ಸೂಚಿಸಿದರು. ಶಾಸ್ತ್ರಿಗಳ ಕಣ್ಣಿನಲ್ಲಿ ಇನ್ನೂ ಆನಂದಬಾಷ್ಪವು ಹರಿಯುತ್ತಿತ್ತು! ಇವರು ಯಾವಾಗ ಬಂದರೆಂದು ಎಲ್ಲರೂ ಕುತೂಹಲಿಗಳಾದರು.

ಆ ಕೂಡಲೇ ಶಾಸ್ತ್ರಿಗಳ ಬಳಿಗೆ ಕಾರ್ಯದರ್ಶಿಗಳು ಬಂದು ಉಚಿತ ರೀತಿಯಲ್ಲಿ ಸನ್ಮಾನಿಸಿ ಅವರಿಗೆ ಅನುಗುಣವಾದ ಸ್ಥಳದಲ್ಲಿ ಕೂಡಿಸಿದರು. ಆಮೇಲೆ, "ಮಹನೀಯರಾದ ಶಾಸ್ತ್ರಿಗಳವರಲ್ಲಿ ಭಕ್ತಮಂಡಲಿಯ ಪರವಾಗಿ ನನ್ನ ಬೇಡಿಕೆ. ನಾವು ಯಥಾರೀತಿಯಲ್ಲಿ ತಮಗೆ ಆಹ್ವಾನವಿತ್ತು, ಈಗ

ದುಡುಕಿ, ಕಾರ್ಯಭಾರವನ್ನು ಅವಸರದಲ್ಲಿ ನಡೆಯಿಸಿ ತಮ್ಮ ಮನಸ್ಸಿಗೆ ನೋವುಂಟುಮಾಡಿ ಕೃತಘ್ನರಾಗಿರುವ ನಮ್ಮನ್ನು ಕ್ಷಮಿಸಬೇಕು" ಎಂದು ದೀನರಾಗಿ ಬೇಡಿದರು. ಪಶ್ಚಾತ್ತಾಪವು ಮುಖದಲ್ಲಿ ಮೂಡಿತ್ತು!

ಶಾಸ್ತ್ರಿಗಳು, "ಸ್ವಾಮಿ! ಇದರಲ್ಲಿ ಯಾರೂ ಯಾವ ತಪ್ಪನ್ನೂ ಮಾಡಿಲ್ಲ ಮತ್ತು ನನ್ನ ಮನಸ್ಸಿಗೆ ನೋವನ್ನುಂಟುಮಾಡಿಲ್ಲ. ಯಾವತ್ತಿನ ಯಾವ ಕೆಲಸವು ಯಾವ ರೀತಿಯಲ್ಲಿ ಆಗಬೇಕೋ ಹಾಗೆಯೇ ಆಗುವುದು— ನಮ್ಮ ಇಷ್ಟದಂತೆ ಅಲ್ಲ! ಆ ರೀತಿಯಲ್ಲಿಯೇ ಆಗಲು ಪರಮಾತ್ಮನ ಪ್ರೇರಣೆಯು ಇದ್ದೇ ಇರುತ್ತದೆ. ದೇವನು ಎಂದು ಯಾವ ಸಮಯ ಸನ್ನಿವೇಶಗಳಲ್ಲಿ ಯಾರು ಯಾರನ್ನು ಎಂತೆಂತಹ ರೂಪದಲ್ಲಿ ಪ್ರಪಂಚದಲ್ಲಿ ತೋರಗೊಡಬೇಕೋ ಮತ್ತು ಅವರಲ್ಲಿನ ವಿದ್ಯೆ ಮಹಾತ್ಮೆಗಳನ್ನು ಹೊರಗೆಡಹಬೇಕೋ, ಹಾಗೆಯೇ ನಾಗಲು ಪ್ರೇರೇಪಿಸುವನು. ಶ್ರೀರಾಮನು ಇಂದಿನ ತನ್ನ ಸೇವೆಯನ್ನು ಈ ಮಹಾತ್ಮರಿಂದ ತೀರಿಸಿಕೊಂಡು, ತಾನೂ ಆನಂದಪಟ್ಟು, ನಿಮ್ಮೆಲ್ಲರನ್ನೂ ಆನಂದ ಸಮುದ್ರದಲ್ಲಿ ತೇಲಾಡಿಸಿ, ನನಗೆ ಗುರುಸಮಾನರಾದ ಈ ಮಹಾತ್ಮರ ದರ್ಶನಲಾಭವು ಸಿಕ್ಕಿಸಲೋಸುಗವೇ ಇಂದು ನನಗೆ ರೈಲೂ ತಪ್ಪಿ, ಹೊರಟ ಬಸ್ಸೂ ದಾರಿಯಲ್ಲಿ ಕೆಡುವಂತೆ ಪ್ರೇರೇಪಿಸಿದನೇ?........ ಹೌದು!—ಎಂತಹ ಆನಂದದಾಯಕವಾದ ಸುದಿನ ಈ ದಿನ! ಇಂದು ನಾನೊಬ್ಬನು ಏಕೆ ಇಲ್ಲಿ ನೆರದಿರುವವರೆಲ್ಲರೂ ಸಂತೋಷಪಟ್ಟಿದ್ದೀರಿ. ಇವರ ರೀತಿಯನ್ನೂ ವೇಷಭೂಷಣಗಳನ್ನೂ ನೋಡಿ ಯಾರಾದರೂ ಅಸಹ್ಯಪಟ್ಟುಕೊಂಡು ಹಾಸ್ಯವನ್ನೂ ಮಾಡಿರಬಹುದು. ಮಹಾತ್ಮರು ಎಂದೂ ತಮ್ಮ ವೇಷಭೂಷಣಗಳಿಂದಾಗಲೀ, ತಮ್ಮ ರೀತಿಯಿಂದಾಗಲೀ ಇತರರ ಮನಸ್ಸನ್ನು ಆಕರ್ಷಿಸುವುದಿಲ್ಲ. ಇಂತಹ ಮಹಾತ್ಮರು ಮಾಡಿದ ಕಥೆಯನ್ನು ಕೇಳಿ ಆನಂದಿಸಿ ಸುಖಪಡಲು ಸಮಯವನ್ನು ಕಲ್ಪಿಸಿಕೊಟ್ಟ ಆ ದೇವನಿಗೆ ನಾವು ಕೃತಜ್ಞರಾಗಿ ಚಿರಋಣಿಗಳಾಗಬೇಕು" ಎಂದು ಸಭಿಕರಿಗೆ ಹೇಳಿ ದಾಸರ ಕಡೆ ತಿರುಗಿ, "ಸ್ವಾಮಿ! ನನಗೆ ತಮ್ಮ ಪರಿಚಯವಿಲ್ಲ. ಇಂದು ನನಗಾದ ಅಮಿತಾನಂದವನ್ನು ಕೇವಲ ಮಾತುಗಳಿಂದ ವ್ಯಕ್ತಪಡಿಸಲಾರೆ.

ತಮ್ಮಂತಹ ಮಹನೀಯರಿಂದ ನಮ್ಮಂತಹ ಅಲ್ಪರು ತಿಳಿದುಕೊಳ್ಳಬೇಕಾದ ವಿಷಯಗಳು ಬಹಳ ಇವೆ. ತಾವು ನನ್ನ ಆತಿಥ್ಯವನ್ನು ಸ್ವೀಕರಿಸಿ ಇಂದು ನಮ್ಮ ಮನೆಗೆ ಬರಲೇಬೇಕು. ಅಲ್ಲದೆ ತಮಗೆ ತೊಂದರೆಯಾಗದಿದ್ದಲ್ಲಿ ನನ್ನಲ್ಲಿ ಕೆಲವು ದಿವಸಗಳಾದರೂ ಇರಬೇಕೆಂದು ಆಶಿಸುತ್ತೇನೆ'' ಎಂದು ಉತ್ತರವನ್ನು ನಿರೀಕ್ಷಿಸಿದರು.

ಆತನು, "ಸ್ವಾಮಿ! ನನ್ನನ್ನು ತಾವೇಕೆ ವೃಥಾ ಹೊಗಳುತ್ತೀರಿ. ನಾನು ಇದುವರೆಗೂ ಎಲ್ಲೂ ಯಾವ ಕಥೆಯನ್ನೂ ಮಾಡಿಲ್ಲ; ಮುಂದೆ ಮಾಡುವ ಆಸೆಯೂ ಇಲ್ಲ. ನನಗೇನೋ ಬಹಳ ದಿನದಿಂದ ಒಂದು ಕಥೆಯನ್ನು ಮಾಡಬೇಕೆಂದು ಆಸೆಯಿತ್ತು. ಆ ನನ್ನ ಆಸೆಯನ್ನು ಪೂರ್ಣಗೊಳಿಸಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳು. ನನ್ನಲ್ಲಿದ್ದ ತಪ್ಪುಗಳನ್ನೆಲ್ಲಾ ಮುಚ್ಚಿಟ್ಟು ಹೊಗಳುತ್ತಿರುವುದು ಕಲೋಪಾಸಕರಾದ ತಮ್ಮಲ್ಲಿರುವ ವಿಶಾಲ ಭಾವನೆಯನ್ನು ತೋರಿಸುತ್ತದೆ. ತಮ್ಮ ಈ ಭಾವನೆಗೆ ನಾನು ಚಿರ ಋಣಿಯು—ಸ್ವಾಮಿ! ನಾನು ಒಂದು ಸ್ಥಳದಲ್ಲಿ ನಿಲ್ಲುವವನಲ್ಲ—ಒಂದು ಕ್ಲುಪ್ತವಾದ ಕೆಲಸವನ್ನು ಮಾಡುವವನಲ್ಲ—ನನಗೆ ಬೇಕಾದುದೊಂದೂ ಈ ಪ್ರಪಂಚದಲ್ಲಿ ಇಲ್ಲ. ಈ ಕೆಲಸ ಮಾಡಿದರೆ ನನಗೆ ಸಂತೋಷವಾಗುವುದೆಂದು ಭಾವನೆಯು ಮನಸ್ಸಿನಲ್ಲಿ ಮೂಡಿದರೆ ಆ ಕೆಲಸವನ್ನು ನಾನು ಮಾಡಿಯೇ ಮಾಡುವೆನು! ನನ್ನವರೆಂಬುವವರೂ ನನಗೆ ಇಲ್ಲ! ಹಾಗೆ ಇವರು ನನ್ನವರೆಂದು ಒಂದು ವೇಳೆ ನನಗೆ ತೋರಿದರೂ ಅವರ ಬಳಿ ಸುಳಿಯಲು ಸಹ ದೇವರು ನನ್ನನ್ನು ಪ್ರೇರಿಸನು! ಆದುದರಿಂದ ನಾನು ಯಾರ ಬಳಿಯೂ ಇರಲಾರೆ—ಅಲ್ಲಿಗೆ ಬರಲಾರೆ'' ಎಂದನು. ಶಾಸ್ತ್ರಿಗಳು ಬಿಡಲೊಲ್ಲರು—ಈತನು ಬರಲೊಲ್ಲ! ಅಂತೂ ಬಹಳ ಚರ್ಚೆಯಾದಮೇಲೆ ಈತನು ಶಾಸ್ತ್ರಿಗಳೊಡನೆ ಹೋಗುವುದೆಂದೇ ನಿಶ್ಚಿತವಾಯಿತು. ಹೊರಡುವುದಕ್ಕೆ ಮುಂಚೆ ಮಂಡಳಿಯವರು ಮಾಡಿದ ಸನ್ಮಾನ ಒಂದನ್ನೂ ಆತನು ಸ್ವೀಕರಿಸಲಿಲ್ಲ. ಶಾಸ್ತ್ರಿಗಳಿಗೆ ಆತನ ಪೂರ್ವೋತ್ತರಗಳನ್ನೆಲ್ಲ ಪೂರ್ಣವಾಗಿ ತಿಳಿದುಕೊಳ್ಳಬೇಕೆಂದು ಆಸೆ. ಆದರೆ ಆತನು ಆಗ ಮಾಡಿದ ಮೌನಧಾರಣವನ್ನು ಮುರಿಯಲೇ ಇಲ್ಲ!

ಊಟದಲ್ಲಿಯೂ ಮೌನ. ಊಟವಾದಮೇಲೆ ಶಾಸ್ತ್ರಿಗಳು, "ಸ್ವಾಮಿ! ಇಲ್ಲಿಯೇ ನನ್ನೊಡನೆಯೇ ಇದ್ದುಬಿಡಿ ಮತ್ತೆಲ್ಲಿಯೂ ಹೋಗಬೇಡಿ" ಎಂದದಕ್ಕೂ ಉತ್ತರವಿಲ್ಲ. ಶಾಸ್ತ್ರಿಗಳು ಎಲ್ಲವನ್ನೂ ಮಾರನೆಯ ದಿವಸ ವಿಚಾರಿಸೋಣವೆಂದು ಆತನಿಗೆ ಮಲಗಲು ಸಜ್ಜುಗೊಳಿಸಿದರು. ಮೌನವನ್ನು ಮುರಿಯದಂತೇ ಮಲಗಿ ನಿದ್ರಿಸಿದನು ಆತ.

ಶಾಸ್ತ್ರಿಗಳು ಬೆಳಗ್ಗೆ ಎದ್ದು ನೋಡುವ ಹೊತ್ತಿಗೆ ಆತನು ಹಾಸಿಗೆಯಲ್ಲಿರಲಿಲ್ಲ. ಅವರು, "ಪಕ್ಷಿ ಹಾರಿಹೋಯಿತು. ಸ್ವೇಚ್ಛೆಯಾಗಿ ಹಾರಾಡುವ ಪಕ್ಷಿಯು ನಿರ್ಬಂಧಕ್ಕೆ ಸಿಕ್ಕಲು ಇಷ್ಟಪಟ್ಟೀತೆ" ಎಂದು ಉಸಿರೆಳೆದು, "ಆತನನ್ನು—ಆ ಮಹಾತ್ಮನನ್ನು—ನನ್ನ ಜೊತೆಯಲ್ಲಿರಿಸಿಕೊಳ್ಳುವ ಭಾಗ್ಯವು ನನಗಿಲ್ಲದೆಹೋಯಿತೆ!" ಎಂದು ಆತನ ಮುಖವನ್ನು ಮನಸ್ಸಿನಲ್ಲಿಯೇ ಚಿತ್ರಿಸುತ್ತ ಕೊಂಚಕಾಲ ನಿಂತಿದ್ದರು.

ಆಮೇಲೆ, "ಅದೆಷ್ಟು ಚೆನ್ನಾಗಿ ಆತನು ಕಥೆಮಾಡಿದನು. ಆ ಕಥೆಯಲ್ಲಿ ಆತನು ಹೇಳಿದಂತೆ ಸೀತೆಯು ನಿಜವಾಗಿಯೂ ರಾವಣನ ಮಗಳೇ? ರಾವಣನೇ ಅವಳನ್ನು ನಾಶಪಡಿಸಲು ನಿರ್ಧರಿಸಿ ಒಂದು ಪೆಟ್ಟಿಗೆಯಲ್ಲಿ ಅವಳನ್ನು ಮುಚ್ಚಿಸಿ ಸಮುದ್ರದಮೇಲೆ ತೇಲಿಬಿಟ್ಟನೆ? ಇದು ನಿಜವಹುದೋ ಅಲ್ಲವೋ ಬಲ್ಲವರು ಯಾರು? ಒಂದು ವೇಳೆ ಸೀತೆಯು ರಾವಣನ ಮಗಳಾಗದೆ ಈತನು ಮನಬಂದಂತೆ ಊಹಿಸಿ ಸುಳ್ಳನ್ನೇ ಹೇಳಿದ್ದರೂ, ಹೇಳುತ್ತಿದ್ದಾಗ ಮಾತ್ರ ಖಂಡಿತವಾಗಿಯೂ ಸೀತೆಯು ರಾವಣನ ಮಗಳೇ ಹೌದೆಂಬ ಭಾವನೆಯು ನೆಲಸಿತ್ತು. ಆತನು ನನ್ನ ಬಳಿಯೇ ಇದ್ದುಬಿಟ್ಟಿದ್ದರೆ........"ಎಂದು ಯೋಚಿಸಿ ಏಕೋ ಏನೋ ಕಣ್ಣೀರು ಹಾಕಿಕೊಂಡರು.

* * *

ಗಡಿಯಾರದ ಶಾಸ್ತ್ರಿಗಳ ಕಥೆ ಅಂದು ರಾಮಪುರದಲ್ಲಿ. ಅಂದೇ ಕಥೆಯಾದ್ದರಿಂದ ಶಾಸ್ತ್ರಿಗಳು ಬೆಳಗ್ಗೆಯೇ ಆ ಊರಿಗೆ ಬಂದರು. ಒಮ್ಮೆ ಊರಿನಲ್ಲಿ ಹಾಗೆಯೇ ಅಡ್ಡಾಡಿ ಬರೋಣವೆಂದು ಹೊರಟು ಬರುತ್ತಿರುವಾಗ ದಾರಿಯಲ್ಲಿ ಒಂದು ಪಕ್ಕದಲ್ಲಿ ಒಂದು ಹುಡುಗರ—ದೊಡ್ಡವರೂ ಇದ್ದರು—

ಗುಂಪು ಇತ್ತು. ಎಲ್ಲರೂ ಏಕಮನಸ್ಸಿನಿಂದ ಆ ಗೋಡೆಯ ಕಡೆ ನೋಡು ತ್ತಿದ್ದರು. ಕುತೂಹಲಾವಿರ್ಭವಿತರಾದ ಶಾಸ್ತ್ರಿಗಳೂ ಅತ್ತ ಕಡೆ ನೋಡಿದರು. ಅಲ್ಲಿದ್ದ ಸ್ವಚ್ಛವಾಗಿದ್ದ ಬಿಳಿಯ ಗೋಡೆಯಮೇಲೆ ಇದ್ದಲಿನಿಂದ ಬರೆಯಲ್ಪಟ್ಟಿದ್ದ ಚಿತ್ರವೊಂದಿತ್ತು. ಎಲ್ಲರೂ ಚಿರಗಾಗಿ ಅದನ್ನೇ ನೋಡುತ್ತಿದ್ದರು. ಶಾಸ್ತ್ರಿಗಳೂ ಅದನ್ನು ನೋಡಿ ಸ್ತಬ್ಧರಾಗಿ ನಿಂತುಬಿಟ್ಟರು. ಯಾವ ಘನವಾದ ಕಲೋಪಾಸಕನ ಕೈ ಓಡಾಟವೋ! ಅದು ನೋಡಿದವನ ಮನಸ್ಸನ್ನು ಸೆಳೆಯುತ್ತಿತ್ತು! ಅವನು ಕಣ್ಣೀರಿಡುತ್ತ ನಿಂತಿದ್ದಾನೆ. ಉದ್ದವಾಗಿ ಬೆಳೆದ ಗಡ್ಡ. ಆಕೆಯು ಅಲ್ಲಿ ಸತ್ತುಬಿದ್ದಿದ್ದಾಳೆ, ಸತ್ತಿದ್ದರೂ ಮುಖದಲ್ಲಿ ಒಂದು ನಸುನಗೆ. ಸಾಯುವಾಗ ನಗು ನಗುತ್ತ ಸತ್ತಿದ್ದಳೇನೋ! ಆಕೆಯ ಪಕ್ಕದಲ್ಲಿನ ಮಗುವೂ ಸತ್ತುಬಿದ್ದಿದೆ!! ಅವನ ಮುಖದಲ್ಲಿ ಯಾವುದೋ ನಿರಾಶೆಯು ಅತಿಯಾಗಿ ಮೂಡಿದೆ. ಎತ್ತರದಲ್ಲಿ ಎರಡು ಭಯಂಕರ ವ್ಯಕ್ತಿಗಳು ನಿಂತಿವೆ. ಅವುಗಳ ಮುಖದಲ್ಲಿ ಅಟ್ಟಹಾಸದ ನಗು. ತಮ್ಮ ಕಾರ್ಯವನ್ನು ಸಾಧಿಸಿದ್ದೇವೆಂದೇನೋ? ಆ ಚಿತ್ರದ ಕೆಳಗೆ, "ಅಂದಿನಿಂದ—" ಎಂದು ಬರೆದಿದೆ. ಶಾಸ್ತ್ರಿಗಳು ನೋಡಿಯೇ ನೋಡಿದರು. "ಅಯ್ಯೋ ಪಾಪ! ಅವರಿಬ್ಬರೂ ಒಂದೇ ದಿವಸ ಮಡಿದರೇನೋ? ನಿರಾಶನಾದ ಈತನು ಯಾವುದನ್ನು— ತನಗೆ ಯಾವುದು ಬೇಕಾಗಿತ್ತೋ, ತನ್ನ ಜೀವಕ್ಕಿಂತ ಹೆಚ್ಚಾಗಿ ಯಾವುದನ್ನು ಪ್ರೀತಿಸುತ್ತಿದ್ದನೋ ಆ ವಸ್ತುವನ್ನು—ತನ್ನಿಂದ ದೂರಮಾಡಿದ ಕ್ರೂರಿಗಳನ್ನು ನೆನೆದು ತನ್ನ ದುಸ್ಥಿತಿಗಾಗಿ, ತನ್ನ ಆ ಪ್ರೀತಿಯ ವಸ್ತುಗಳಿಗಾಗಿ ಕಣ್ಣೀರಿಡುತ್ತಿದ್ದಾನೆ. ಅಂದಿನಿಂದ ಆತನಿಗೆ ಯಾವುದೂ ಬೇಕಾಗಿಲ್ಲವೇನೋ! ಅಂದಿನಿಂದ ಆತನು ಹುಚ್ಚನಾಗಿದಾನೆಯೋ ಏನೋ" ಎಂದು ಶಾಸ್ತ್ರಿಗಳು ಅವನ ಸ್ಥಿತಿಗಾಗಿ ಮರುಗಿ ಯೋಚಿಸಿದರು.

ಶಾಸ್ತ್ರಿಗಳು "ಇದನ್ನು ಬರೆದವರು ಯಾರು?" ಎಂದು ಅಲ್ಲಿದ್ದ ಒಬ್ಬ ಹುಡುಗನನ್ನು ಕೇಳಿದರು.

"ಒಬ್ಬ ಹುಚ್ಚ ಬರೆದಿದ್ದಾನೆ. ಅವನು ಯಾವಾಗಲೂ ಹೀಗೆಯೇ ಕಂಡಕಂಡ ಕಡೆಯಲ್ಲೆಲ್ಲಾ ಬರೆಯುತ್ತಾನೆ. ಅವನು ಬರೆಯುವಾಗ ಯಾರಾದರೂ ಬಂದರೆ ಓಡಿಹೋಗುತ್ತಾನೆ" ಎಂದನು.

"ಅವನ ಸ್ಥಳ ಈ ಊರೆಯೋ?"

"ಅಲ್ಲ! ಇಲ್ಲಿಗೆ ಅವನು ಬಂದು ಐದಾರು ದಿವಸಗಳಾದವು"

"ಇನ್ನೂ ಇದೇ ಊರಿನಲ್ಲಿಯೇ ಇದ್ದಾನೆಯೇ?"

"ಹೌದು! ಈಗ ತಾನೆ ಇಲ್ಲಿಂದ ಹೋದ. ಇದು ಬರೆದು ಸ್ವಲ್ಪ ಹೊತ್ತಾಯಿತು. ಅವನು ಬಹಳ ಚೆನ್ನಾಗಿ ಬರೆಯುತ್ತಾನೆ ಅಲ್ಲವೇನ್ರಿ?"

"ಹೌದಪ್ಪ!" ಎಂದು ಶಾಸ್ತ್ರಿಗಳು ಆ ದೃಶ್ಯವನ್ನು ಮನತಣಿಯುವ ತನಕ ನೋಡಿದರು. "ಎಂತಹ ಕೈ ಓಡಾಟ. ಬರೀ ಇದ್ದಲಿನಲ್ಲಿ ಎಷ್ಟು ಚೆನ್ನಾಗಿ ಬರೆದಿದ್ದಾನೆ! ಎಷ್ಟು ಭಾವಗರ್ಭಿತವಾಗಿ ಬರೆದಿದ್ದಾನೆ. ಆತನೆಂತಹ ಪ್ರತಿಭಾಶಾಲಿಯಾಗಿರಬೇಕು. ಹುಚ್ಚನೆಂದು ಹುಡುಗನು ಹೇಳುತ್ತಾನೆ. ಆತನು ನಿಜವಾಗಿಯೂ ಹುಚ್ಚನಲ್ಲ; ಉನ್ಮತ್ತನು! ಅಂದಿನ ಆ ದುಃಖವು ಹೃದಯದಿಂದ ಅಳಿಸಿಲ್ಲವಾದ್ದರಿಂದ ಆ ರೀತಿ ನಿರಾಶನಾಗಿ ಹೃದಯದಲ್ಲಿರು ವುದನ್ನೇ ಮೂಡಿಸಿರಬಹುದು. ಅದೇ ಅವನ ಸಂತೋಷವೇನೋ? ಆತನು ತನ್ನ ನೈಜವಾದ ಜೀವನ ಚರಿತ್ರೆಯ ಒಂದು ಭಾಗವನ್ನೇ ಇಲ್ಲಿ ಚಿತ್ರಿಸಿರ ಬಹುದು. ಈ ದೃಶ್ಯವೇ ಕರಳು ಕೊರೆಯುವುದು—ಇನ್ನು ಅಂದಿನ ಅವನ ಸ್ಥಿತಿಯು? ಹೀಗಾಗಬಾರದಾಗಿತ್ತು! ಪಾಪ! ಆ ಸಮಯದಲ್ಲಿ ಆ ಮೋಹ ವನ್ನು ಸೆಳೆಯಲು ಬೇರೆವಸ್ತುವು ಆ ಸ್ಥಾನವನ್ನು ಸೇರಲಿಲ್ಲವೇನೋ" ಎಂದ ಕೊಳ್ಳುತ್ತಾ ಅಲ್ಲಿಂದ ಜಾರಿದರು.

ಹಾಗೆಯೇ ಬರುತ್ತಿರುವಲ್ಲಿ ಅಲ್ಲೊಂದು ಚಿತ್ರ—ಒಬ್ಬ ಹೆಂಗಸು ನಗ ತ್ತಿದ್ದುದು. ಆಹಾ! ಎಂತಹ ಸುಂದರವಾದ ಮುಖ. ಆಕೆಯ ಮುಖದ ಮೇಲೆ ತಿಳಿಯಾದ ಕಿರುನಗೆ. ಮನವೆಳೆಯುವ ಕಣ್ಣುಗಳು. ತಿದ್ದಿದ ಹುಬ್ಬು ಗಳು. ಅಗಲವಾದ ಹಣೆ. ಹಣೆಯಮೇಲಿನ ಕುಂಕುಮವು ಸತೀತ್ವವನ್ನು ಎತ್ತಿ ತೋರುತ್ತಿತ್ತು. ಅದರ ಕೆಳಗೆ "ಅವಳು" ಎಂದು ಬರೆದಿತ್ತು. "ಆತನ ಹೆಂಡತಿಯೇ? ಇರಬಹುದು!" ಎಂದುಕೊಂಡು ಶಾಸ್ತ್ರಿಗಳು ಅದನ್ನು ತೃಪ್ತ ರಾಗುವವರೆಗೂ ನೋಡಿ ಮುಂದೆ ನಡೆದರು.

ದೇವಿಯೇ ಮೂರ್ತೀಭವಿಸಿ ಆತನ ಹೃದಯದಲ್ಲಿ ನಿಂತು ಹಾಡುತ್ತಿರುವಳೋ ಎನ್ನುವಂತೆ ಭಾಸವಾಗುತ್ತಿತ್ತು. ಎಲ್ಲರೂ ಯೋಗಸಾಧನೆಯಲ್ಲಿ ಮಗ್ನರಾದವರಂತೆ ಏಕದೃಷ್ಟಿಯಿಂದ ಆತನನ್ನೇ ನೋಡುತ್ತಿದ್ದರು! ರೆಪ್ಪೆಯನ್ನು ಮಿಟುಕಿಸಲಿಲ್ಲ; ಕೈಕಾಲುಗಳನ್ನು ಅಲ್ಲಾಡಿಸಲಿಲ್ಲ; ತಲೆಯನ್ನು ತಿರುಗಿಸಲಿಲ್ಲ; ತುಟಿಯನ್ನು ಅಲುಗಿಸಲಿಲ್ಲ! ಆಗ ಸಭೆಗೆಲ್ಲಾ ಶ್ರಾವ್ಯವಾಗಿದ್ದುದು ಒಂದೇ ಒಂದು ಶಬ್ದ—ಮಧುರವಾದುದು; ದೈವತ್ವವಿದ್ದುದು; ಕಲಾದೇವಿ ಅಂಶವು ತುಂಬಿ ತುಳುಕುತ್ತಿದ್ದುದು. ಸಭಿಕರೆಂದಾದರೂ ಅಂತಹ ಸಂಗೀತವನ್ನು ಕೇಳಿದ್ದರೋ ಇಲ್ಲವೋ ಯಾರು ಬಲ್ಲರು! ಎಲ್ಲರೂ ಸ್ತಂಭೀಭೂತರಾಗಿ ಬೊಂಬೆಗಳಂತೆ ಮನಮೋಕವುಳ್ಳವರಾಗಿ ಕುಳಿತಿದ್ದರು.

ದೇವರ ಪ್ರಾರ್ಥನೆಯಾದಮೇಲೆ ಮತ್ತೊಮ್ಮೆ "ಜೈ ವಿಠಲ್!" ಎಂದು ಮಾಡಿದ ಜಯಘೋಷವು ದೇವೀ ಅಂಶದಿಂದ ಕೂಡಿ ಇದ್ದುದರಿಂದ ಪ್ರತಿಯೊಬ್ಬನ ಹೃದಯವನ್ನೂ ತಟ್ಟಿ ಅವರ ಅರಿವಿಲ್ಲದೇ ಪ್ರತಿಧ್ವನಿಯಾಯಿತು. ಅವರೆಲ್ಲರ ಬಾಯಿಂದಲೂ ಏಕಕಂಠವಾಗಿ ಬಂದ ನಾಮಸ್ಮರಣೆಗಾಗಿ ಆತನು ನರಕದ ಬೆದರಿಕೆಯನ್ನಾಗಲಿ, ಪಿಶಾಚದ ಭಯವನ್ನಾಗಲಿ ತೋರಿರಲಿಲ್ಲ! ಎಲ್ಲರ ಮನಮೆಚ್ಚಿಸಿದ್ದನು!

ಆತನು ಸಭಿಕರಿಗೆ ನಮಸ್ಕರಿಸಿ, "ತಾಯಿತಂದೆಯರೇ! ನಾನು ಇಲ್ಲಿಗೆ ಬಂದು ಹರಿನಾಮಸ್ಮರಣೆ ಮಾಡಬೇಕಾಗಿದ್ದುದು ದೈವೇಚ್ಛೆಯಾಗಿದ್ದಿತೋ ಏನೋ! ನನಗೆ ಹೆಚ್ಚು ತಿಳಿವಳಿಕೆ ಇಲ್ಲ. ನಾನು ಇಂದು ಇಲ್ಲಿಗೆ ಬಂದುದೂ ಕಥೆಯನ್ನು ಮಾಡಬೇಕೆಂಬ ಉದ್ದೇಶದಿಂದಲ್ಲ. ಈ ಸನ್ನಿವೇಶವು ಒದಗುವುದೆಂದು ಕೂಡ ನಾನೆಂದುಕೊಂಡಿರಲಿಲ್ಲ. ಕಾರ್ಯದರ್ಶಿಗಳ ಮಾತುಗಳು ನನ್ನಲ್ಲಿ ಯಾವುದೋ ಒಂದು ಸ್ಫೂರ್ತಿಯನ್ನು ಹುಟ್ಟಿಸಿದವು. ದೇವರು ತಾನಾಗಿ ಒದಗಿಸಿಕೊಟ್ಟ ಸಮಯವನ್ನು ಬಿಡಬಾರದು ಎಂದುಕೊಂಡು, ನಾನು ನಿಮ್ಮೆಲ್ಲರ ಮುಂದೆ ಬಂದು ನಿಂತಿದ್ದೇನೆ. ನಾನು ಹಿಂದೆಂದೂ ಕಥೆಯನ್ನು ಮಾಡಿಲ್ಲ; ಮಾಡಬೇಕೆಂಬ ಆಸೆಯೇನೋ ಇತ್ತು. ಆದರೂ ಸಮಯ ಒದಗಿರಲಿಲ್ಲ. ಇಂದೇ ಅದು ನನಗೆ ದೇವರ ಕೃಪಾದೃಷ್ಟಿಯಿಂದ,

ತಮ್ಮೆಲ್ಲರ ಆಶೀರ್ವಾದದಿಂದ, ದೊರೆತಿದೆ. ಅದನ್ನೇ ಈಗ ಉಪಯೋಗಿಸಿ ಕೊಳ್ಳುತ್ತಲಿದ್ದೇನೆ. ನಾನು ನಿಮ್ಮೆಲ್ಲರ ಕಂದನು. ಕಂದನು ಹೇಳುವುದರಲ್ಲಿ ತಿಳಿವಳಿಕೆ ಇಲ್ಲದ ಮಾತುಗಳೇ ಹೆಚ್ಚಾಗಿ ಇರಬಹುದು. ಅದಕ್ಕಾಗಿ ತಾವು ಗಳೆಲ್ಲರೂ ಮನ್ನಿಸುವಿರೆಂಬ ದೃಢವಾದ ನಂಬಿಕೆಯುಳ್ಳವನಾಗಿದ್ದೇನೆ. ನಾನು ಇಂದು, 'ಸೀತಾ ಜನನ' ಎಂಬ ಕಥೆಯನ್ನು ಮಾಡುತ್ತೇನೆ'' ಎಂದನು.

ಕಾರ್ಯದರ್ಶಿಗಳು ಆತನಿಗೆ ಪೂಮಾಲಿಕೆಯನ್ನು ಹಾಕಿದರು. ಕರ ತಾಡನವಾಯಿತು. ಕಥೆಯು ನಡೆಯುತ್ತಿತ್ತು. ಅಂದಿನ ಸಭೆಯಲ್ಲಿ ಆನಂದ ಬಾಷ್ಪವನ್ನು ಸುರಿಸದವರೇ ಇಲ್ಲ. ಎಲ್ಲೆಲ್ಲೂ ಆನಂದದ ಬೆಳದಿಂಗಳೇ ಪಸ ರಿಸಿತ್ತು!

ಸಭೆಯ ಮೂಲೆಯಲ್ಲಿ ನಿಂತಿದ್ದ ಒಬ್ಬಾತನು ಎಲ್ಲರಿಗಿಂತಲೂ ಹೆಚ್ಚಾಗಿ ಆನಂದಪಡುತ್ತಿದ್ದ. ಆತನ ವಯಸ್ಸು ಸುಮಾರು ಐವತ್ತಿರಬಹುದು. ಮುಖದಲ್ಲಿ ಬ್ರಹ್ಮ ತೇಜಸ್ಸು ಉಕ್ಕುತ್ತಿತ್ತು. ಆನಂದಬಾಷ್ಪವು ಒಂದೇ ಸಮನೆ ಹರಿಯುತ್ತಿತ್ತು. ಆತನು ತಲೆದೂಗುತ್ತ ನಿಂತಿದ್ದುದು ಸ್ವರ್ಗಸುಖ ವನ್ನೇ ಅನುಭವಿಸುತ್ತಿರುವನೋ ಎನ್ನುವಂತೆ ಭಾಸವಾಗುತ್ತಿತ್ತು. ಆತನಲ್ಲಿ ಆಗ ಬಾಹ್ಯದಂಗಗಳ ಚಲನಗಳಾವುವೂ ಕಾಣಿಸಲಿಲ್ಲ. ಆತನ ವಿಶ್ವ—ದಾಸನ ಕಥೆ; ಸಂಗೀತದ ಮಾಧುರ್ಯ; ಸವಿಯಾದ ಭಾವಗರ್ಭಿತವಾದ ಮೃದುಮಾತು; ಭಕ್ತಿ; ನಯವಾಗಿ ಕಥೆ ಹೇಳುವ ರೀತಿ—ಇವೇ ಆಗಿದ್ದವು.

ಯಕ್ಷಿಣಿಯವನ ಬಾಯಿಂದ ಒಂದೇ ಸಮನೆ ನಾನಾ ಬಣ್ಣಗಳ ಕಾಗ ದದ ಪಟ್ಟಿಯು ಬಂದು ರಾಶಿಯಾಗುವಂತೆ ದಾಸನ ಬಾಯಿಂದ ಮಾತುಗಳು ಸುರಿದು ಕಥೆಯಾಗುತ್ತಿತ್ತು! ಎಂತಹ ಅಂದವಾದ ಭಾಷೆ! ಸಮಯೋಚಿತ ವಾದ ಪದಗಳು. ಆತನು ಹೇಳುತ್ತಿದ್ದ ಒಂದೊಂದು ಪದವೂ ಸಭಿಕರನ್ನು ಸೆಳೆಯುತ್ತಿತ್ತು. ಕಥೆಯನ್ನು ಹೇಳುತ್ತಿದ್ದರೆ ಹೇಳುತ್ತಿರುವ ಭಾಗದ ದೃಶ್ಯವು ಕಣ್ಮುಂದೆ ಕಟ್ಟಿದಂತಾಗುತ್ತಿತ್ತು. ರಾವಣನು ತನ್ನ ಮಗಳಾದ ಸೀತೆ ಯಿಂದಲೇ ತನ್ನ ಮರಣವು ಸನ್ನಿಹಿತವಾಗುವುದೆಂದು ಜ್ಯೋತಿಷ್ಯಗಾರರಿಂದ

ತಿಳಿದವನಾದಾಗ ಮಗಳನ್ನು ನಿರ್ಮೂಲಮಾಡಬೇಕೆಂದು ಮಾಡಿದ ಧೃಡವಾದ ಮನೋನಿಶ್ಚಯ ಮತ್ತು ಮರುಕ್ಷಣವೇ ಮಗಳೆಂಬ ಮೋಹದಸೆಳೆತಗಳ ಭಾವವನ್ನು ಜನರೆಂದೆಂದಿಗೂ ಮರೆಯದಂತೆ, ಅವರ ಮನಸ್ಸಿನಲ್ಲಿ ನಾಟುವಷ್ಟು ಚೆನ್ನಾಗಿ ಹೇಳಿದನು. ರಾವಣನು ವ್ಯಾಮೋಹದ ಬಲೆಗೆ ಸಿಕ್ಕಿ, ತನ್ನಷ್ಟಕ್ಕೆ ತಾನೇ ಪ್ರಲಾಪಿಸಿ ಪರಿತಪಿಸುತ್ತಿದ್ದಾಗಿನ ಮಾತುಗಳು ಎಲ್ಲರನ್ನು ದುಃಖದ ಮಡುವಿನಲ್ಲಿ ಮುಳುಗಿಸಿ ಬಿಟ್ಟಿತು. ಆಗಿನ ಆ ಕಣ್ಣೀರು, ಕಥೆಯು ಪೂರ್ಣವಾದಮೇಲೂ ಜನರ ಕಣ್ಣಿನಲ್ಲಿದ್ದಿತು. ಸಭಿಕರಿಗೆ ಕೇವಲ ಚಿಕ್ಕ ವಯಸ್ಸಿನ ಹುಚ್ಚನಂತಿರುವ ಈತನು, ಇಷ್ಟು ಚೆನ್ನಾಗಿ ಕಥೆ ಮಾಡುವನಲ್ಲಾ ಎಂಬ ಅಚ್ಚರಿ! ಇದರೊಡನೆ ಆಗ ಆದ ಆನಂದ!

ಕಾರ್ಯದರ್ಶಿಗಳ ಮುಖದಿಂದ ಮಾಯವಾಗಿದ್ದ ಕಳೆಯು ಈಗ ಪುಟಕ್ಕಿಕ್ಕಿದ ಚಿನ್ನದಂತೆ ಪ್ರಜ್ವಲಿಸತೊಡಗಿತು. ಕಾಲವು ಕಳೆದಂತೆ ಕಥೆಯೂ ಮುಗಿಯುತ್ತಾ ಬಂದಿತು. ಕಡೆಗೆ ಕಥೆಯೂ ಮುಗಿಯಲೇಬೇಕಾಗಿ ಬಂತು. "ಎಷ್ಟು ಜಾಗ್ರತೆ ಮುಗಿದುಹೋಯಿತು!" ಎಂದು ಜನರಾಡಿಕೊಳ್ಳುತ್ತಿದ್ದರೂ ಆಗ ಹನ್ನೊಂದೂವರೆಯಾಗಿಹೋಗಿತ್ತು!

ಮಂಗಳವು ಮುಗಿದೊಡನೆಯೇ ಮೂಲೆಯಲ್ಲಿದ್ದ — ಅತಿಯಾಗಿ ಆನಂದಪಟ್ಟಿದ್ದ—ಆತನು ಆತ್ಮಸಂತೃಪ್ತಿಯನ್ನು ತೋರಿಸಲು ಕರತಾಡನ ಮಾಡಿದನು. ಎಲ್ಲರೂ ಆತನನ್ನೇ ಅನುಕರಿಸಿ ಆತನನ್ನು ಮೊದಲನೆಯ ಸಲವಾಗಿ ನೋಡಿದೊಡನೆಯೇ, " ಗಡಿಯಾರದ ಶಾಸ್ತ್ರಿಗಳು! " ಎಂದು ಆಶ್ಚರ್ಯ ಸೂಚಿಸಿದರು. ಶಾಸ್ತ್ರಿಗಳ ಕಣ್ಣಿನಲ್ಲಿ ಇನ್ನೂ ಆನಂದಬಾಷ್ಪವು ಹರಿಯುತ್ತಿತ್ತು! ಇವರು ಯಾವಾಗ ಬಂದವರೆಂದು ಎಲ್ಲರೂ ಕುತೂಹಲಿಗಳಾದರು.

ಆ ಕೂಡಲೇ ಶಾಸ್ತ್ರಿಗಳ ಬಳಿಗೆ ಕಾರ್ಯದರ್ಶಿಗಳು ಬಂದು ಉಚಿತ ರೀತಿಯಲ್ಲಿ ಸನ್ಮಾನಿಸಿ ಅವರಿಗೆ ಅನುಗುಣವಾದ ಸ್ಥಳದಲ್ಲಿ ಕೂಡಿಸಿದರು. ಆಮೇಲೆ, "ಮಹನೀಯರಾದ ಶಾಸ್ತ್ರಿಗಳವರಲ್ಲಿ ಭಕ್ತಮಂಡಲಿಯ ಪರವಾಗಿ ನನ್ನ ಬೇಡಿಕೆ. ನಾವು ಯಥಾರೀತಿಯಲ್ಲಿ ತಮಗೆ ಆಹ್ವಾನವಿತ್ತು, ಈಗ

ಮುಡುಕಿ, ಕಾರ್ಯಭಾರವನ್ನು ಅವಸರದಲ್ಲಿ ನಡೆಯಿಸಿ ತಮ್ಮ ಮನಸ್ಸಿಗೆ ನೋವುಂಟುಮಾಡಿ ಕೃತಘ್ನರಾಗಿರುವ ನಮ್ಮನ್ನು ಕ್ಷಮಿಸಬೇಕು'' ಎಂದು ದೀನರಾಗಿ ಬೇಡಿದರು. ಪಶ್ಚಾತ್ತಾಪವು ಮುಖದಲ್ಲಿ ಮೂಡಿತ್ತು!

ಶಾಸ್ತ್ರಿಗಳು, "ಸ್ವಾಮಿ! ಇದರಲ್ಲಿ ಯಾರೂ ಯಾವ ತಪ್ಪನ್ನೂ ಮಾಡಿಲ್ಲ ಮತ್ತು ನನ್ನ ಮನಸ್ಸಿಗೆ ನೋವನ್ನುಂಟುಮಾಡಿಲ್ಲ. ಯಾವತ್ತಿನ ಯಾವ ಕೆಲಸವು ಯಾವ ರೀತಿಯಲ್ಲಿ ಆಗಬೇಕೋ ಹಾಗೆಯೇ ಆಗುವುದು– ನಮ್ಮ ಇಷ್ಟದಂತೆ ಅಲ್ಲ! ಆ ರೀತಿಯಲ್ಲಿಯೇ ಆಗಲು ಪರಮಾತ್ಮನ ಪ್ರೇರಣೆಯು ಇದ್ದೇ ಇರುತ್ತದೆ. ದೇವನು ಎಂದು ಯಾವ ಸಮಯ ಸನ್ನಿವೇಶಗಳಲ್ಲಿ ಯಾರು ಯಾರನ್ನು ಎಂತೆಂತಹ ರೂಪದಲ್ಲಿ ಪ್ರಪಂಚದಲ್ಲಿ ತೋರಗೊಡಬೇಕೋ ಮತ್ತು ಅವರಲ್ಲಿನ ವಿದ್ಯೆ ಮಹಾತ್ಮೆಗಳನ್ನು ಹೊರಗೆಡಹಬೇಕೋ, ಹಾಗೆಯೇ ಸಾಗಲು ಪ್ರೇರೇಪಿಸುವನು. ಶ್ರೀರಾಮನು ಇಂದಿನ ತನ್ನ ಸೇವೆಯನ್ನು ಈ ಮಹಾತ್ಮರಿಂದ ತೀರಿಸಿಕೊಂಡು, ತಾನೂ ಆನಂದಪಟ್ಟು, ನಿಮ್ಮೆಲ್ಲರನ್ನೂ ಆನಂದ ಸಮುದ್ರದಲ್ಲಿ ತೇಲಾಡಿಸಿ, ನನಗೆ ಗುರುಸಮಾನರಾದ ಈ ಮಹಾತ್ಮರ ದರ್ಶನಲಾಭವು ಸಿಕ್ಕಿಸಲೋಸುಗವೇ ಇಂದು ನನಗೆ ರೈಲೂ ತಪ್ಪಿ, ಹೊರಟ ಬಸ್ಸೂ ದಾರಿಯಲ್ಲಿ ಕೆಡುವಂತೆ ಪ್ರೇರೇಪಿಸಿದನೇ?........ ಹೌದು!—ಎಂತಹ ಆನಂದದಾಯಕವಾದ ಸುದಿನ ಈ ದಿನ! ಇಂದು ನಾನೊಬ್ಬನು ಏಕೆ ಇಲ್ಲಿ ನೆರದಿರುವವರೆಲ್ಲರೂ ಸಂತೋಷಪಟ್ಟಿದ್ದೀರಿ. ಇವರ ರೀತಿಯನ್ನೂ ವೇಷಭೂಷಣಗಳನ್ನೂ ನೋಡಿ ಯಾರಾದರೂ ಅಸಹ್ಯಪಟ್ಟುಕೊಂಡು ಹಾಸ್ಯವನ್ನೂ ಮಾಡಿರಬಹುದು. ಮಹಾತ್ಮರು ಎಂದೂ ತಮ್ಮ ವೇಷಭೂಷಣಗಳಿಂದಾಗಲೀ, ತಮ್ಮ ರೀತಿಯಿಂದಾಗಲೀ ಇತರರ ಮನಸ್ಸನ್ನು ಆಕರ್ಷಿಸುವುದಿಲ್ಲ. ಇಂತಹ ಮಹಾತ್ಮರು ಮಾಡಿದ ಕಥೆಯನ್ನು ಕೇಳಿ ಆನಂದಿಸಿ ಸುಖಪಡಲು ಸಮಯವನ್ನು ಕಲ್ಪಿಸಿಕೊಟ್ಟ ಆ ದೇವನಿಗೆ ನಾವು ಕೃತಜ್ಞರಾಗಿ ಚಿರಋಣಿಗಳಾಗಬೇಕು'' ಎಂದು ಸಭಿಕರಿಗೆ ಹೇಳಿ ದಾಸರ ಕಡೆ ತಿರುಗಿ, "ಸ್ವಾಮಿ! ನನಗೆ ತಮ್ಮ ಪರಿಚಯವಿಲ್ಲ. ಇಂದು ನನಗಾದ ಅಮಿತಾನಂದವನ್ನು ಕೇವಲ ಮಾತುಗಳಿಂದ ವ್ಯಕ್ತಪಡಿಸಲಾರೆ.

ತಮ್ಮಂತಹ ಮಹನೀಯರಿಂದ ನಮ್ಮಂತಹ ಅಲ್ಪರು ತಿಳಿದುಕೊಳ್ಳಬೇಕಾದ ವಿಷಯಗಳು ಬಹಳ ಇವೆ. ತಾವು ನನ್ನ ಆತಿಥ್ಯವನ್ನು ಸ್ವೀಕರಿಸಿ ಇಂದು ನಮ್ಮ ಮನೆಗೆ ಬರಲೇಬೇಕು. ಅಲ್ಲದೆ ತಮಗೆ ತೊಂದರೆಯಾಗದಿದ್ದಲ್ಲಿ ನನ್ನಲ್ಲಿ ಕೆಲವು ದಿವಸಗಳಾದರೂ ಇರಬೇಕೆಂದು ಆಶಿಸುತ್ತೇನೆ'' ಎಂದು ಉತ್ತರವನ್ನು ನಿರೀಕ್ಷಿಸಿದರು.

ಆತನು, "ಸ್ವಾಮಿ! ನನ್ನನ್ನು ತಾವೇಕೆ ವೃಥಾ ಹೊಗಳುತ್ತೀರಿ. ನಾನು ಇದುವರೆಗೂ ಎಲ್ಲೂ ಯಾವ ಕಥೆಯನ್ನೂ ಮಾಡಿಲ್ಲ; ಮುಂದೆ ಮಾಡುವ ಆಸೆಯೂ ಇಲ್ಲ. ನನಗೇನೋ ಬಹಳ ದಿನದಿಂದ ಒಂದು ಕಥೆಯನ್ನು ಮಾಡಬೇಕೆಂದು ಆಸೆಯಿತ್ತು. ಆ ನನ್ನ ಆಸೆಯನ್ನು ಪೂರ್ಣಗೊಳಿಸಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳು. ನನ್ನಲ್ಲಿದ್ದ ತಪ್ಪುಗಳನ್ನೆಲ್ಲಾ ಮುಚ್ಚಿಟ್ಟು ಹೊಗಳುತ್ತಿರುವುದು ಕಲೋಪಾಸಕರಾದ ತಮ್ಮಲ್ಲಿರುವ ವಿಶಾಲ ಭಾವನೆಯನ್ನು ತೋರಿಸುತ್ತದೆ. ತಮ್ಮ ಈ ಭಾವನೆಗೆ ನಾನು ಚಿರ ಋಣಿಯು—ಸ್ವಾಮಿ! ನಾನು ಒಂದು ಸ್ಥಳದಲ್ಲಿ ನಿಲ್ಲುವವನಲ್ಲ—ಒಂದು ಕ್ಲಿಷ್ಟವಾದ ಕೆಲಸವನ್ನು ಮಾಡುವವನಲ್ಲ—ನನಗೆ ಬೇಕಾದುದೊಂದೂ ಈ ಪ್ರಪಂಚದಲ್ಲಿ ಇಲ್ಲ. ಈ ಕೆಲಸ ಮಾಡಿದರೆ ನನಗೆ ಸಂತೋಷವಾಗುವುದೆಂದು ಭಾವನೆಯು ಮನಸ್ಸಿನಲ್ಲಿ ಮೂಡಿದರೆ ಆ ಕೆಲಸವನ್ನು ನಾನು ಮಾಡಿಯೇ ಮಾಡುವೆನು! ನನ್ನವರೆಂಬುವವರೂ ನನಗೆ ಇಲ್ಲ! ಹಾಗೆ ಇವರು ನನ್ನವರೆಂದು ಒಂದು ವೇಳೆ ನನಗೆ ತೋರಿದರೂ ಅವರ ಬಳಿ ಸುಳಿಯಲು ಸಹ ದೇವರು ನನ್ನನ್ನು ಪ್ರೇರಿಸನು! ಆದುದರಿಂದ ನಾನು ಯಾರ ಬಳಿಯೂ ಇರಲಾರೆ—ಅಲ್ಲಿಗೆ ಬರಲಾರೆ'' ಎಂದನು. ಶಾಸ್ತ್ರಿಗಳು ಬಿಡಲೊಲ್ಲರು—ಈತನು ಬರಲೊಲ್ಲ! ಅಂತೂ ಬಹಳ ಚರ್ಚೆಯಾದಮೇಲೆ ಈತನು ಶಾಸ್ತ್ರಿಗಳೊಡನೆ ಹೋಗುವುದೆಂದೇ ನಿಶ್ಚಿತವಾಯಿತು. ಹೊರಡುವುದಕ್ಕೆ ಮುಂಚೆ ಮಂಡಳಿಯವರು ಮಾಡಿದ ಸನ್ಮಾನ ಒಂದನ್ನೂ ಆತನು ಸ್ವೀಕರಿಸಲಿಲ್ಲ. ಶಾಸ್ತ್ರಿಗಳಿಗೆ ಆತನ ಪೂರ್ವೋತ್ತರಗಳನ್ನೆಲ್ಲ ಪೂರ್ಣವಾಗಿ ತಿಳಿದುಕೊಳ್ಳಬೇಕೆಂದು ಆಸೆ. ಆದರೆ ಆತನು ಆಗ ಮಾಡಿದ ಮೌನಧಾರಣವನ್ನು ಮುರಿಯಲೇ ಇಲ್ಲ!

ನಮಸ್ಕೃತು

ಊಟದಲ್ಲಿಯೂ ಮೌನ. ಊಟವಾದಮೇಲೆ ಶಾಸ್ತ್ರಿಗಳು, "ಸ್ವಾಮಿ! ಇಲ್ಲಿಯೇ ನನ್ನೊಡನೆಯೇ ಇದ್ದುಬಿಡಿ ಮತ್ತೆಲ್ಲಿಯೂ ಹೋಗಬೇಡಿ" ಎಂದದಕ್ಕೂ ಉತ್ತರವಿಲ್ಲ. ಶಾಸ್ತ್ರಿಗಳು ಎಲ್ಲವನ್ನೂ ಮಾರನೆಯ ದಿವಸ ವಿಚಾರಿಸೋಣವೆಂದು ಆತನಿಗೆ ಮಲಗಲು ಸಜ್ಜುಗೊಳಿಸಿದರು. ಮೌನವನ್ನು ಮುರಿಯದಂತೇ ಮಲಗಿ ನಿದ್ರಿಸಿದನು ಆತ.

ಶಾಸ್ತ್ರಿಗಳು ಬೆಳಗ್ಗೆ ಎದ್ದು ನೋಡುವ ಹೊತ್ತಿಗೆ ಆತನು ಹಾಸಿಗೆಯಲ್ಲಿರಲಿಲ್ಲ. ಅವರು, "ಪಕ್ಷಿ ಹಾರಿಹೋಯಿತು. ಸ್ವೇಚ್ಛೆಯಾಗಿ ಹಾರಾಡುವ ಪಕ್ಷಿಯು ನಿರ್ಬಂಧಕ್ಕೆ ಸಿಕ್ಕಲು ಇಷ್ಟಪಟ್ಟೀತೆ" ಎಂದು ಉಸಿರೆಳೆದು, "ಆತನನ್ನು—ಆ ಮಹಾತ್ಮನನ್ನು—ನನ್ನ ಜೊತೆಯಲ್ಲಿರಿಸಿಕೊಳ್ಳುವ ಭಾಗ್ಯವು ನನಗಿಲ್ಲದೆಹೋಯಿತೆ!" ಎಂದು ಆತನ ಮುಖವನ್ನು ಮನಸ್ಸಿನಲ್ಲಿಯೇ ಚಿತ್ರಿಸುತ್ತ ಕೊಂಚಕಾಲ ನಿಂತಿದ್ದರು.

ಆಮೇಲೆ, "ಅದೆಷ್ಟು ಚೆನ್ನಾಗಿ ಆತನು ಕಥೆಮಾಡಿದನು. ಆ ಕಥೆಯಲ್ಲಿ ಆತನು ಹೇಳಿದಂತೆ ಸೀತೆಯು ನಿಜವಾಗಿಯೂ ರಾವಣನ ಮಗಳೇ? ರಾವಣನೇ ಅವಳನ್ನು ನಾಶಪಡಿಸಲು ನಿರ್ಧರಿಸಿ ಒಂದು ಪೆಟ್ಟಿಗೆಯಲ್ಲಿ ಅವಳನ್ನು ಮುಚ್ಚಿಸಿ ಸಮುದ್ರದಮೇಲೆ ತೇಲಿಬಿಟ್ಟನೆ? ಇದು ನಿಜವಹುದೋ ಅಲ್ಲವೋ ಬಲ್ಲವರು ಯಾರು? ಒಂದು ವೇಳೆ ಸೀತೆಯು ರಾವಣನ ಮಗಳಾಗದೆ ಈತನು ಮನಬಂದಂತೆ ಊಹಿಸಿ ಸುಳ್ಳನ್ನೇ ಹೇಳಿದ್ದರೂ, ಹೇಳುತ್ತಿದ್ದಾಗ ಮಾತ್ರ ಖಂಡಿತವಾಗಿಯೂ ಸೀತೆಯು ರಾವಣನ ಮಗಳೇ ಹೌದೆಂಬ ಭಾವನೆಯು ನೆಲಸಿತ್ತು. ಆತನು ನನ್ನ ಬಳಿಯೇ ಇದ್ದುಬಿಟ್ಟಿದ್ದರೆ........"ಎಂದು ಯೋಚಿಸಿ ಏಕೋ ಏನೋ ಕಣ್ಣೀರು ಹಾಕಿಕೊಂಡರು.

* * *

ಗಡಿಯಾರದ ಶಾಸ್ತ್ರಿಗಳ ಕಥೆ ಅಂದು ರಾಮಪುರದಲ್ಲಿ. ಅಂದೇ ಕಥೆಯಾದ್ದರಿಂದ ಶಾಸ್ತ್ರಿಗಳು ಬೆಳಗ್ಗೆಯೇ ಆ ಊರಿಗೆ ಬಂದರು. ಒಮ್ಮೆ ಊರಿನಲ್ಲಿ ಹಾಗೆಯೇ ಅಡ್ಡಾಡಿ ಬರೋಣವೆಂದು ಹೊರಟು ಬರುತ್ತಿರುವಾಗ ದಾರಿಯಲ್ಲಿ ಒಂದು ಪಕ್ಕದಲ್ಲಿ ಒಂದು ಹುಡುಗರ—ದೊಡ್ಡವರೂ ಇದ್ದರು—

ಗುಂಪು ಇತ್ತು. ಎಲ್ಲರೂ ಏಕಮನಸ್ಸಿನಿಂದ ಆ ಗೋಡೆಯ ಕಡೆ ನೋಡು ತ್ತಿದ್ದರು. ಕುತೂಹಲಾವಿರ್ಭವಿತರಾದ ಶಾಸ್ತ್ರಿಗಳೂ ಅತ್ತಕಡೆ ನೋಡಿದರು. ಅಲ್ಲಿದ್ದ ಸ್ವಚ್ಛವಾಗಿದ್ದ ಬಿಳಿಯ ಗೋಡೆಯಮೇಲೆ ಇದ್ದಲಿನಿಂದ ಬರೆಯಲ್ಪ ಟ್ಟಿದ್ದ ಚಿತ್ರವೊಂದಿತ್ತು. ಎಲ್ಲರೂ ಬೆರಗಾಗಿ ಅದನ್ನೇ ನೋಡುತ್ತಿದ್ದರು. ಶಾಸ್ತ್ರಿಗಳೂ ಅದನ್ನು ನೋಡಿ ಸ್ತಬ್ಧರಾಗಿ ನಿಂತುಬಿಟ್ಟರು. ಯಾವ ಘನ ವಾದ ಕಲೋಪಾಸಕನ ಕೈ ಓಡಾಟವೋ! ಅದು ನೋಡಿದವನ ಮನಸ್ಸನ್ನು ಸೆಳೆಯುತ್ತಿತ್ತು! ಅವನು ಕಣ್ಣೀರಿಡುತ್ತ ನಿಂತಿದ್ದಾನೆ. ಉದ್ದವಾಗಿ ಬೆಳೆದ ಗಡ್ಡ. ಆಕೆಯು ಅಲ್ಲಿ ಸತ್ತುಬಿದ್ದಿದ್ದಾಳೆ, ಸತ್ತಿದ್ದರೂ ಮುಖದಲ್ಲಿ ಒಂದು ನಸುನಗೆ. ಸಾಯುವಾಗ ನಗು ನಗುತ್ತ ಸತ್ತಿದ್ದಳೇನೋ! ಆಕೆಯ ಪಕ್ಕದ ಲ್ಲಿನ ಮಗುವೂ ಸತ್ತುಬಿದ್ದಿದೆ!! ಅವನ ಮುಖದಲ್ಲಿ ಯಾವುದೋ ನಿರಾಶೆಯು ಅತಿಯಾಗಿ ಮೂಡಿದೆ. ಎತ್ತರದಲ್ಲಿ ಎರಡು ಭಯಂಕರ ವ್ಯಕ್ತಿಗಳು ನಿಂತಿವೆ. ಅವುಗಳ ಮುಖದಲ್ಲಿ ಅಟ್ಟಹಾಸದ ನಗು. ತಮ್ಮ ಕಾರ್ಯವನ್ನು ಸಾಧಿಸಿ ದ್ದೇವೆಂದೇನೋ? ಆ ಚಿತ್ರದ ಕೆಳಗೆ, "ಅಂದಿನಿಂದ—" ಎಂದು ಬರೆದಿದೆ. ಶಾಸ್ತ್ರಿಗಳು ನೋಡಿಯೇ ನೋಡಿದರು. "ಅಯ್ಯೋ ಪಾಪ! ಅವರಿಬ್ಬರೂ ಒಂದೇ ದಿವಸ ಮಡಿದರೇನೋ? ನಿರಾಶನಾದ ಈತನು ಯಾವುದನ್ನು— ತನಗೆ ಯಾವುದು ಬೇಕಾಗಿತ್ತೋ, ತನ್ನ ಜೀವಕ್ಕಿಂತ ಹೆಚ್ಚಾಗಿ ಯಾವುದನ್ನು ಪ್ರೀತಿಸುತ್ತಿದ್ದನೋ ಆ ವಸ್ತುವನ್ನು—ತನ್ನಿಂದ ದೂರಮಾಡಿದ ಕ್ರೂರಿ ಗಳನ್ನು ನೆನೆದು ತನ್ನ ದುಸ್ಥಿತಿಗಾಗಿ, ತನ್ನ ಆ ಪ್ರೀತಿಯ ವಸ್ತುಗಳಿಗಾಗಿ ಕಣ್ಣೀರಿಡುತ್ತಿದ್ದಾನೆ. ಅಂದಿನಿಂದ ಆತನಿಗೆ ಯಾವುದೂ ಬೇಕಾಗಿಲ್ಲವೇನೋ! ಅಂದಿನಿಂದ ಆತನು ಹುಚ್ಚನಾಗಿದಾನೆಯೋ ಏನೋ" ಎಂದು ಶಾಸ್ತ್ರಿಗಳು ಅವನ ಸ್ಥಿತಿಗಾಗಿ ಮರುಗಿ ಯೋಚಿಸಿದರು.

ಶಾಸ್ತ್ರಿಗಳು "ಇದನ್ನು ಬರೆದವರು ಯಾರು?" ಎಂದು ಅಲ್ಲಿದ್ದ ಒಬ್ಬ ಹುಡುಗನನ್ನು ಕೇಳಿದರು.

"ಒಬ್ಬ ಹುಚ್ಚ ಬರೆದಿದ್ದಾನೆ. ಅವನು ಯಾವಾಗಲೂ ಹೀಗೆಯೇ ಕಂಡಕಂಡ ಕಡೆಯಲ್ಲೆಲ್ಲಾ ಬರೆಯುತ್ತಾನೆ. ಅವನು ಬರೆಯುವಾಗ ಯಾರಾ ದರೂ ಬಂದರೆ ಓಡಿಹೋಗುತ್ತಾನೆ" ಎಂದನು.

"ಅವನ ಸ್ಥಳ ಈ ಊರೆಯೋ?"

"ಅಲ್ಲ! ಇಲ್ಲಿಗೆ ಅವನು ಬಂದು ಐದಾರು ದಿವಸಗಳಾದವು"

"ಇನ್ನೂ ಇದೇ ಊರಿನಲ್ಲಿಯೇ ಇದ್ದಾನೆಯೇ?"

"ಹೌದು! ಈಗ ತಾನೆ ಇಲ್ಲಿಂದ ಹೋದ. ಇದು ಬರೆದು ಸ್ವಲ್ಪ ಹೊತ್ತಾಯಿತು. ಅವನು ಬಹಳ ಚೆನ್ನಾಗಿ ಬರೆಯುತ್ತಾನೆ ಅಲ್ಲವೇನ್ರಿ?"

"ಹೌದಪ್ಪ!" ಎಂದು ಶಾಸ್ತ್ರಿಗಳು ಆ ದೃಶ್ಯವನ್ನು ಮನತಣಿಯುವ ತನಕ ನೋಡಿದರು. "ಎಂತಹ ಕೈ ಓಡಾಟ. ಬರೀ ಇದ್ದಲಿನಲ್ಲಿ ಎಷ್ಟು ಚೆನ್ನಾಗಿ ಬರೆದಿದ್ದಾನೆ! ಎಷ್ಟು ಭಾವಗರ್ಭಿತವಾಗಿ ಬರೆದಿದ್ದಾನೆ. ಆತನೆಂತಹ ಪ್ರತಿಭಾಶಾಲಿಯಾಗಿರಬೇಕು. ಹುಚ್ಚನೆಂದು ಹುಡುಗನು ಹೇಳುತ್ತಾನೆ. ಆತನು ನಿಜವಾಗಿಯೂ ಹುಚ್ಚನಲ್ಲ; ಉನ್ಮತ್ತನು! ಅಂದಿನ ಆ ದುಃಖವು ಹೃದಯದಿಂದ ಅಳಿಸಿಲ್ಲವಾದ್ದರಿಂದ ಆ ರೀತಿ ನಿರಾಶನಾಗಿ ಹೃದಯದಲ್ಲಿರುವುದನ್ನೇ ಮೂಡಿಸಿರಬಹುದು. ಅದೇ ಅವನ ಸಂತೋಷವೇನೋ? ಆತನು ತನ್ನ ನೈಜವಾದ ಜೀವನ ಚರಿತ್ರೆಯ ಒಂದು ಭಾಗವನ್ನೇ ಇಲ್ಲಿ ಚಿತ್ರಿಸಿರಬಹುದು. ಈ ದೃಶ್ಯವೇ ಕರಳು ಕೊರೆಯುವುದು—ಇನ್ನು ಅಂದಿನ ಅವನ ಸ್ಥಿತಿಯು? ಹೀಗಾಗಬಾರದಾಗಿತ್ತು! ಪಾಪ! ಆ ಸಮಯದಲ್ಲಿ ಆ ಮೋಹವನ್ನು ಸೆಳೆಯಲು ಬೇರೆವಸ್ತುವು ಆ ಸ್ಥಾನವನ್ನು ಸೇರಲಿಲ್ಲವೇನೋ" ಎಂದುಕೊಳ್ಳುತ್ತಾ ಅಲ್ಲಿಂದ ಜಾರಿದರು.

ಹಾಗೆಯೇ ಬರುತ್ತಿರುವಲ್ಲಿ ಅಲ್ಲೊಂದು ಚಿತ್ರ—ಒಬ್ಬ ಹೆಂಗಸು ನಗುತ್ತಿದ್ದುದು. ಆಹಾ! ಎಂತಹ ಸುಂದರವಾದ ಮುಖ. ಆಕೆಯ ಮುಖದ ಮೇಲೆ ತಿಳಿಯಾದ ಕಿರುನಗೆ. ಮನವೆಳೆಯುವ ಕಣ್ಣುಗಳು. ತಿದ್ದಿದ ಹುಬ್ಬುಗಳು. ಅಗಲವಾದ ಹಣೆ. ಹಣೆಯಮೇಲಿನ ಕುಂಕುಮವು ಸತೀತ್ವವನ್ನು ಎತ್ತಿ ತೋರುತ್ತಿತ್ತು. ಅದರ ಕೆಳಗೆ "ಅವಳು" ಎಂದು ಬರೆದಿತ್ತು. "ಆತನ ಹೆಂಡತಿಯೇ? ಇರಬಹುದು!" ಎಂದುಕೊಂಡು ಶಾಸ್ತ್ರಿಗಳು ಅದನ್ನು ತೃಪ್ತರಾಗುವವರೆಗೂ ನೋಡಿ ಮುಂದೆ ನಡೆದರು.

ಆಗ ಅವರ ತಲೆಯಲ್ಲಿ—ಆ ಚಿತ್ರಗಳು—ಅವುಗಳ ಕಲಾನೈಪುಣ್ಯ—ಮತ್ತು ಆ ಚಿತ್ರಕಾರನು ಯಾರಿರಬಹುದು—ಎಂಬಿವೇ ತುಂಬಿದ್ದವು. ಪಕ್ಕದ ಸಂದಿನಲ್ಲಿ ಒಬ್ಬಾತನು ಏನನ್ನೋ ಗೋಡೆಯಮೇಲೆ ಏಕಾಗ್ರಚಿತ್ತದಿಂದ ಬರೆಯುತ್ತಿದ್ದನು. ಶಾಸ್ತ್ರಿಗಳು ಮೆಲ್ಲಗೆ ಆತನಿಗೆ ಅರಿವಾಗದಂತೆ ಆತನ ಹಿಂದೆಯೇ ನಿಂತುಕೊಂಡು ಬರೆಯಲ್ಪಡುತ್ತಿದ್ದ ಚಿತ್ರದಲ್ಲಿ ಮನವಿಟ್ಟು ಆತನ ಕೈ ಓಡಾಟದ ಕಡೆಗೆ ದೃಷ್ಟಿ ಇಟ್ಟರು. ಸುಮಾರು ಹತ್ತು ನಿಮಿಷ ಹಾಗೆಯೇ ನಿಂತಿದ್ದರು. ಆತನು ಅದನ್ನು ಬರೆದು ಮುಗಿಸಿ ಅದರ ಕೆಳಗೆ, "ಎಲ್ಲಿ ಈ ಮಗು" ಎಂದು ಬರೆದು ಅದನ್ನೊಮ್ಮೆ ನೋಡಿ ಉಸಿರೆಳೆದನು. ಶಾಸ್ತ್ರಿಗಳು ತತ್‍ಕ್ಷಣವೇ ಆತನ ಕೈ ಹಿಡಿದು, "ಅಂದು ಹೇಳದೆ ಕೇಳದೆ ಎಲ್ಲಿಗೆ ಹೊರಟು ಹೋದಿರಿ ಸ್ವಾಮಿ? ನಾನು ಮಾಡಿದ ಅಪರಾಧವಾದರೂ ಏನು! ಅದು ಹೋಗಲಿ, ಈಗಲಾದರೂ ನನ್ನ ಜೊತೆಯಲ್ಲಿ ಬಂದುಬಿಡಿ" ಎಂದರು. ಆತನು ಆಶ್ಚರ್ಯದಿಂದ ಕಕ್ಕಾವಿಕ್ಕಾದರೂ ಅವರ ಕೈಯನ್ನು ಕೊಡವಿ ಅಲ್ಲಿಂದ ಓಡಿಯೇಬಿಟ್ಟ! ಆತನ ವಿಲಕ್ಷಣ ರೀತಿಯು ಶಾಸ್ತ್ರಿಗಳಿಗೆ ಪೂರ್ಣವಾಗಿ ಅರ್ಥವಾಗಲಿಲ್ಲ.

"ಸ್ವಾಮಿ! ನಿಲ್ಲಿ! ನಿಲ್ಲಿ!" ಎಂದು ಕೂಗುತ್ತಾ ಆತನ ಹಿಂದೆಯೇ ಶಾಸ್ತ್ರಿಗಳು ಹೋದರು. ಎಲ್ಲಿಯವರೆಗೆ? ಆತನು ಪಕ್ಕದ ಸಂದಿನಲ್ಲಿ ತಿರುಗಿ ಇವರಿಗೆ ಕಾಣದಾಗಿ ಆತನು ಹೋದ ದಾರಿಯು ಇವರಿಗೆ ತಿಳಿಯದಾಗಿ ನಿರಾಶೆಯು ಮುಖದಮೇಲೆ ಮೂಡಿ ಉಸಿರೆಳೆಯುವವರೆಗೆ. "ಹಕ್ಕಿಯು ಮತ್ತೆಯೂ ಹಾರಿಹೋಯಿತು. ಹಿಡಿತಕ್ಕೆ ಸಿಕ್ಕಲಿಲ್ಲ. ಎಂತಹ ಮಹಾನುಭಾವ! ಚಿತ್ರಕಲಾದೇವಿಯೂ ಪ್ರಸನ್ನಳಾಗಿರುವಳು!! ಎಂತೆಂತಹ ಘನವಾದ ವಿದ್ಯೆಗಳು ಈತನಲ್ಲಿವೆ? ಇನ್ನೂ ಯಾವ ಯಾವ ವಿದ್ಯೆಗಳ ಆವಾಸಸ್ಥಾನವೋ ಈ ದೇಹ. ಆದರೂ ದೇವರಿಗೆ ಈತನನ್ನು ಪ್ರಪಂಚಕ್ಕೆ ಬಿಟ್ಟುಕೊಡಲು ಇಷ್ಟವಿಲ್ಲ. ಈತನ ಈ ಸರ್ವ ವಿದ್ಯೆಗಳು ಕಾಡುಮಲ್ಲಿಗೆಯ ಸುವಾಸನೆಯಂತೆ ನಾಶವಾಗುತ್ತಿವೆ. ಏನುಮಾಡುವುದು ಪರಮಾತ್ಮನ ಇಚ್ಛೆಯೇ ಇದಿರಬಹುದು" ಎನ್ನುತ್ತಾ ಆ, "ಎಲ್ಲಿ ಈ ಮಗು" ಎನ್ನುವ ಚಿತ್ರದ

ಬಳಿಗೆ ಬಂದು ಕಣ್ತುಂಬ ನೋಡಿ, ಆತನನ್ನು ನೆನೆನೆನೆದು, ಬಾಷ್ಪವನ್ನು ಸುರಿಸಿ, ತಾವಿಳಿದಿದ್ದ ಸ್ಥಳಕ್ಕೆ ಹಿಂದಿರುಗಿದರು. “ಪಾಪ! ಎಂದು, ಆತನು ಅತಿಯಾಗಿ ಪ್ರೀತಿಸುತ್ತಿದ್ದ ಪತ್ನೀಪುತ್ರರು ನಾಶವಾದರೋ ಅಂದಿನಿಂದಲೂ —ಹೌದು ಅಂದಿನಿಂದಲೇ—ಆತನು ಹೀಗಾಗಿರಬೇಕು. ಆತನನ್ನು ಇನ್ನೊಮ್ಮೆಯಾದರೂ ನೋಡಬೇಕೆಂಬ ಆಸೆಯಾದರೂ ಪೂರ್ಣವಾಯಿತಲ್ಲಾ!” ಎಂದುಕೊಳ್ಳುತ್ತಾ ಅವರು ದಾರಿ ಕಳೆದರು.

ಅಂದಿನ ಅವರ ಹರಿಕಥೆಯಲ್ಲಿ ಈ ವಿಷಯವನ್ನೇ—ಈತನ ವಿಷಯವಾಗಿ ತಾವು ಊಹಿಸಿದುದನ್ನೆಲ್ಲಾ—ಒಂದು ಉಪಕಥೆಯನ್ನಾಗಿ ಮಾಡಿ ಸಮಯೋಚಿತವಾಗಿ ಹೇಳಿದರು. ಅಂದು ಜನರಿಗೆ ಈ ಉಪಕಥೆಯು ಮನದಲ್ಲಿ ನೆಲಸಿತೇ ಹೊರತು ಹರಿಕಥೆಯಲ್ಲ! ಈ ಉಪಕಥೆಯು ಎಲ್ಲರಲ್ಲೂ ನಾಟಿ ಸುತ್ತುಮುತ್ತಲೆಲ್ಲಾ ಹರಡಿತು. ಅಂದಿನಿಂದ ಶಾಸ್ತ್ರಿಗಳು ಪ್ರತಿಯೊಂದು ಕಥೆಯಲ್ಲಿಯೂ ಈ ಉಪಕಥೆಯನ್ನು ಸೇರಿಸಿದರೂ ಜನರು ಬೇಸರಪಡುತ್ತಿರಲಿಲ್ಲ; ಹೇಳದಿದ್ದರೆ ಹೇಳಿರೆಂದು ಆಗ್ರಹಪಡಿಸಿ ಕೇಳುತ್ತಿದ್ದರು!

ಶಾಸ್ತ್ರಿಗಳಿಗೂ ಇದನ್ನು ಹೇಳಲು ಅತಿಯಾದ ಸಂತೋಷ. ಅನುಭವವು ಮನಮುಟ್ಟುವಷ್ಟು ಊಹೆಯು ಮುಟ್ಟಲಾರದಲ್ಲವೇ? ಶಾಸ್ತ್ರಿಗಳು ಬೇರೊಬ್ಬ ಚಿತ್ರಕಾರನಿಂದ ಆ, “ಅಂದಿನಿಂದ”—ಎಂಬ ಚಿತ್ರವನ್ನು ದೊಡ್ಡದಾಗಿ ಬರೆಯಿಸಿ ಮನೆಯ ಬಾಗಿಲೆದುರಿಗೆ ತಗಲು ಹಾಕಿದರು. ದಿನ ಬೆಳಗಾದರೊಂದು ಸಲ ಇದನ್ನು ನೋಡಿ ಕಣ್ಣೀರು ಸುರಿಯುವುದು ಶಾಸ್ತ್ರಿಗಳ ದಿನಚರಿಯಲ್ಲಿ ಅಂದಿನಿಂದ ಒಂದಾಯಿತು!

## ಕಾರಣಕರ್ತರಾರು ?

"ಹೋಗಿ ಬರುತ್ತೇನೆ ನೂರ್--ನಿಮ್ಮ ಕ್ಷೇಮಲಾಭಗಳನ್ನು ನೋಡಿ ಕೊಳ್ಳುವಂತೆ ನನ್ನ ಸ್ನೇಹಿತನಿಗೆ ಹೇಳಿದ್ದೇನೆ. ಅವನಿಗೆ ಬಿಡುವಾದಾಗ ಬಂದು ಹೋಗುತ್ತಾನೆ''.

"_______''

''ಏಕೆ ನೂರ್, ಅಳುವೆ. ಸಂತೋಷದಿಂದ ನನಗೆ ಹೋಗಲು ಅನು ಮತಿಯನ್ನು ಕೊಡು. ಜಾಗ್ರತೆ ವಿಜಯಿಯಾಗಿ ಬಂದು ಬಿಡುತ್ತೇನೆ. ನಿನ್ನ ನಿಶ್ಚಲ ಪ್ರೇಮದ ನೆಳಿತವಿರುವವರೆಗೂ ಯಾವ ಭೀತಿಯೂ ಇಲ್ಲ!''

"_______''

''ಮಾತನಾಡಬಾರದೇಕೆ ನೂರ್. ನನಗೆ ಗೊತ್ತು ನಿನ್ನ ಮೃದು ಸ್ವಭಾವ. ನನ್ನ ಜೀವಕ್ಕೆ ಕಾತರಳಾಗಿರುವೆಯಲ್ಲವೆ? ನನ್ನ ಆತ್ಮವು ಹೇಳು ತ್ತಿದೆ ನೂರ್. ನಾನು ಮರಳಿ ಬಂದೇ ಬರುತ್ತೇನೆ. ಒಂದು ವೇಳೆ........ ಛೆ! ಆ ಮಾತು ಬೇಡವೇ ಬೇಡ! ನೂರ್! ನೂರ್! ಎಲ್ಲಿ, ಒಮ್ಮೆ ನಗು ಮುಖದಿಂದ ನಿನ್ನ ಮುಖವೆತ್ತಿ ನನ್ನನ್ನು ನೋಡು.''

ನೂರಳು ಮೌನದಲ್ಲಿಯೇ ಮುಖವೆತ್ತಿದಳು.

''ಎಲ್ಲಿ! ನೂರ್! ಒಂದು ಸಲ—ಒಂದೇ ಒಂದು ಸಲ—ನಗು— ನೂರ್ ನನ್ನ ಶ್ರೇಯಸ್ಸಿಗಾಗಿ ನಗು—ನಿನ್ನ ಅಗಲಿಕೆಯ ದುಃಖವನ್ನು ಅದ ರಲ್ಲಿ ತೇಲಿಸಿಬಿಡು".

ಸುಲೇಮಾನನು ಆ ಬಿಸಿಲು ಮಳೆಯನ್ನು ನೋಡಿ ಹಿರಿ ಹಿಗ್ಗಿದನು. ಬಹಳ ಕಾಲ ಅಗಲಬೇಕಾದ ಸನ್ನಿವೇಶ! ಮನತಣಿಯುವತನಕ ಅವಳ ಸುಂದರ ಮುಖವನ್ನು ನೋಡಿದ. ಭಾವಪರವಶನಾಗಿ ಹಾಗೆಯೇ ಕೊಂಚ ಹೊತ್ತು ನಿಂತಿದ್ದ. ಎಚ್ಚರಿಕೆಯ ಘಂಟೆಯು ಎಚ್ಚರಿಸಿತು. ಅಲ್ಲಿಂದ

ತೊಟ್ಟಿಲ ಬಳಿ ಹೋಗಿ ನಿದ್ರಿಸುತ್ತಿದ್ದ ಎಳೆಗೂಸನ್ನು ನೋಡಿ "ಬೇಟಾ ರಸೂಲ್! ಹೋಗಿ ಬರುತ್ತೇನೆ" ಎಂದು ಪ್ರೇಮದ ಮೊಹರನ್ನಿತ್ತನು. ಮಲಗಿ ನಿದ್ರಿಸುತ್ತಿದ್ದ ಮಗುವಿನ ಮುಖದಮೇಲೆ ಮುಗುಳುನಗೆಯ ಅಲೆ ಯೊಂದು ಮೆಲ್ಲನೆ ಸರಿಯಿತು. ಅದನ್ನು ನೋಡಿದ ಸುಲೇಮಾನನು, "ಮಗುವು ಹೊರಡಲು ಅನುಮತಿ ಕೊಟ್ಟಿತು" ಎಂದುಕೊಂಡು ಪುನಃ ನೂರಳ ಬಳಿಗೆ ಬಂದನು. ಅವಳ ಕಣ್ಣೀರು ನಿಂತಿರಲಿಲ್ಲ. ಆದರೂ ಆ ಕಣ್ಣೀರಿನ ಹನಿಗಳು ಬಂಗಾರದುಂಗುರದಮೇಲೆ ಮಿಣಿ ಮಿಣಿ ಹೊಳೆಯುವ ವಜ್ರದ ಹರಳಿನಂತೆ ಬೆಳಗುತ್ತಿದ್ದವು. ಹೊರಡುವ ಕಾಲವು ಸುಲೇಮಾನ ನಿಗೆ ಸಮೀಪಗತವಾಗಿತ್ತು—ಕೆಲವೇ ನಿಮಿಷಗಳು ಇದ್ದವು. ತನ್ನ ಪ್ರೇಮ ಮೂರ್ತಿಯನ್ನು—ತನ್ನ ಹೃದಯದೇಗುಲದ ಸುಂದರ ಪ್ರತಿಮೆಯನ್ನು—ಮತ್ತೊಮ್ಮೆ ನೋಡಲು ಸಾಧ್ಯವೋ ಇಲ್ಲವೋ ಎನ್ನುವ ಅನುಮಾನದಿಂದ ಅಗಲಬೇಕಾಗಿತ್ತು. ಇದುವರೆಗೂ ಎದೆಗುಂದದಿದ್ದ ಅವನು—ಈಗ ಅವನ ಕಣ್ಣಲ್ಲಿಯೂ—ನೀರು........! ಮಂಜು ಮಂಜಾದ ಕಣ್ಣುಗಳು ಕೂಡಿದವು. ಎರಡು ಹೃದಯಗಳೂ ಐಕ್ಯವಾದವು. "ಇದೇ ನನಗೆ ಕಡೆಯ ಆಲಿಂಗ ನವೇ—ಇದೇ—ಇದೇ ಕಡೆಯ ಸವಿ ಮುತ್ತೇ?........ಛೆ! ನನಗೇಕೆ ಇಂತಹ ಯೋಚನೆ? ನಾನು ಹಿಂದಿರುಗಿ ಬಂದೇ ಬರುತ್ತೇನೆ ಎಂದು ಹೇಳು ತ್ತಿದೆ ಮನಸ್ಸು........ಆದರೂ ಈ ಅನುಮಾನ....ಸಂಶಂ...ಒಂದು ತರಹ ಭಯ!" ಸುಲೇಮಾನನ ಮನಸ್ಸು ಹರಿದಾಡುತ್ತಿತ್ತು.

ಒಟ್ಟುಗೂಡಿದ್ದ ತುಟಿಗಳು ತೃಪ್ತಿ ಸೂಚನೆಯನ್ನು ತೋರಿ ಬೇರೆಯಾ ದವು. ಬಿಗಿದಪ್ಪಿದ್ದ ಕೈಗಳೂ ಸಡಿಲವಾದವು........ಸುಲೇಮಾನನು ಬಾಗಿಲ ವರೆಗೂ ನಡೆದ........ಮನಸ್ಸು........ಅವನಿಂದ ಹಾರಿ ನೂರಳಲ್ಲಿ ಸೇರಿತು. ಅವನು ಅಲ್ಲೇ—ಇವಳು ಇಲ್ಲೇ! ಆದರೂ ದೃಷ್ಟಿಯೂ ಮನಸ್ಸೂ ಐಕ್ಯ ವಾಗಿದ್ದವು.

ಅಗೋ!........ಕಡೆಯ ಎಚ್ಚರಿಕೆಯ ಘಂಟೆ!

ಸುಲೇಮಾನನು ಜೀವ ಬಿಗಿ ಹಿಡಿದು (ಹೇಡಿಯಲ್ಲ, ಅಗಲಿಕೆಯ ತಾಪಕ್ಕೆ) ನಿರ್ಧರಿಸಿದ ಮನವುಳ್ಳವನಾಗಿ ನಡೆದ; ಅವಳನ್ನು ಬಿಟ್ಟು ನಡೆದ. ಬಿಟ್ಟು ನಡೆದದ್ದು ಮನಸ್ಸಲ್ಲ—ದೇಹ! ನೂರಳ ನೆಟ್ಟ ದೃಷ್ಟಿಯು ಚಲಿಸಲಿಲ್ಲ. ಮಗುವಾದ ರಸೂಲನು ಮಲಗಿ ನಿದ್ರಿಸುತ್ತಿದ್ದ. ಇಬ್ಬರೂ ಹಾಗೆ ಎಷ್ಟು ಹೊತ್ತು ಇದ್ದಿರಬಹುದು ?

*                    *                    *

"ಅಮ್ಮಾ !"

"ಏನು ರಸೂಲ್!"

"ಅಪ್ಪ ಯಾವಾಗ ಬರುತ್ತಾರೆ?"

"ಬಂದು ಬಿಡುತ್ತಾರೆ ರಸೂಲ್. ಇನ್ನು ಸ್ವಲ್ಪ ದಿವಸ"

"ನೀನು ಹೀಗೆಯೇ ಹೇಳುತ್ತಿದ್ದೀ!"

ನೂರಳಿಗೆ ತಡೆಯಲಾರದ ಸಂಕಟ. ದಿನ ದಿನವೂ ಇದೇ ಪ್ರಶ್ನೆ ಉತ್ತರಗಳು. ಹುಡುಗನು ಪ್ರತಿದಿನವೂ ಇದನ್ನೇ ಕೇಳುವುದು, ಅವಳು ಇದೇ ಉತ್ತರವನ್ನೇ ಕೊಡುವುದು. ನೂರಳಿಗೆ ಮನಸ್ಸಿನಲ್ಲಿ ಒಂದು ಬಗೆಯ ಸಂಶಯ, ತನ್ನ ಸುಲೇಮಾನನು ಬದುಕಿದ್ದಾನೋ ಇಲ್ಲವೋ ಎಂದು. ಯಾವುದೂ ನಿರ್ಧರವಿಲ್ಲ. ಮಗನಿಗೆ ಏನು ಹೇಳಿಯಾಳು? ಹುಡುಗನಿಗಾದರೋ ಅದೇ ಯೋಚನೆ. ಅದಕ್ಕಾಗಿಯೇ ತಾಯಿಯನ್ನು ಕೇಳೋಣ. ಅವಳ, "ಇನ್ನು ಸ್ವಲ್ಪ ದಿವಸ" ಎನ್ನುವ ಉತ್ತರದಿಂದ ಸಮ್ಮನಾಗಬೇಕಾಗೋಣ. ಹುಡುಗನಿಗೆ ಒಂದೂ ತೋಚದು. ಹುಡುಗನೇನು—ಮಗು—ಕೇವಲ ಮೂರು ವರುಷದ ಮಗು!

"ನನ್ನ ಪತಿಯು........?" ನೂರಳು ಪ್ರಶ್ನೆ ಹಾಕಿಕೊಳ್ಳುವಳು; ಏನೂ ತೋಚದು. ಇದ್ದಕ್ಕಿದ್ದಂತೆಯೇ ಏನೇನೋ ಹಾಳು ಯೋಚನೆಗಳು ತುಂಬುವುವು—ಅವಳು ಮನಸ್ಸಿನಲ್ಲಿಯೇ ಕೊರಗುವಳು. ಎಷ್ಟು ಹೊತ್ತು? "ಯುದ್ಧ ಕಾಲ. ಯಾವುದಕ್ಕೂ ಅವರಿಗೆ ಬಿಡುವಿಲ್ಲ. ಆದಂರಿದಲೇ ಏನೂ ತಿಳಿಯ

ಲಾಗಿಲ್ಲ" ಎಂದುಕೊಂಡು ತನ್ನಷ್ಟಕ್ಕೆ ತಾನೇ ಸಮಾಧಾನಪಟ್ಟುಕೊಳ್ಳುವ ವರೆಗೆ!

*　　　　*　　　　*

"ನಿಮ್ಮ ಮನೆಯವರು—ನಿಮ್ಮ ಸುಲೇಮಾನರು ಬೇರೆಯವರ ವಶ ವಾದರಂತೆ. ಅವರ ಆಸೆ ಬಿಡಿ."

"________"

"ಏಕೆ ಮುಖದ ಮೇಲೆ ಅನುಮಾನ ಸೂಚಿಸುತ್ತೀರಿ? ನಾನು ಸುಳ್ಳು ಹೇಳುತ್ತೇನೆಂದೆ? ಅದೇ ಯುದ್ಧಭೂಮಿಯಿಂದ ಒಬ್ಬ ಸಿಪಾಯಿಯು ಬಂದಿದ್ದಾನೆ. ಅವನೂ ಇವರೂ ಒಂದೇ ಗುಂಪಿನವರಂತೆ. ಅವನೇ ನನಗೆ ಹೇಳಿದ. 'ಸುಲೇಮಾನರು ಬೇರೆಯವರ ವಶವಾದರು ಮರಳಿ ಬಾರರು' ಎಂದು."

"________"

"ಈಗ ಬಂದ ಸಿಪಾಯಿಗೆ ಯುದ್ಧದಲ್ಲಿ ಬಲವಾಗಿ ಪೆಟ್ಟು ಬಿತ್ತಂತೆ ವಾಸಿಯಾದ ಮೇಲೂ ಇವನಲ್ಲಿ ಯುದ್ಧಮಾಡಲು ಚೈತನ್ಯವಿಲ್ಲವಾಯಿತಾದ್ದರಿಂದ ಮರಳಿ ಕಳುಹಿಸಿಬಿಟ್ಟಿದ್ದಾರೆ."

"________"

"ಇದೇಕೆ ನನ್ನನ್ನು ಹೀಗೆ ನೋಡುತ್ತೀರಿ! ಹೇಳಿದ್ದು ಅರ್ಥವಾಗಲಿಲ್ಲವೇ? ಕೇಳಿ. ನಿಮ್ಮವರಿಗೂ ಪೆಟ್ಟು ಬೀಳಬಾರದ ಜಾಗಕ್ಕೆ ಬಲವಾಗಿ ಬಿದ್ದು ಉರುಳಿದರಂತೆ. ಆಗ........"

"ಆ!............" ಕುಳಿತು ಕೇಳುತ್ತಿದ್ದ ನೂರಳು ಮೂರ್ಛೆಯಿಂದ ಉರುಳಿದಳು.

ಶೈತ್ಯೋಪಚಾರವಾದ ಮೇಲೆ ಮೂರ್ಛೆ ತಿಳಿದೆದ್ದ ನೂರಳಿಗೆ, ಆವನು ಆ ರಾತ್ರಿ ಮುಂದೇನನ್ನೂ ಹೇಳಲಿಲ್ಲ.

*　　　　*　　　　*

"ಅಯ್ಯೋ, ಮ: ವಿಗೆ ಇನ್ನ ಮುಂದೆ ನಾನೇನೆಂದು ಹೇಳಲಿ. ಅವರು ಹಾಗಾದರೆ ಇನ್ನು ಮರಳಿ ಬಾರದಿರುವ ದೇಶಕ್ಕೇ ಹೋದರೆ? ಹಾ! ಎಂತಹ

ವಿಧಿ ನನ್ನದು. ದೇವರು ಇಷ್ಟು ನಿಷ್ಕರುಣನೇ. ಬಂದೇ ಬರುವರೆಂಬ ಆಶೆ ಯನ್ನು ಮನಸ್ಸಿನಲ್ಲಿ ಹುಟ್ಟಿಸಿ ಈಗ ಅವರನ್ನು ಮರಳಿ ಬರಲಾರದ ದೇಶಕ್ಕೆ, ಕಳುಹಲು ಯಮದೂತರ ವಶಮಾಡಿರಬಹುದೇ ? ಅಥವಾ........ಅದೇ ಸುಳ್ಳೋ........ಇರಲಾರದು—ಸುಳ್ಳು ಇರಲಾರದು. ಆ ಮಾತುಗಳು ಯಾವಾತನ ಬಾಯಿಂದ ಬಂದವೋ ಆತನು ಅವರ ಪರಮ ಮಿತ್ರ. ಆದೆಲ್ಲಿ ಯಾದರೂ ಹೋಗಲಿ—ನಾನು ನನ್ನ ಮಗುವಿಗೆ ಈಗೇನು ಉತ್ತರ ಹೇಳಲಿ ............"

"ಅಮ್ಮಾ!" ಯೋಚನಾಮಗ್ನಳಾಗಿದ್ದ ನೂರಳ ಯೋಚನೆಯನ್ನು ಎಳೆಯ ಸ್ವರವು ಅಷ್ಟಕ್ಕೇ ತಡೆಗಟ್ಟಿ ನಿಲ್ಲಿಸಿತು.

''ಏನು ರಸೂಲ್!'' ನೂರಳು ರಸೂಲನಿಗೆ ಅರಿವಾಗದಂತೆ ಕಣ್ಣೀ ರೊರೆಸಿಕೊಂಡಳು.

ಪುನಃ ರಸೂಲನ ಬಾಯಿಯಿಂದ ಅದೇ—ಹುಂ! ಅದೇ ಪ್ರಶ್ನೆ.

''ಏಕೆ ಅಮ್ಮ ಸುಮ್ಮನಿದ್ದೀ?"

"________"

''ಮಾತನಾಡುವುದಿಲ್ಲವೇನಮ್ಮ? ಯಾವಾಗಲೂ ಮಾತನಾಡುತ್ತೀ. ಅಪ್ಪನ ವಿಷಯ ಕೇಳಿದರೆ, 'ಇನ್ನು ಸ್ವಲ್ಪ ದಿವಸ' ಅಂತಿ. ಇಲ್ಲದಿದ್ದರೆ ಮಾತ ನಾಡದೆ ಸುಮ್ಮನೆ ಇದ್ದುಬಿಡುತ್ತೀ. ನನಗೆ ನಿಜವಾದ ವಿಷಯ ಹೇಳಬಾರ ದೇನಮ್ಮ?'' ಎಂದು ಅಂಗಲಾಚಿದನು ಮೂರುವರೆ ವರುಷದ ರಸೂಲ್.

ನೂರಳು ತನ್ನ ಶೂನ್ಯ ಮುಖವನ್ನೆತ್ತಿ ರಸೂಲನನ್ನು ನೋಡಿದಳು ಅಷ್ಟೆ.

''ಹೇಳುವುದಿಲ್ಲವೇನಮ್ಮ ಹಾಗಾದರೆ?"

"________"

ತನ್ನ ಪ್ರಶ್ನೆಗೆ ಉತ್ತರಬಾರದೇ ಇದ್ದುದರ ಕಾರಣ ಅವನಿಗೆ ದುಃಖ ವಾಗಿದ್ದಿರಬಹುದು, ಕಣ್ಣೀರು ಚಿಮ್ಮಿತು. ಮಗನ ಕಣ್ಣೀರನ್ನು ನೋಡಿದ

ತಾಯಿಯು ಮಗನನ್ನು ಬಳಿಗೆಳೆದುಕೊಂಡು ಸೆರಗಿನಿಂದ ಕಣ್ಣೊರಸಿ, ಮುತ್ತಿಟ್ಟಳು.

*   *   *

"ಹಾಗಾದರೆ ನನ್ನ ಮಗುವಿಗೆ ತಂದೆ ಇಲ್ಲವಾಯಿತೇ. ಮಗುವಿಗೆ, ತಂದೆಯು ಇನ್ನುಮುಂದೆ ಬರಲಾರನೆಂದು—ಬರಲು ಸಾಧ್ಯವಿಲ್ಲದ ಪರ ಲೋಕಕ್ಕೆ ಹೋದನೆಂದು ಹೇಳಿಬಿಡಲೇ" ತನ್ನೊಳಗೆ ತಾನೇ ಪಿಸುನುಡಿ ಯಲ್ಲಿ ಹೇಳಿಕೊಳ್ಳುತ್ತಿದ್ದಳು.

"ಬೇಡ!" ನೂರಳು ಚಕಿತಳಾಗಿ ನೋಡಿದಳು! ಅವನು—ಮಿತ್ರ!

"ನಿಮ್ಮ ಪತಿಯು ಬರಲಾಗದ ಪರಲೋಕಕ್ಕೆ ಹೋಗಿಲ್ಲ!"

ಅನುಮಾನ ಆಶ್ಚರ್ಯಗಳಿಂದ, "ಇದೇನು, ಈಗ ಹೀಗೆ ಹೇಳುತ್ತಿರುವಿ" ಎಂದಳು ನೂರ್.

"ಅಂದು ಹೇಳುತ್ತಿದ್ದ ಹಾಗೆಯೇ ಮೂರ್ಛೆ ಬೀಳಲಿಲ್ಲವೆ ನೀವು—ಅಂದೇ ವಿಷಯಗಳೆಲ್ಲವನ್ನೂ ವಿಶದಪಡಿಸೋಣವೆಂದಿದ್ದೆ. ಮೂರ್ಛೆ ಹೋದಿರಿ. ಆ ಕ್ಷಣವೇ ಹೇಳಿದರೆ ಮೊದಲೇ ನೊಂದು ಬೆಂದಿದ್ದ ನಿಮಗೆ ಮನಸ್ಸಿನ ಉದ್ವೇಗವು ಹೆಚ್ಚಿ ಏನಾದರೂ ಹೆಚ್ಚು ಕಡಿಮೆಯಾದಾತೆಂದು ಹೇಳಲಿಲ್ಲ"

"ನೀವು ಹೇಳದಿದ್ದರೂ ನಾನೇ ಊಹಿಸಿದೆನಲ್ಲ".

"ನೀವು ತಪ್ಪು ಊಹಿಸಿದ್ದರಿಂದಲೇ ಮೂರ್ಛೆಗೊಂಡಿರಿ"

"ಹಾಗಾದರೆ ಅವರು ಬದುಕಿದ್ದಾರೆ! ಸಧ್ಯ ನನ್ನ ದೇವರು ಕಾಪಾಡಿದ." ಸಮಾಧಾನದ ಉಸಿರೆಳೆತ.

"ಬದುಕಿದ್ದಾರೆ........ಆದರೆ"

"ಆದರೆ?........"

"ಮರಳಿ ನಿಮ್ಮ ಬಳಿಗೆ ಬರಲಾರದವರಾಗಿದ್ದಾರೆ. ಬರಲೊಪ್ಪಲೂ ಒಲ್ಲರು. ನಿಮ್ಮ ಇರುವನ್ನೇ ಮರೆತು ಅಲ್ಲಿ ಅವರು ಪ್ರೇಮ ಲೀಲೆಯಲ್ಲಿ ತೊಡಗಿದ್ದಾರೆ ಯುದ್ಧ ಮುಗಿದಮೇಲೂ ಬರುವುದಿಲ್ಲವಂತೆ".

"ಆ!........" ಕಣ್ಣೀರು ಹರಿಯಿತು.

"ಯುದ್ಧದಲ್ಲಿ ಪೆಟ್ಟು ತಿಂದವರನ್ನು ಉಪಚರಿಸಲು ಹೆಂಗಸರನ್ನು ನೇಮಿಸಿರುತ್ತಾರೆ. ಏಕೆಂದರೆ ಅವರ ಮನಸ್ಸು ಮೃದು. ಮೃದು ಸ್ವಭಾವದ ಮದಗಜಗಮನೆಯರು ರೋಗಿಗಳನ್ನು ಮೃದು ರೀತಿಯಲ್ಲಿ ಉಪಚರಿಸುತ್ತಾರೆ. ಹಾಗೆ ಉಪಚರಿಸುವವರ ಪೈಕಿ ಒಬ್ಬಳು, ಬಲವಾಗಿ ಪೆಟ್ಟುತಿಂದು ಬಿದ್ದಿದ್ದ ನಿಮ್ಮವರನ್ನು ದೀರ್ಘಕಾಲ ಉಪಚರಿಸಿ ಅವರ ಮನಸ್ಸನ್ನು ಸೆಳೆದು ತನ್ನ ವಶಮಾಡಿಕೊಂಡಿದ್ದಾಳೆ. ಅವಳೊಡನೆ ಇವರ ಪ್ರೇಮಲೀಲೆಯು ಈಗ ಗುಪ್ತವಾಗಿ ನಡೆಯುತ್ತಿದ್ದರೂ ಮುಂದೆ ಹೊರಬೀಳುತ್ತದೆ"

"________"

"ಏನೆಂದು ಯೋಚಿಸುವಿರಿ? ಇಲ್ಲಿ ನಿಮ್ಮನ್ನು ಒಂಟಿಯಾಗಿ ಬಿಟ್ಟು ಹೋಗಿ, ನಿಮ್ಮ ಸುಖದುಃಖಗಳ ಕಡೆಗೆ ಲಕ್ಷ್ಯಕೊಡದೆ, ತಾನು ಸುಖದಲ್ಲಿ, ಪ್ರೇಮಲೀಲೆಗಳಲ್ಲಿ ಮಗ್ನನಾಗಿ ತನ್ನನ್ನೇ ನಂಬಿರುವ ಅಬಲೆಯನ್ನು ತಿರಸ್ಕರಿಸಿರುವ ಇವನು ಎಂತಹವನೆಂದು ಯೋಚಿಸುವಿರಾ? ಹೌದೇ? ಅಂತಹವನು ಕೃತಘ್ನನು, ಪಾಪಿಯು!"

ನೂರಳ ಕಣ್ಣುಗಳು ಮಿಂಚಿದವು. ಇವನಿಗೂ ಅದರ ಅರಿವಾಯಿತು. ಆಕೆಗೆ ಕಾಣದ ಒಂದು ಅಟ್ಟಹಾಸದ ಕಿರುನಗೆ ಈತನ ಮುಖದಮೇಲೆ ಸುಳಿದು ಸರಿಯಿತು.

* * *

"ಇನ್ನು ಮೇಲೆ ನನಗಿನ್ನಾರು ಗತಿ? ಅವರು ಮರಳಿ ಬರಲಾರರೇನು ? ಬರುವುದಿಲ್ಲವೇನು?........ಆ!........ಬರುವುದಿಲ್ಲವೇ?........ಅಯ್ಯೋ ವಿಧಿ! ........ನನಗೇಕೆ ಹೀಗೆ ಮೂಢತನ. ನಾನೇಕೆ ಅಳಬೇಕು. ಅವರು ಹೇಗೂ ಸುಖವಾಗಿದ್ದರೆ ಆಯಿತು. ಆದರೆ........ನನ್ನ ಸುಖ........ಅವರದೇ!........ ಅಲ್ಲವೇ?........ಹೌದು! ಆ!.... ...ಅವರೂ ಹೀಗೆಯೇ........ತಿಳಿಯಬಾರದೇಕೆ?........ಇಲ್ಲ! ಅವರು .......ಗಂಡಸರು........ಅವರಿಗೆ ಎಲ್ಲದರ ಹಕ್ಕು ........ಆ! ಹಕ್ಕು!........ಯಾತರದು?... ....ಹೆಂಡತಿಯ ಜೀವನ ಸುಖ

ವನ್ನು ನಾಶಪಡಿಸುವ ಹಕ್ಕು........ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು—ತಂದೆಯನ್ನು ನೋಡಬೇಕೆಂದು ತವಕದಿಂದ ಆಶಿಸುತ್ತಿರುವ ಮಗುವನ್ನು ನಿರಾಶೆಗೊಳಿಸುವ ಹಕ್ಕು........ಇದು ಹಕ್ಕೇ?........ಕೊಟ್ಟವರು ಯಾರು? ........ಹೆಂಡತಿಯ ಸುಖ ಹಾಳಾಗಲಿ........ಅವಳಗೊಡವೆ ಅವರಿಗೆ ಬೇಡ ........ಆದರೆ ಮಗುವನ್ನು—ಅರಿಯದ ಕಂದಮ್ಮನನ್ನು ಹಾಳುಮಾಡುವ ಹಕ್ಕು........ಇದನ್ನು ಸುಡಲಿ. ಅವರು—ಯಾರು ತಮ್ಮ ಮಗುವು ಮುಂದೆ ಬಂದು ಕೀರ್ತಿ ಸಂಪಾದಿಸಬೇಕೆಂದು ಆಸೆಪಟ್ಟು ಅದಕ್ಕೆ ಸರಿಯಾದ ಸಲಕರಣೆಗಳನ್ನು ಒದಗಿಸಬೇಕೋ—ಅವರೇ ತಮ್ಮ ಮಗುವಿನ ಜೀವನದ ಪ್ರಥಮಾಸೆಯನ್ನು--ಅಡಿಗಲ್ಲನ್ನು, ನಾಶಮಾಡುವ ಹಕ್ಕನ್ನು ತೆಗೆದುಕೊಂಡರೆ ........ಅದರಿಂದ ಅಡಿಗಲ್ಲು ಉರುಳಿ ಮುಂದಿನ ಜೀವನ ಕಟ್ಟಡವೇ ಭೂಗತವಾಗುವುದು........ಹೌದು! ಭೂಗತವಾಗುವುದು........ನನ್ನ ಮಗುವಿನ ಜೀವನ ಕಟ್ಟಡವು ಭೂಗತವಾಗುವುದು ನನಗೆ ಸಮ್ಮತವೇ........? ಆ ಮಗುವಿನ ಸುಖಕ್ಕೆ, ಅದರ ಪ್ರಥಮಾಶಾಪೂರ್ಣತೆಗೆ ನಾನು ನನ್ನ ಹಕ್ಕನ್ನು ಸಮತೆಯಿಂದ ಉಪಯೋಗಿಸಿಕೊಳ್ಳಲಾರನೇ?........ಉಪಯೋಗಿಸಿಕೊಳ್ಳಬಾರದೆ?........ಆದರೆ........ಆದರೇನು? ಅದರ ಸುಖಕ್ಕೆ, ಆ ಆಶಾಪೂರ್ಣತೆಗೆ ಮಾರ್ಗವನ್ನು ಹೇಗೆ ಸಾಧಿಸಲಿ?........ನಾನೂ........ಅವರಂತೆಯೇ! ........ಬೇಡ!........ಅಷ್ಟು ದೂರ ಬೇಡ........ಬೇಡದಿದ್ದರೆ ನನ್ನ ಮಗುವಿನ ಪ್ರಥಮಾಸೆ....ನನ್ನ ಉತ್ತರ, "ಇನ್ನು ಸ್ವಲ್ಪ ದಿವಸ"ದ ಪೂರ್ಣತೆ. ಇದು ಹೇಗೆ ಸಾಧ್ಯವಾಗುವುದು?........ಹಾಗಾದರೆ ನಾನು ನಿರ್ಧರಿಸಿದಂತೆಯೇ ಮಾಡಿಬಿಡಲೆ?........ನನ್ನ ಮಗುವಿಗೆ ಸುಳ್ಳನ್ನು ಹೇಳಿಬಿಡಲೆ? ........ಆದರೆ ಮನಸ್ಸಿನಲ್ಲಿ ಭಯ!........ಇನ್ನೂ ಯೋಚಿಸು ಎನ್ನುವುದು ........ಎಷ್ಟು ಯೋಚಿಸಲಿ? ಇದ್ದ ಒಂದು ಆಶ್ರಯವೇ ಹೀಗಾದಲ್ಲಿ ನಾನಿನ್ನೇನು ಮಾಡಲಿ?........ಹಾಗಾದರೆ ಇನ್ನೂ ಯೋಚಿಸಲೆ?........ಏನೆಂದು ಯೋಚಿಸಲಿ? ಏತಕ್ಕಾಗಿ?........ಅವರು ಮಾಡಿರುವುದು ಸರಿಯೆ ತಪ್ಪೆ ಎಂದೆ?........ಅಲ್ಲ!........ಮತ್ತೆ? ಮುಂದೇನು ಮಾಡಬೇಕೆಂದು! ಏನು

ಮಾಡುವುದು? ಇರುವುದು........ಸುಖವಾಗಿ ನಾನು ನನ್ನ ಮಗು........ ಮಗು........ಅದಕ್ಕೆ ಸುಖ........ಅದರ ಆಸೆ....ಆ ಆಶಾಪೂರ್ಣತೆ........ ಅಯ್ಯೋ, "ಇನ್ನು ಸ್ವಲ್ಪ ದಿವಸವು" ನನ್ನ ಮಗುವಿನ ಭಾಗಕ್ಕೆ ಈಗ ಎರಡು ಎರಡೂವರೆ ವರುಷಗಳಾದರೂ ಬರಲಿಲ್ಲವೇ?........ಇದುವರೆಗೆ ಆಶೆ ಯಾದರೂ ಇತ್ತು. ಇನ್ನು ಮುಂದೆ ಅದೂ ಇಲ್ಲದಾಯಿತೆ?........ಹಾಳಾಗಲಿ ಆ ಯೋಚನೆಯೇ ಬೇಡ!........ಹಾಗೆಂದೇ ನನ್ನ ಮಗುವಿಗೆ ಹೇಳಿಬಿಡಲೆ? ........ಬೇಡ! ಬೇಡ!........ನಿರ್ದಿಷ್ಟವಾದ ಒಂದು ತಿಂಡಿಯನ್ನು ಕೊಡು ತ್ತೇನೆ ಬಾಯಿ ತೆರೆ ಎಂದು ಹೇಳಿ ಮಣ್ಣು ಹಾಕಿದ ಹಾಗಾಗುವುದಿಲ್ಲವೇ? ಕೊಡುವೆನೆಂದು ಹೇಳಿದ್ದ ತಿಂಡಿಯು ಸಿಗದಿದ್ದರೆ, ಅದನ್ನು ದೊರಕಿಸಲು ಸಾಧ್ಯವಾಗದಿದ್ದರೆ, ಏನು ಮಾಡುವುದು? ಸಿಕ್ಕಿದ್ದನ್ನೇ ಕೊಟ್ಟು ಇದೇ ಅದು ಎಂದು ಹೇಳಿ ಅರಿಯದ ಕಂದನನ್ನು ಮರುಳುಗೊಳಿಸುವುದು..... ಹೌದು! ಹಾಗೆಯೇ ಮಾಡಬೇಕು ... ...ಹೌದೇ?........ಆ!........"

"ಅಪ್ಪ ಬರುವುದಾವಾಗಮ್ಮ?" ಆಟಮುಗಿಸಿ ಓಡಿಬಂದ ರಸೂಲನು ಯೋಚನಾತೊಟ್ಟಿಲಲ್ಲಿ ತೂಗಿಕೊಳ್ಳುತ್ತಿದ್ದ ತಾಯಿಯ ತೊಡೆಯಮೇಲೆ ಹೊರಳಿ, ಕೈಗಳಿಂದ ಗಲ್ಲವನ್ನು ಎತ್ತಿ ಕೇಳಿದನು.

"ನಾಳಿದ್ದು ಬಂದುಬಿಡುತ್ತಾರೆ ರಸೂಲ್" ಎಂದುಬಿಟ್ಟಳು ನೂರ್.

"ಹಾಗಾದರೆ ಖಂಡಿತವಾಗಿ ಬರುತ್ತಾರೇನಮ್ಮ!"

ನೂರಳು 'ಹೂ' ಗುಟ್ಟಿದಳು. ರಸೂಲನು ಸಂತೃಪ್ತನಾಗಿ ಅಲ್ಲಿಂದ ಓಡಿದ. "ಹಾಂ! ಈಗ ನಾನು ಹೇಳಿದ್ದೇನು?" ಎಂದುಕೊಂಡಳು ನೂರ್.

* * *

"ಹಾಗಾದಮೇಲೆ ಹಾಗೆಯೇ ಸರಿ!" ಸಂಶಯಾಂಕುರವಾಗಿದ್ದ ಹೃದ ಯವು ಕುದಿದು ನಿಷ್ಕರ್ಷಿಸಿತ್ತು. ಇನ್ನೂ ಯಾವ ಯಾವ ನಿಷ್ಕರ್ಷೆಗಳು ಕಾದಿವೆಯೋ ಅದೇ ಸಂಶಯಪೂರಿತವಾದ ಹೃದಯದಲ್ಲಿ! ಆಗುವುದೇನು? ಹಾಗೆ ನಿಷ್ಕರ್ಷಿಸಲು ಆಗುವುದೇನು? ಆಗಬಹುದೇನು? ಆಗಲಿ! ಹೌದು, ಹಾಗೆಂದಮೇಲೆ ಅದರ ಸಂಧಾನ?........ಅದೂ ಪೂರ್ಣವಾಯಿತು.

ಮಗು, ಮೂರೂವರೆ ವರುಷದ ರಸೂಲ್—ಕಂಡಿದ್ದರೂ ಇಂತಹವನೇ ತನ್ನ ತಂದೆ ಎಂದು ಅರಿಯಲು ಶಕ್ತಿಇಲ್ಲದಿದ್ದ, ಎರಡು ವರುಷಗಳಿಂದ ಎಡಬಿಡದೆ ಒಂದೇ ಪ್ರಶ್ನೆಯನ್ನು ಪುನಃ ಪುನಃ ಹಾಕಿ, ತನ್ನ ಈ ಆಸೆಯು ಹೃದಯ ಕಲಶದಲ್ಲಿ ತುಂಬಿತುಳುಕುತ್ತಿದೆ ಎಂದು ತೋರಿಸಿದ್ದ, ಇದೇ ತುಂಬಿತುಳುಕುವ ಆಸೆಯಿಂದ ತನ್ನ ತಾಯಿಯ ಮನಸ್ಸನ್ನು—ಆಕೆಯ ಸಂಶಯಪೂರಿತವಾದ ಮನಸ್ಸನ್ನು—ಕಲ್ಲುಮಾಡಿಸಿದ್ದ, ತನ್ನ ತಂದೆ ಇಂದು ಬಂದೇಬರುವನು; ತಾಯಿಯು ಖಂಡಿತವಾಗಿ ಹೇಳಿರುವಳು ಎಂದು ನಿರ್ಧರಿಸಿದ್ದ, ತನ್ನ ಎಷ್ಟೋ ದಿನಗಳ ಆಸೆಯು ಪೂರ್ಣವಾಗುವುದೆಂದು ಸಂತೋಷಾತಿರೇಕದಿಂದ ಇದ್ದ ರೂಸೂಲ್—ತನ್ನ ತಂದೆಯ ಪರಿಚಯವನ್ನು ತನ್ನ ತಾಯಿಯ ಮಾತಿನ ನಂಬಿಕೆಯಿಂದ ನಂಬಿ, ತನ್ನ ತಂದೆಯನ್ನು ಅಪ್ಪಿದನು. ಬದಲು ಅವನಿಗೆ ಒಂದು ಮಿಠಾಯಿಯ ಪೊಟ್ಟಣ ಕೈಗೆ ಬಂತು. ಅಷ್ಟೆ! ಅವನೂ ಅದರಲ್ಲೇ ಮಗ್ನನಾದನು. ಅರಿಯದ ಎಳೆಯಮನಸ್ಸಿಗೆ ತಂದೆಯಪ್ರೇಮವು ತಿಂಡಿಯರೂಪವನ್ನು ತಾಳಿತು.

ರಸೂಲನು ತಂದೆಯಿಂದ ಒಂದು ದಿನವೂ ಎತ್ತಿಸಿಕೊಳ್ಳಲಿಲ್ಲ. ತಾಯಿಯು ತನ್ನನ್ನು ಎತ್ತಿಕೊಂಡರೆ ಮುದ್ದಿಸಿದರೆ, "ಅದೇಕಮ್ಮ, ಅಪ್ಪ ನನ್ನನ್ನು ಎತ್ತಿಕೊಳ್ಳುವುದಿಲ್ಲ. ನನ್ನ ಮುಖ ಕಂಡಾಗಲೆಲ್ಲಾ ತಿಂಡಿಕೊಡುತ್ತಾರೆ ಅಷ್ಟೆ?" ಎಂದು ರಸೂಲ್ ಕೇಳುವನು.

ನೂರಳು ಮೌನ.

*　　　*　　　*

ಮಗುವನ್ನು ಸಮಾಧಾನಗೊಳಿಸಲು, ಅದರ ಆಸೆ ಪೂರ್ಣವಾಗಲು ಮಾಡಿದ ಸಂಧಾನವು ತನ್ನ ಜೀವಿತದ ನೈಜವಾದ ಸತ್ವತೆಗೆ ಭಂಗಬರುವುದೆಂದು ಅವಳು ಮೊದಲು ಯೋಚಿಸಿ ಅರಿಯಲಿಲ್ಲವೇ? ಏನು ಮಾಡಲಾದೀತು ಈಗ! ಬರಿಯಹೆಸರಿಗೆ, ಮಗುವಿಗೆ ಭ್ರಾಂತಿಗೊಳಿಸಲು ತಂದೆಯಂತೆ ನಟನೆ ಮಾಡಬೇಕಾಗಿದ್ದ ಅವನು ಹೇಗೆಯೋ ಸಂಚುಮಾಡಿ, ಹೆಜ್ಜೆಹೆಜ್ಜೆ ಮುಂಬರಿದು, ತನ್ನ ಈ ಸಂಧಾನದಿಂದ ಈ ರೀತಿ ತಿರುಗುವುದೆಂದು ತಿಳಿಯ

ದಿದ್ದ ನೂರಳ ಮನಸ್ಸನ್ನು ಬಿಗಿಹಿಡಿದು, ಅದು ಆಚೆಈಚೆ ಚಲಿಸಲು ಸಾಧ್ಯ ವಾಗದಿರುವಂತೆ ಆಗಲು, ಹೆಚ್ಚುಹೊತ್ತು ಆಕೆಯ ಜೊತೆಯಲ್ಲಿಯೇ ಇದ್ದು ಇದ್ದು ತನ್ನ ನಿರ್ದಿಷ್ಟ ಮನೋನಿಶ್ಚಯವನ್ನು ಸಂಪೂರ್ಣ ಸಫಲಗೊಳಿಸಿ ಕೊಂಡನು.

*　　　　*　　　　*

ಹೆಂಡತಿಯನ್ನು ಎಂದಿಗೆ ನೋಡೇನೆಂದು ಕಾತರನಾಗಿದ್ದ ಸುಲೇಮಾನನು ಹಿಂದಿರುಗಿ ಬಂದ. ಬಾಗಿಲಲ್ಲಿನ ಹೊರಜಗಲಿಯಮೇಲೆ ಮಿಠಾಯಿ ತಿನ್ನುತ್ತಿದ್ದ ರಸೂಲನನ್ನು, "ಬೇಟಾ ರಸೂಲ್" ಎಂದು ಎತ್ತಿ ಮುದ್ದಾಡಿದ. ಮಗುವು ಮಿಠಾಯಿಯನ್ನು ಅಲ್ಲೇ ಬಿಟ್ಟು, 'ಇವನಾರೆಂ'ದು ಆಶ್ಚರ್ಯಪಟ್ಟರೂ ಅವನ ಕೈಗಳಿಂದ ಬಿಡಿಸಿಕೊಳ್ಳಲು ಇಷ್ಟಪಡಲಿಲ್ಲ. ಸುಲೇಮಾನನ ಮುಖದ ಮೇಲಿನ ಮುಗುಳು ನಗೆಯನ್ನು ನೋಡಿ ರಸೂಲನು, ತನ್ನ ತಂದೆ ಇವನೇ ಎಂದು ತಿಳಿಯದಿದ್ದರೂ, ಬದಲು ನಗೆ ಸೂಸಿದನು. "ನೀನಾರು? ಅಪ್ಪನನ್ನು ನೋಡಬೇಕೆ? ಬಾ, ಒಳಗಿದ್ದಾರೆ" ಎಂದು ರಸೂಲ್ ಹೇಳಿದ. ಸುಲೇಮಾನನು ಒಳಗೆ ಬಂದ. ಅವರಿಬ್ಬರಿದ್ದುದರಿಂದ ಸುಲೇಮಾನನಿಗೆ ವಿಷಯಗಳು ಸಮಂಜಸವಾಗಿ ಅರ್ಥವಾದುವು. ಉದ್ಭವವಾದ ಕೋಪವನ್ನು ಹಿಡಿದು ನಿಲ್ಲಿಸಿ, "ಎಂಜಲುಹಣ್ಣನ್ನು ತಿನ್ನುವ ಅಭ್ಯಾಸ ಎಂದಿನಿಂದ" ಎಂದು ಅವನ ಸ್ನೇಹಿತನನ್ನು ಕೇಳಿದ! "ನನ್ನನ್ನು ಕ್ಷಮಿಸು" ಎನ್ನುವ ದೃಷ್ಟಿಯಿಂದ ಸುಲೇಮಾನನನ್ನು ನೋಡಿ ಅಲ್ಲಿಂದ ಅವನು ಕಾಲ್ಕಿಗೆದ. ಸುಲೇಮಾನನು ಅವನನ್ನು ತಡೆಯಲಿಲ್ಲ. ಸರಿಯಾಗಿ ನೂರಳನ್ನು ಈಕ್ಷಿಸಲೂ ಇಲ್ಲ! ಸುಮ್ಮನೆ ತನ್ನ ಕೊಠಡಿಯಕಡೆ ಸಾಗಿದನು. ನೂರಳು ಏನೂ ಮಾತನಾಡಲಾರದವಳಾಗಿ ಕಣ್ಣೀರಿಡುತ್ತಿದ್ದಳು. ರಸೂಲನು ತಾಯಿಯ ಬಳಿಗೆ ಬಂದು, "ಅಮ್ಮಾ, ಏಕಮ್ಮಾ ಅಳುತ್ತಿರುವೆ? ಈವಾಗ ಬಂದವರು ಯಾರಮ್ಮಾ? ನಮ್ಮ ತಂದೆ, ಇವರು ಬರಲು ಏಕೆ ಹೊರಟುಹೋದರಮ್ಮಾ! ನಮ್ಮ ತಂದೆಯವರಿಗಿಂತಲೂ ಇವರೇ ಒಳ್ಳೆಯವರಾಗಿ ಕಾಣುತ್ತಾರೆ! ಅಲ್ಲವೇ ನಮ್ಮಾ" ಎಂದು ಕೇಳಿದನು. ನೂರಳು ಕೊಂಚಹೊತ್ತು ಸುಮ್ಮನಿದ್ದು

"ಇವರೇ........ತಂದೆಯಪ್ಪ!........'' ಎಂದು ಗದ್ಗದಿತಳಾಗಿ ಮಗನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಅಪ್ಪಿ ಮುದ್ದಾಡಿದಳು. ಮಗುವಿಗೆ ಏನೂ ಅರ್ಥವಾಗಲಿಲ್ಲ. ತಾಯಿಯನ್ನೊಮ್ಮೆ ನೋಡಿ ಕೊಠಡಿಯ ಬಾಗಿಲಿನಿಂದ ಕಾಣಿಸುತ್ತಿದ್ದ ತಲೆಯಮೇಲೆ ಕೈಯಿಟ್ಟು ಕುಳಿತಿದ್ದ ಸುಲೇಮಾನನನ್ನು ದೃಷ್ಟಿಸಿನೋಡಿದನು.

* * *

ನನ್ನನ್ನು ಕ್ಷಮಿಸಿಬಿಡಿ! ನಾನು ಆತ್ಮಹತ್ಯವನ್ನು ಮಾಡಿಕೊಳ್ಳಲು ನಿಷ್ಕರ್ಷಿಸಲು ಕಾರಣಕರ್ತರಾರೋ ನಾನರಿಯೆ! ನನ್ನ ಈ ಆತ್ಮಹತ್ಯದಿಂದ ಯಾರೂ ಯಾವ ತೊಂದರೆಗೂ ಈಡಾಗಬಾರದು. ಅಲ್ಲದೆ ನಾನು, ನನ್ನ ಮತ್ತು ನನ್ನವರ ಸುಖಸಂತೋಷಗಳಿಗಾಗಿ ಈ ಕಾರ್ಯವನ್ನು ಮಾಡುತ್ತೇನೆ.

ನೂರ್.

ಈ ಪತ್ರವು ಶವದ ಬಳಿ ಸಿಕ್ಕಿತು! ಶವ ಪರೀಕ್ಷೆಯಾದನಂತರ ಅದನ್ನು ಎಲ್ಲಿ ಸೇರಿಸಬೇಕೋ ಅಲ್ಲಿ ಸೇರಿಸಿಯಾಯಿತು.

ಸುಲೇಮಾನನು ಕಾಗದವನ್ನು ನೋಡಿ, "ಅವಳ ಆತ್ಮಹತ್ಯೆಗೆ ನಾನು ಕಾರಣಕರ್ತನೆ?" ಎಂದುಕೊಂಡನು. ಅವನ ಸ್ನೇಹಿತನು, ''ನಾನು ಅವಳ ಆತ್ಮಹತ್ಯೆಗೆ ಕಾರಣಕರ್ತನೆ?" ಎಂದು ಯೋಚಿಸಿದನು. ಮಗು ರಸೂಲನು ಏನೆಂದು ಯೋಚಿಸಿದನು?